ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 31

ಡಿಸೆಂಬರ್ 30 2007

ರೂ. 5/-



ದತ್ತಜಯಂತಿ ಪರಂಪರೆಯ ವಿಕೃತಿ

ಛಲ ಬಿಡದ ಹೋರಾಟ ಫಲ ಪಡೆದ ಪಂಚಾಯತಿ ನೌಕರರು



ಪೇಜ್ 13



ರೈತರ ಮರ್ಡರ್ ಬ್ಯಾಂಕ್



ಪೇಜ್ 8


ಕರಾವಳಿಯ ಸಾಮಾಜಿಕ ಸ್ಥಿತ್ಯಂತರಗಳು



ಬುರುಡೆ ಬಿಟ್ಟ ಗುರೂಜಿ

ಇದ್ದದ್ದು ಇದ್ದಾಂಗ...

ಶೂದ್ರಾತಿ ಶೂದ್ರರು ಪೂಜೆ ಮಾಡಲಿ



'ವಿದೇಶ ಪ್ರವಾಸ ಮಾಡಿದ ಪುತ್ತಿಗೆ ಶ್ರೀಗಳಿಗೆ ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಪೂಜೆ ಮಾಡುವ ಅವಕಾಶ ಇಲ್ಲ ಎನ್ನುವ ವಾದ-ವಿವಾದ ನಡೆಯುತ್ತಿದೆ. ಇದನ್ನು ಪೇಜಾವರ ಶ್ರೀಗಳು ಸ್ವಲ್ಪ ಬದಲಿಸಿ, ಶೂದ್ರಾತಿಶೂದ್ರರು ಬೇಕಾದರೆ ಪೂಜೆ ಮಾಡಲಿ, ಅಮೇರಿಕಾ ಪ್ರವಾಸ ಮಾಡಿದವರಿಗೆ ಮಾತ್ರ ಅವಕಾಶ ಇಲ್ಲ ಎನ್ನುವುದನ್ನು ಹೇಳಬೇಕು. ಆಗ ಅಮೇರಿಕಾ ಹುಚ್ಚಾದರೂ ಕಡಿಮೆಯಾಗುತ್ತದೆ.......

.... 'ವೀರಶೈವ ಧರ್ಮ ಮಠಾಧೀಶರ ಕೈಯಲ್ಲಿ ಸಿಕ್ಕಿ ನಲುಗುತ್ತಿದೆ'

- ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ:ಯು.ಆರ್. ಅನಂತಮೂರ್ತಿ

★

ಅಮರಿಕಾಕ್ಕೆ ಎಚ್ಚರಿಕೆ


'ಇರಾಕ್ ಮೇಲೆ ದಾಳಿ ನಡೆಸಿದ್ದಕ್ಕೆ ಕ್ಷಮೆಯಾಚಿಸಬೇಕು' ಇರಾಕ್‌ನಲ್ಲಿರುವ ಸೇನೆಯನ್ನು ವಾಪಸ್ ಕರೆಸಿಕೊಳ್ಳಲು ಸಮಯ ನಿಗದಿಗೊಳಿಸಬೇಕು.

'ಅಂತ ರಾಷ್ಟ್ರೀಯ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಅಮೇರಿಕಾ ಮುಂದುವರಿಸಿದರೆ ತಕ್ಕ ಶಾಸ್ತಿ ಎದುರಿಸಬೇಕಾಗುತ್ತದೆ'

- ವ್ಲಾದಿಮಿರ್ ಪುಟಿನ್, ರಷ್ಯಾ ಅಧ್ಯಕ್ಷ

★

ಸ್ವಾಯತ್ತತೆ ಪರಿಹಾರ




ಕಾಶ್ಮೀರ ಕಣಿವೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ವರದಿಯಾಗುತ್ತಲೇ ಇದೆ. ಭಾರತದ ಜತೆ ವಿಲೀನಕ್ಕೆ ಒಪ್ಪಿಕೊಂಡ ನಿರ್ಧಾರ ಅದೆಷ್ಟು ನ್ಯಾಯಸಮ್ಮತ ಎನ್ನುವ ಅನಿಸಿಕೆ ಮೂಡಲು ಇಂತಹ ಘಟನೆಗಳು ಸ್ಥಳೀಯರಿಗೆ ನೆಪವಾಗುತ್ತವೆ. ಸದ್ಯಕ್ಕಂತೂ ಮಾತುಕತೆ ಪ್ರಕ್ರಿಯೆ ನಿಧಾನಗೊಂಡಿದೆ. ಅರವತ್ತು ವರ್ಷಗಳ ಹಿಂದಿನ ಸ್ವಾಯತ್ತತೆ ಮರಳಿಸುವ ಮೂಲಕವೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

- ಕುಲದೀಪ್ ನಯ್ಯರ್, ಪ್ರಜಾವಾಣಿ 'ಅಂತರಂಗ' ಅಂಕಣದಲ್ಲಿ

★

ಶ್ರೇಷ್ಠತೆ.... ಅಪವಿತ್ರತೆ

ಇದೊಂದು ವೈಚಾರಿಕ ಸಂವಾದ, ವೈಚಾರಿಕ ಭಿನ್ನಾಭಿಪ್ರಾಯವಿದೆ. ಆದರೆ ಸತ್ವಯುತ ವಿಚಾರಗಳೇ ಚರ್ಚೆಯಲ್ಲಿವೆ. ದೇಶ ವಿದೇಶಗಳ ಮಣ್ಣಿನ ಬಗ್ಗೆಯೂ ಚಿಂತನೆ ನಡೆಯುತ್ತಿದೆ. ಇಲ್ಲಿಯವರಿಗೆ ಭಾರತ ಶ್ರೇಷ್ಠವಾದರೆ, ಅಲ್ಲಿಯವರಿಗೆ ಅವರ ದೇಶ ಮುಖ್ಯ. ಸೃಷ್ಟಿಕರ್ತನ ದೃಷ್ಟಿ ಅವರ ದೇಶ ಮುಖ್ಯ. ಸೃಷ್ಟಿಕರ್ತನ ದೃಷ್ಟಿಯಲ್ಲಿ ಇಡೀ ಭೂಮಿಯೇ ಪವಿತ್ರ. ಸರ್ವಶ್ರೇಷ್ಠ. ವಿಮಾನದಲ್ಲಿ ಸಮುದ್ರ ದಾಟಿದ ಮಾತ್ರಕ್ಕೆ ಅಪವಿತ್ರ ಎಂಬುದನ್ನು ತಾವು ಒಪ್ಪುವುದಿಲ್ಲ.



- ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ


ಚುಚ್ಚುಮದ್ದು

■ "ಹಿಂದೂ ಎಂದೂ ಎಂದೂ ಅನ್ಯ ಧರ್ಮಿಯರನ್ನು ಕೆಟ್ಟ ದೃಷ್ಟಿಯಿಂದ ನೋಡಿದವರಲ್ಲ, ಆದರೆ ನಮ್ಮ ಉದಾರತೆಯನ್ನೇ ತಪ್ಪಾಗಿ ಭಾವಿಸಲಾಗಿದೆ. ಹೀಗಾಗಿ ಮೇಲಿಂದ ಮೇಲೆ ಹಿಂದೂಗಳ ಮೇಲೆ ಆಕ್ರಮಣ ನಡೆದಿದೆ......

ನಾನು ಗಾಂಧಿವಾದಿಯಾದರೂ ಗಾಂಧಿ ತತ್ವವನ್ನು ಪಾಲಿಸಲಾರೆ"

-ಶತಾಯುಷಿ ವೇದಿ ವಿದ್ವಾಂಸ ಪಂಡಿತ ಸುಧಾಕರ ಚತುರ್ವೇದಿ

▶ ಆಹಾ! ಚೆನ್ನಾಗಿದೆ. ಗಾಂಧಿವಾದ ಅನ್ನೋ ಚೆಡ್ಡಿವಾದ



★

■ "ದತ್ತ ಪೀಠ ಹಿಂದೂಗಳದ್ದು"

- ಚಿದಾನಂದ ಮೂರ್ತಿ


▶ ಸಂಘ ಪರಿವಾರದ ಪಾಠ ಒಪ್ಪಿಸುವುದು ಒಂದು ಸಂಶೋಧನೆಯೇ?

★

■ "ಒಂದು ವೇಳೆ ಬಿಜೆಪಿ ಬಾಗಿಲು ಬಂದ್ ಆದರೆ, ಸಮಾಜವಾದಿ ಪಾರ್ಟಿ, ಬಿಎಸ್‌ಪಿ ಮೊದಲಾದ ಪಕ್ಷಗಳ ಜೊತೆಗೆ ಹೊಂದಾಣಿಕೆಗೆ ಯತ್ನಿಸಲಾಗುವುದು. ಅಲ್ಲದೇ ಪ್ರಕಾಶ್ ಹಾಗೂ ಸಿದ್ದರಾಮಯ್ಯನವರೇನಾದರೂ ಬಂದರೆ ಆ ಬಗ್ಗೆಯೂ ನಮಗೆ ಒಲವಿದೆ. ಏನೇನಾಗುತ್ತದೆ ನೋಡೋಣ. ಚುನಾವಣೆ ಸಮೀಪಿಸುವವರೆಗೆ ಏನೇನೂ ಹೇಳಲಾಗದು"

- ಜೆ.ಸಿ.ಮಾಧುಸ್ವಾಮಿ, ಜೆಡಿ(ಯು) ಮುಖಂಡ

▶ ಏನು ಸ್ವಾಮಿ? ಏನು ನಿಮ್ಮ ಅವಸ್ಥೆ: ನಿಮಗೊಂದು ತತ್ವ ಸಿದ್ಧಾಂತ ನೀತಿ ಅಂತೇನೂ ಇಲ್ವಾ?. ಇದ್ದನ್ನೆಲ್ಲಾ ಭೂತದ ಬಾಯಿಗಿಟ್ಟ ಮೇಲೂ ಬುದ್ದಿ ಬೇಡ್ವೆ.




★

■ ಭಾರತದ ಅಣು ವಿದ್ಯುತ್ ಕ್ಷೇತ್ರ ಪ್ರಗತಿ ಕಾಣಬೇಕಾದರೆ ಅಮೇರಿಕಾದ ಜತೆಗೆ ಈಗ ಮಾಡಿಕೊಂಡಿರುವ ಒಪ್ಪಂದ ಮುಂದುವರಿಯಲೇಬೇಕು. ಆದರೆ 'ಹೈಡ್' ಒಪ್ಪಂದ ಭಾರತದ ಭದ್ರತೆ ಮತ್ತು ಸ್ವತಂತ್ರ ವಿದೇಶಾಂಗ ನೀತಿಗೆ ಧಕ್ಕೆ ತರುವ ವಿಚಾರ ಹೌದು. ಅಮೇರಿಕಾದ 1954ರ ಪರಮಾಣು ಕಾಯ್ದೆಯ 123ನೇ ಸೆಕ್ಷನ್‌ನ ಪ್ರಕಾರ ಅಂತರರಾಷ್ಟ್ರೀಯ ಸಹಕಾರಕ್ಕೆ ಅವಕಾಶ ಇದೆ. ಆದರೆ ಇದಕ್ಕೆ ಹೆನ್ರಿ ಹೈಡ್ ಎಂಬಾತ ತಂದ ಕೆಲವು ನಿಬಂಧನೆಗಳೂ ಇರುತ್ತವೆ. ಇದೇ 'ಹೈಡ್' ಒಪ್ಪಂದ. ಭಾರತ ಮತ್ತೊಮ್ಮೆ ಪರಮಾಣು ಪರೀಕ್ಷೆ ನಡೆಸಿದರೆ ಇಡೀ ಒಪ್ಪಂದ ಮುರಿದುಬಿದ್ದು, ಇದುವರೆಗೆ ಭಾರತಕ್ಕೆ ನೀಡಿದ ಇಂಧನವನ್ನು ವಾಪಸ್ ತೆಗೆದುಕೊಳ್ಳುವ ಅವಕಾಶ ಅಮೇರಿಕಾಕ್ಕೆ ಇರುತ್ತದೆ. ಇದು ದೇಶದ ಪಾಲಿಗೆ ತೀರಾ ಕಳವಳದ ವಿಚಾರ. ಆದರೆ ಭಾರತವು ಚೀನಾದಂತೆ ಅಮೇರಿಕಾಕ್ಕೆ ಸೆಡ್ಡು ಹೊಡೆಯುವ ರಾಷ್ಟ್ರವಾಗಿ ಹೊರ ಹೊಮ್ಮಿದರೆ ಅಮೇರಿಕಾದ ಒತ್ತಡಕ್ಕೆ ಮಣಿಯುವ ಪ್ರಮೇಯ ಬರುವುದಿಲ್ಲ"

ಅಣು ವಿಜ್ಞಾನಿ ಹಾಗೂ ಅಣುಶಕ್ತಿ ಆಯೋಗದ ನಿವೃತ್ತ ಅಧ್ಯಕ್ಷ ಡಾ.ಎಂ.ಆರ್.ಶ್ರೀನಿವಾಸನ್

▶ ಯಾಕೆ ದ್ವಂದ್ವ! ಹಲವು ಸತ್ಯ ವಿಚಾರ ಗೊತ್ತಿದ್ದೂ ಒಪ್ಪಂದ ಬೇಕೂ ಅಂತಿರಲ್ಲ ಸಾರ್!

ಹಿಂದೆ 1980ರ ದಶಕದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಧಾರವಾಡ ಜಿಲ್ಲಾ ಸಮಿತಿ ಸದಸ್ಯರಾಗಿದ್ದ, ಡಿಸೆಂಬರ್ 7, 2007 ರಂದು ನಿಧನರಾದ ಹೋರಾಟಗಾರ ಸಂಗಾತಿ ಎಸ್.ಎಫ್.ಕ್ಯಾದಗಿ



ಸಂಪಾದಕೀಯ

ರೈತರ 'ಗೋಣಿಗೆ ನೇಣು'

ಇದು ಆಘಾತಕರ ಸುದ್ದಿ. ಸಾಲ ನೀಡಿದ ಖಾಸಗಿ ಬ್ಯಾಂಕ್‌ನ ಒತ್ತಡ-ಹಿಂಸೆಗೆ ಹೌಹಾರಿ ರೈತನೊಬ್ಬ ಪ್ರಾಣ ಕಳೆದುಕೊಂಡ ಧಾರುಣ ಘಟನೆ ಚಾಮರಾಜನಗರ ಜಿಲ್ಲೆಯಲ್ಲಿ ನಡೆದಿದೆ. ಈ ಘಟನೆಯ ಕೆಲವೇ ದಿನಗಳ ಹಿಂದೆ ಮೈಸೂರಿನ ನಂಜನಗೂಡಿನ ರೈತನು ಇದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದು ಸಮಸ್ಯೆಯ ಗಂಭೀರತೆಯನ್ನು ಎತ್ತಿ ತೋರಿಸುತ್ತಿದೆ. ಈ ಇಬ್ಬರು ರೈತರು ಸಾಲ ಪಡೆದಿದ್ದು. 'ಐಸಿಐಸಿಐ' ಎಂಬ ಖಾಸಗಿ ಬ್ಯಾಂಕ್‌ನಿಂದ ಅದು ಕೃಷಿಯ ಸಾಲ. ವರ್ಷವಿನ್ನೂ ಪೂರೈಸದೇ ಇರುವಾಗಲೇ ಸಾಲ ವಸೂಲಾತಿಗೆ ಬೆನ್ನುಹತ್ತಿದ ಬ್ಯಾಂಕ್‌ನ ಬೇತಾಳಗಳ ದಬಾವಣೆಯಿಂದಾಗಿ ಇಬ್ಬರೂ ಪ್ರಾಣ ಕಳೆದುಕೊಂಡಿದ್ದಾರೆ. ಘಟನೆಗಳು ಪ್ರತ್ಯೇಕವಾದರೂ ಪರಿಣಾಮ ಮಾತ್ರ ಒಂದೇ...

ಚಾಮರಾಜನಗರದ ಹರವೆ ಗ್ರಾಮದ ರೈತ ಹೆಚ್.ಸಿ. ಸಿದ್ದರಾಜು(34) ಮೈಸೂರಿನ ಕಾಳಿದಾಸ ರಸ್ತೆಯ ಐಸಿಐಸಿಐ ಬ್ಯಾಂಕ್‌ನಲ್ಲಿ ಟ್ರಾಕ್ಟರ್ ಕೊಳ್ಳಲು 4.97 ಲಕ್ಷ ರೂಪಾಯಿಗಳ ಸಾಲ ಪಡೆದಿದ್ದ. ಇಲ್ಲಿಂದ ಎಂಟು ತಿಂಗಳ ಹಿಂದೆ. ಟ್ರಾಕ್ಟರ್ ಇಂಜನ್ ಮತ್ತೆ ನೀಡಲಾಗಿದ್ದು ಟ್ರೈಲರ್ ಇನ್ನೂ ದೊರೆತಿಲ್ಲ. ಹಲವು ಬಾರಿ ಕೇಳಿದರೂ ಸಿಕ್ಕಿಲ್ಲ. ದುಡಿಮೆಗೆ ತೊಡಗದೇ ಮನೆ ಮುಂದೆ ಟ್ರಾಕ್ಟರ್ ನಿಂತು ಆದಾಯವೂ ಬರದೇ ರೈತ ಕಂಗಾಲಾಗಿರುವಾಗಲೇ ಬ್ಯಾಂಕ್ ನೀಡಿದ ಎಂಟು ನೋಟೀಸ್‌ಗಳ ಹಾಗೂ ಬ್ಯಾಂಕ್‌ನ ಸತತ ಕಿರುಕುಳದಿಂದ ಜರ್ಝರಿತನಾಗಿ, ಮಾನ ಹೋಗುವ ಭಯದಿಂದ ಆತ್ಮಹತ್ಯೆ ಮಾಡಿಕೊಂಡ ಘಟನೆ ಖಾಸಗಿ ಬ್ಯಾಂಕ್‌ಗಳ ದೌರ್ಜನ್ಯದ ಪರಿಗೆ ಹಿಡಿದ ಕನ್ನಡಿ.

ಉದಾರೀಕರಣ-ಜಾಗತೀಕರಣದ ಫಲವಾಗಿ ಸೃಷ್ಟಿಗೊಂಡಿರುವ ಕಾರ್ಷಿಕ ಬಿಕ್ಕಟ್ಟಿನಿಂದಾಗಿ ನೇಣಿಗೆ ಕೊರಳೊಡ್ಡುವ, ಆತ್ಮಹತ್ಯೆಗೀಡಾಗುವ ಬಹುತೇಕ ರೈತರ ಪ್ರಶ್ನೆ ಸಾಲದ ಬಾಧೆಯೇ ಆಗಿದೆ. ಬೆಳೆದ ಫಸಲಿಗೆ ಸೂಕ್ತವಾದ ಬೆಂಬಲಿತ ಬೆಲೆಯೂ ಸಿಗದೇ, ಜೀವನ-ಕೃಷಿ ನಿರ್ವಹಣೆಯೇ ಅಸಾಧ್ಯವಾಗಿ ಹೋಗಿದೆ. ಕೃಷಿಕರ ನೆರವಿಗೆ ಸರ್ಕಾರಗಳು ಕಿಂಚಿತ್ತೂ ಬರುತ್ತಿಲ್ಲ, ಪರಿಸ್ಥಿತಿಯು ಇನ್ನಷ್ಟು ಘೋರವಾಗುವಂತಹ ನೀತಿಗಳನ್ನೇ ನಿರಂತರವಾಗಿ ಅನುಸರಿಸಲಾಗುತ್ತಿದೆ. ಸರ್ಕಾರಿ ಸ್ವಾಮ್ಯದ (ಸಾರ್ವಜನಿಕ ವಲಯದ) ಬ್ಯಾಂಕ್‌ಗಳು ರೈತರಿಗೆ ಸಾಲ ನೀಡುತ್ತಿಲ್ಲ ನೀಡಬಾರದು ಎಂಬು ಅವರ ನೀತಿ. ಅನಿವಾರ್ಯವಾಗಿ ರೈತರು ಖಾಸಗೀ ಲೇವಾದೇವಿಗಾರರ ಮತ್ತು ಖಾಸಗಿ ಬ್ಯಾಂಕ್‌ಗಳಿಗೆ ಮೊರೆ ಹೋಗುತ್ತಿದ್ದಾರೆ. ಅವುಗಳು ಬೀಸುವ ಬಲೆಗೆ ಬೀಳುವ ಅನಿವಾರ್ಯತೆ ಸೃಷ್ಟಿಯಾಗಿದೆ. ಇಂತಹ ಖಾಸಗಿ ಬ್ಯಾಂಕ್‌ಗಳು ಆರಂಭದಲ್ಲಿ ಸುಲಭ ಬಡ್ಡಿ, ಕಂತುಗಳಲ್ಲಿ ಸಾಲ ನೀಡುವುದಾಗಿಯೇ ಮಾತನಾಡುತ್ತವೆ. ಇದಕ್ಕೆ ಏಜೆಂಟರ ದೊಡ್ಡ ಜಾಲವೇ ಇದೆ. ಆದರೆ ದಿನಗಳೆದಂತೆ ವಸೂಲಾತಿಗೆ ಕ್ರೌರ್ಯದಿಂದ ವರ್ತಿಸುತ್ತವೆ.

ಮೈಸೂರು-ಚಾಮರಾಜನಗರದ ಘಟನೆಗಳಿಗೆ ಕಾರಣವಾಗಿರುವ ಐಸಿಐಸಿಐ ಬ್ಯಾಂಕ್‌ನದು ಕುಖ್ಯಾತಿಯ ಇತಿಹಾಸವೇ. ಕೆಲವು ತಿಂಗಳ ಹಿಂದೆ ಬೆಂಗಳೂರಿನ ಗ್ರಾಹಕರಿಂದ ಸಾಲ ವಸೂಲಾತಿಗೆಂದು ಗೂಂಡಾಗಳನ್ನು ಬಳಸಿ ಧಾಳಿ ನಡೆಸಿತ್ತು. ಇಲ್ಲಿ ಮಾತ್ರವಲ್ಲ ದೇಶದ ಹಲವಾರು ಕಡೆ ಇಂತಹ ಗೂಂಡಾಗಳ ಬಳಕೆಯನ್ನು ಎಗ್ಗಿಲ್ಲದೇ ಈ ಬ್ಯಾಂಕ್ ಮಾಡಿದೆ. ಇಂತಹ ಪ್ರಕರಣಗಳು ರಿಸರ್ವ್ ಬ್ಯಾಂಕ್ ಹಾಗೂ ಸರ್ಕಾರದ ಗಮನಕ್ಕೂ ಬಂದಿವೆ. ಬಳಿಕ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾವು ಐಸಿಐಸಿಐ ಬ್ಯಾಂಕ್ ಹಾಗೂ ಅದರ ಅಧ್ಯಕ್ಷರಿಗೆ ಛೀಮಾರಿ(ಸೆನ್ಸೂರ್) ಹಾಕಿತಲ್ಲದೇ 50 ಲಕ್ಷ ರೂಪಾಯಿಗಳ ದಂಡವನ್ನು ವಿಧಿಸಿತ್ತು. ಗೂಂಡಾಗಳನ್ನು ಬಳಸದಂತೆ ತಾಕೀತು ಮಾಡಿತ್ತು. ಆದರೆ ಇವ್ಯಾವುಗಳನ್ನು ಲೆಕ್ಕಿಸದೆ ತನ್ನ ಹಳೇ ವರ್ತನೆ ಯನ್ನೇ ಮುಂದುವರಿಸಿರುವುದು ಖಾಸಗಿ ಬ್ಯಾಂಕ್‌ಗಳ ಸೊಕ್ಕು ಎನ್ನಬೇಕಾಗುತ್ತದೆ. ಇನ್ನೊಂದೆಡೆ ಸರ್ಕಾರ ದೌರ್ಬಲ್ಯವೂ ಕಾಣುತ್ತದೆ.


ಇಂತಹ ಬ್ಯಾಂಕ್‌ಗಳು ನಾಯಿಕೊಡೆಗಳಂತೆ ತಲೆ ಎತ್ತಲು ಅನುಮತಿ ನೀಡಿದ್ದೇ ಕೇಂದ್ರ ಸರ್ಕಾರ. ಅದಕ್ಕೆ ಉದಾರೀಕರಣ ನೀತಿಯ ಆಧಾರ. ಇಷ್ಟು ಸಾಲದು ಎಂದು ಖಾಸಗಿ ಬ್ಯಾಂಕ್‌ಗಳ ಅಂದಾದುಂಧಿ ವ್ಯವಹಾರಕ್ಕೆ ರಕ್ಷಣೆಯಾಗಿ 'ಸೆಕ್ಯುರಿಟೀಸ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟ್ರೆಸ್ಟ್ ಆ್ಯಕ್ಟ್ (SUR FASI ACT 2002) ನ್ನು ಅಂಗೀಕರಿಸಿದೆ. ಇದರಂತೆ ಸಾಲ ನೀಡಿದ ಬ್ಯಾಂಕ್‌ಗಳು ಸಾಲ ವಸೂಲಿಗಾಗಿ ಆಸ್ತಿ ವಶಪಡಿಸಿಕೊಳ್ಳುವ, ಹರಾಜು ಹಾಕುವ ಹಾಗೂ ಸಾಂಸ್ಥಿಕ ಸಾಲವಾದರೆ ಸಂಸ್ಥೆಯ ಆಡಳಿತವನ್ನೇ ನಿಯಂತ್ರಿಸುವ ಗರಿಷ್ಠ ಅಧಿಕಾರ ವನ್ನು ಪಡೆದಿವೆ. ಇದನ್ನು ತಮಗೆ ಬೇಕಾದಂತೆ ಜಾರಿ ಮಾಡುವ ಬ್ಯಾಂಕ್‌ಗಳು 'ಗೂಂಡಾ' ಗಳನ್ನಿಟ್ಟು ಗೂಂಡಾಗಿರಿಯನ್ನೇ ಪ್ರಧಾನ ವಿಧಾನವನ್ನಾಗಿ ಬಳಸುತ್ತಿವೆ. ಆದರೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ 3 ನೋಟೀಸ್ ನೀಡಿದ ನಂತರ ನ್ಯಾಯಾಲಯಕ್ಕೆ ಹೋಗುವ, ಕಂತುಗಳಂತೆ ವಸೂಲು ಮಾಡಬಹುದಾ, ಇಲ್ಲವೇ ಒಂದೇ ಬಾರಿಗೆ ಚುಕ್ತಾ ಮಾಡಿಕೊಳ್ಳುವ ವ್ಯವಸ್ಥೆ ಇರುವುದನ್ನು ನೋಡಿದರೆ ಇದಕ್ಕೆ ವ್ಯತಿರಿಕ್ತವಾಗಿ ಖಾಸಗಿ ಬ್ಯಾಂಕ್‌ಗಳನ್ನು ಎಷ್ಟು ಕೊಬ್ಬಿಸಲಾಗಿದೆ ಎಂಬುದು ತಿಳಿಯುತ್ತದೆ.

'ಸರ್‌ಫಾಸಿ' ಎಂದರೆ 'ಗೋಣಿಗೆ ನೇಣು' (ಹಿಂದಿಯಲ್ಲಿ). ಇಂತಹ ಕ್ರೂರ ಕಾಯ್ದೆ ತಂದದ್ದೇ 'ಖ್ಯಾತ' ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರ ಎನ್.ಡಿ.ಎ. ಸರ್ಕಾರ. ಹೀಗಿರುವಾಗ ಯಡಿಯೂರಪ್ಪನವರು ರೈತರ ಬಗೆಗಿನ ಕಾಳಜಿ ತೋರಿಸುವುದಕ್ಕೆ ಅರ್ಥವೇನಿದೆ? ಮೈಸೂರು -ಚಾಮರಾಜನಗರದಲ್ಲಿನ ಘಟನೆಗಳು ಆಳುವವರ ಕಣ್ಣು ತೆರೆಸಬಹುದೆಂದು ನಿರೀಕ್ಷಿಸಿದರೆ ತಪ್ಪಾದೀತು. ಆದರೆ ಇಂತಹ ಕ್ರೌರ್ಯದ ವಿರುದ್ಧ ಎರಡು ಘಟನೆಗಳಲ್ಲಿಯೂ ಅಲ್ಲಿನ ರೈತರು ಪ್ರತಿಘಟನೆಗೆ ಇಳಿದಿದ್ದಾರೆ. ನಂಜನಗೂಡಿನ ರೈತ ಕುಟುಂಬಕ್ಕೆ ನ್ಯಾಯ ದೊರಕಿಸುವಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಶ್ಲಾಘನೀಯ ಕೆಲಸ ಮಾಡಿದೆ. ಇದರ ಸ್ಫೂರ್ತಿಯಿಂದಲೇ ಹರವೆಯಲ್ಲಿಯೂ ಮೃತ ರೈತನ ಶವಸಂಸ್ಕಾರ ಮಾಡದೇ ಚಳುವಳಿಗೆ ಇಳಿದಿದ್ದಾರೆ. ಐಸಿಐಸಿಐ ಬ್ಯಾಂಕ್ ಇತ್ಯರ್ಥಕ್ಕೆ ಬರದೇ ಕದಲುವುದಿಲ್ಲ ಎಂದೂ ಪಟ್ಟು ಹಿಡಿದಿದ್ದಾರೆ.

ಇಷ್ಟೆಲ್ಲಾ ನಡೆದರೂ ಈ ಧಾರುಣತೆಯ ಸ್ಪಂದಿಸುವ ಬಗ್ಗೆ ಮಾತನಾಡುವ ಸರ್ಕಾರವಿಲ್ಲ, ರಾಜ್ಯಪಾಲರಿಗಂತೂ ಇವನು ಇಲ್ಲ. ಹಾಗೇ ಬಿಜೆಪಿ, ಕಾಂಗ್ರೆಸ್ ಮುಖಂಡರಿಗೂ ಅವರದ್ದೆ ಚಿಂತೆ. ಇಂದು ಬೇಕಾಗಿರುವುದು ಸತ್ತ ಮೇಲೆ ಪರಿಹಾರ ನೀಡುವುದಲ್ಲ. ನೋಡಲು ಬಿಡುವೇ ಅಂತಹ ಸ್ಥಿತಿಯೇ ಬಾರದಂತ ರೈತರನ್ನು ಕಾರ್ಷಿಕ ರಂಗವನ್ನು ರಕ್ಷಿಸುವುದಾಗಬೇಕು.

ಮೈಸೂರಿನಲ್ಲಾದಂತೆ ಹಿಂದೆ ರಾಜ್ಯದ ಗುಲ್ಬರ್ಗಾ ಹಾಗೂ ಕೆಲವೆಡೆ ಇಂತಹ ಆಂದೋಲನಗಳು ನಡೆದು ಯಶಸ್ವಿಯಾದ ಅನುಭವ ಇದೆ. ಇಂದಿನ ಸ್ಥಿತಿ-ನೀತಿಗಳ ಬದಲಾವಣೆಗೆ ಒತ್ತಾಯಿಸುವ ಒಂದು ಐಕ್ಯ ಚಳುವಳಿಗೆ ಹೊಸ ಸಾಧ್ಯತೆಗಳನ್ನು ಈ ಘಟನೆಗಳು ತೆರೆದಿವೆ. ○

ದತ್ತಜಯಂತಿ ಪರಂಪರೆಗೆ ವಿಕೃತಿ



ಕೆಲವು ನಿಬಂಧನೆಗಳ ನಡುವೆ ದತ್ತಜಯಂತಿ ಆಚರಣೆಗೆ ಅನುಮತಿಯನ್ನು ರಾಜ್ಯಪಾಲರು ನೀಡಿದ್ದಾರೆಂದು ಮಾಜಿ ಶಾಸಕ ಸಿ.ಟಿ.ರವಿ ಹೇಳುವುದರೊಂದಿಗೆ ಸಿದ್ಧತೆಗಳು ಇನ್ನೂ ತೀವ್ರಗೊಂಡವು. ಕೋಮು ಸಾಮರಸ್ಯದ ಕೇಂದ್ರವಾಗಿರುವ, ಸೂಫಿ-ಸಂತರ ಪರಂಪರೆಯ ಸೌಹಾರ್ದತೆಯ ಶ್ರದ್ಧಾ ಕೇಂದ್ರವಾಗಿರುವ ಬಾಬಾಬುಡನ್‌ಗಿರಿಯ 'ದರ್ಗಾಪೀಠ' ದ ವಿಶಿಷ್ಟ ಸಮನ್ವಯದ ಸಂಸ್ಕೃತಿಯನ್ನು ನಾಶಮಾಡಿ, ವೈಧಿಕ ಆಚರಣೆ ತರುವ ಸಂಘ ಪರಿವಾರದ ಪ್ರಯತ್ನಗಳು ಈ ವರುಷವೂ ನಡೆದಿವೆ. ಸಿ.ಟಿ.ರವಿಯ ಹೇಳಿಕೆಗೆ ಮಾನ್ಯ



ರಾಜ್ಯಪಾಲರು ಹೌದು ಎನ್ನಲಿಲ್ಲ ಇಲ್ಲವೆಂದೂ ಹೇಳದಿರುವುದು ಸಂಘಪರಿವಾರದ ಆಟಾಟೋಪವನ್ನು ಹೆಚ್ಚಿಸಲು ಕುಮ್ಮಕ್ಕು ನೀಡಿದಂತಾಗಿದೆ. ಇಂತಹ ಗಂಭೀರ ಸಮಸ್ಯೆಯನ್ನು ಕೇವಲ ಆಡಳಿತಾತ್ಮಕವಾಗಿ ನಿಭಾಯಿಸಬಹುದು ಎಂದು ರಾಜ್ಯಪಾಲರು ಭಾವಿಸಿದಂತಿದೆ.

ಎಲ್ಲಿ ಆಧಾರ?

ನಿರ್ಬಂಧಿತ ಆಚರಣೆ ಎಂದರೆ ಏನೆಂದು ಸ್ಪಷ್ಟನೆ ನೀಡಿಲ್ಲ. ಈಗ ತಿಳಿದಿರುವಂತೆ ಗುಹೆಯಲ್ಲಿ ಮತ್ತು ಅದರ ಬಳಿ ಹವನ-ಹೋಮಗಳಿಗೆ ಅವಕಾಶವಿಲ್ಲ. ದತ್ತ ವಿಗ್ರಹವಿರಿಸಿ ಪೂಜೆ ಸಲ್ಲಿಸುವಂತಿಲ್ಲ. ಆದರೆ ಶೋಭಾಯಾತ್ರೆ, ದರ್ಗಾಪೀಠ ದರ್ಶನ-ಪೂಜೆಗೆ ಅವಕಾಶವಿದೆಯೆಂದು ಹೇಳಲಾಗಿದೆ. ದತ್ತ ಜಯಂತಿಯಾಗಲಿ, ಶೋಭಾಯಾತ್ರೆ ನಡೆಸಲು ಅವಕಾಶ ನೀಡುವುದು ಯಾವ ಆಧಾರದ ಮೇಲೆ ಎಂದು ಪ್ರಶ್ನಿಸಬೇಕಾಗುತ್ತದೆ. ಇದು ಪರಂಪರಾನುಗತ ಆಚರಣೆಯಲ್ಲಾಗಲೀ. ನ್ಯಾಯಾಲಯದ ತೀರ್ಪಿನಲ್ಲಾಗಲೀ ಹಿಂದಿನ ದಾಖಲೆಗಳಲ್ಲೆಲ್ಲಾ ಇಲ್ಲವೇ ಇಲ್ಲ. ಧಾರ್ಮಿಕ ದತ್ತಿ ಆಯುಕ್ತರು ನ್ಯಾಯಾಲಯದ ನಿರ್ದೇಶನದಂತೆ ಮಾಡಿದ ಪಟ್ಟಿಯಲ್ಲಿ ಇಂತಹ ಆಚರಣೆಗಳೇ ಇಲ್ಲ. ಹೀಗಿರುವಾಗ ಈಗ ಅವಕಾಶ ಕಲ್ಪಿಸಿರುವುದಕ್ಕೆ ಏನು ಆಧಾರ?


ಕೃಷ್ಣ

ವಿಕೃತಿ

ಸರ್ಕಾರ ಹಿಂದಿನ ವರ್ಷದಂತೆ ಈ ವರ್ಷವೂ ಅನುಮತಿ ನೀಡಲಾಗಿದೆಯೆಂದು ಸಮಜಾಯಿಷಿ ಹೇಳುತ್ತಿದೆ. ಹಿಂದಿನ ವರುಷಗಳಲ್ಲಿ ನ್ಯಾಯಾಲಯದ ನಿರ್ದೇಶನವನ್ನು ತಮಗೆ ತೋಚಿದಂತೆ ಇಲ್ಲವೇ ಉಲ್ಲಂಘಿಸಿ ಅನುಮತಿ ವ್ಯಾಖ್ಯಾನಿಸಿ ನೀಡಲಾಗಿದೆ. ಈ ಹಿಂದೆ ಎಸ್.ಎಂ.ಕೃಷ್ಣರವರು ಹವನ-ಹೋಮಕ್ಕೆ, ದತ್ತ ವಿಗ್ರಹ ಪೂಜೆಗೆ ಅವಕಾಶ ನೀಡಿ ಅಲ್ಲಿ ಇಲ್ಲದಿದ್ದ ಆಚರಣೆಗೆ ಅನುವು ಮಾಡಿದರು. ಸರ್ಕಾರದ ಮಂತ್ರಿ ಚಂದ್ರೇಗೌಡರೇ ಯಜ್ಞದಲ್ಲಿ ಭಾಗವಹಿಸಿದರು. ಚಿಕ್ಕಮಗಳೂರಿನ ಶೋಭಾಯಾತ್ರೆ ಯೆಂಬುದು ನೇರವಾಗಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು, ಅತ್ಯಂತ ಅಸಹ್ಯಕರ ಭಾಷೆಯನ್ನು ಬಳಸಿ, ಹೀಯಾಳಿಸಿಯಾಗಿತ್ತು ಮತ್ತು ಪ್ರಚೋದನಾತ್ಮಕವಾಗಿತ್ತು. ಇದು ಸಾಮರಸ್ಯ ಹಾಳುಗೆಡಹುವ ಒಂದು ರಾಜಕೀಯ ದುರುದ್ದೇಶದ ಪ್ರಚೋದನಾ ಯಾತ್ರೆಯಾಗಿತ್ತಲ್ಲದೇ ಯಾವುದೇ ಧಾರ್ಮಿಕ ಆಚರಣೆ -ಉದ್ದೇಶವೇ ಇರಲಿಲ್ಲ. ಇಂತಹ ವಿಕೃತಿಗಳ ವಿರುದ್ಧ ನಾಡಿನ ಪ್ರಗತಿಪರರು ತೀವ್ರವಾಗಿ ಪ್ರತಿಭಟಿಸುತ್ತಲೇ ಬಂದಿದ್ದರಿಂದ, ಕೊನೆಗೆ ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್-ಜೆಡಿ(ಎಸ್) ಸರ್ಕಾರ ಕೆಲವು ವಿಕೃತಿಗಳನ್ನು ಸರಿಪಡಿಸಲು ಮುಂದಾಯಿತು. ಹವನ-ಹೋಮ, ವಿಗ್ರಹ ಪೂಜೆಗಳನ್ನು ನಿರ್ಬಂಧಿತಲ್ಲದೇ ಶೋಭಾಯಾತ್ರೆಯನ್ನು ನಿಷೇಧಿಸಿತು. ಈ ಸಂಧರ್ಭದಲ್ಲಿ ಖಾವಿ ಪಡೆಯೊಂದಿಗೆ ಸಂಘರ್ಷಕ್ಕೆ ಇಳಿದಿತ್ತು. ಈ ಸಂದರ್ಭದಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ಪಕ್ಷ ಬೀದಿ ರಂಪಾಟ ಮಾಡಲು ಯತ್ನಿಸಿದವಾದರೂ ಅವುಗಳ ಆಟ ಅಷ್ಟಾಗಿ ನಡೆಯಲಿಲ್ಲ, ಸ್ಥಳೀಯವಾಗಿ ಜನರನ್ನು ಸೆಳೆಯಲಾಗಲಿಲ್ಲ, ಹೊರಗಿನಿಂದಲೂ ಇದಕ್ಕೆ ಅಷ್ಟಾಗಿ ಜನರೂ ಬರಲಿಲ್ಲ.


ಆದರೆ ಕಳೆದ ವರ್ಷ ಜೆಡಿ(ಎಸ್)-ಬಿಜೆಪಿ ಸರ್ಕಾರ ಕೆಲವು ನಿರ್ಬಂಧಗಳ ನಡುವೆ ಶೋಭಾಯಾತ್ರೆ, ಭಜನೆ ಕೀರ್ತನೆ, ಗಿರಿಯಲ್ಲಿ ದರ್ಶನಕ್ಕೆ ಅವಕಾಶ ನೀಡಿತ್ತು. ಅದೇ ಹೊತ್ತಿನಲ್ಲಿ ದತ್ತ ಜಯಂತಿ ಹಿನ್ನೆಲೆಯಲ್ಲಿ ಸಂಘ ಪರಿವಾರದಿಂದ ಮಂಗಳೂರಿನಲ್ಲಿ ನಡೆದ ಪ್ರಚೋದನಾಕಾರಿ ಮೆರವಣಿಗೆಯು ಗಲಭೆಗೆ ಪರಿವರ್ತಿತವಾಯಿತು. ಈಗಲೂ ಅಂತಹದ್ದು ಸಂಭವಿಸಬಾರದೆಂದು ಹೇಗೆ

ಪುಟ 4 ಕ್ಕೆ

ಮಾಧ್ಯಮಗಳು ಹಿಂಜಿ ಹಿಗ್ಗಿಸಿದ ಕೊಲ್ಕತ್ತಾ ಗಲಭೆಯ ಕತೆ

'ನವೆಂಬರ್ 21, ಕೋಲ್ಕತ್ತಾಕ್ಕೆ ಕೆಟ್ಟ ದಿನ, ಎಡರಂಗ ಸರ್ಕಾರದ ನೀತಿ ವಿರೋಧಿಸಿ ಕೋಲ್ಕತ್ತಾ ಬಂದ್. ವಿದ್ಯಾರ್ಥಿ ಸಾರ್ವಜನಿಕರು ದಿಕ್ಕಾಪಾಲು. ಇಡೀ ನಗರವೇ ಹತ್ತಿ ಉರಿಯುತ್ತಿದೆ. ಕೇಂದ್ರ ಸೈನ್ಯ ಪಡೆಯ ಬೂಟುಗಳೇ ಇಡೀ ನಗರದ ತುಂಬಾ' ಎಂಬ ಅಂಬೋಣ ಇದೇ ದೇಶದ ಛಾನಲ್‌ಗಳಲ್ಲಿ ಬಿತ್ತರವಾಗ ತೊಡಗಿತ್ತು. ದೆಹಲಿಯಿಂದ ಕೋಲ್ಕತ್ತಾಕ್ಕೆ 20ರಂದು ಪ್ರಯಾಣ ಬೆಳೆಸಿದ್ದ ನಾವು ನವೆಂಬರ್ 21ರಂದು ಕೋಲ್ಕತ್ತಾದ ಸೀಲ್ಡಾದ್ಧಕ್ಕೆ 4 ಗಂಟೆ ತಡವಾಗಿ ಬಂದು ಸೇರಿದ ರೈಲಿನಿಂದ. ಹೊರಗಿಳಿಯುತ್ತಿದ್ದಂತೆಯೇ ಕಂಡದ್ದೇನು? ಹೆಜ್ಜೆ ಇಡಲು ಜಾಗವಿಲ್ಲವೆಂಬಂತಹ ಜನಸಂದಣಿ. ದೇಶದ ರಾಜಧಾನಿ ದೆಹಲಿಗೂ ಹೊರ ಊರುಗಳಿಂದ ಬಂದುಹೋಗುವುದಕ್ಕಿಂತ ಹೆಚ್ಚು ಪಶ್ಚಿಮ ಬಂಗಾಲಕ್ಕೆ ಬಂದುಹೋಗುವ ಪ್ರಯಾಣಿಕರ ಮಹಾಸಾಗರದಿಂದ ಹೊರಬಂದು ಕಾರು ಹತ್ತುತ್ತಿರುವಂತೇ ಕಾರ್ ಡ್ರೈವರ್ ಬಂಗಾಲಿ ಭಾಷೆಯಲ್ಲಿ "ಮಾನಗೆಟ್ಟ ಪುಡಾರಿಗಳಿಂದ ಗಲಭೆ ನಡೆಯುತ್ತಿದೆ" ಎಂದು ನಮ್ಮ ಜೊತೆಯಲ್ಲಿದ್ದ ಎಸ್.ಎಫ್.ಐ ಸಂಗಾತಿಗೆ ಹೇಳಿದ. ನಾನು ತಕ್ಷಣ ಏನೆಂದು ಕೇಳಿದೆ. "ಕೋಲ್ಕತ್ತಾದಲ್ಲಿ ತಸ್ಲೀಮಾಗೆ ವಾಸ್ತವ್ಯಕ್ಕೆ ಅವಕಾಶ ನೀಡಿರುವುದನ್ನು ನೆಪ ಮಾಡಿಕೊಂಡು ತೃಣಮೂಲ ಕಾಂಗ್ರೆಸ್ ಮತ್ತು ಮುಸ್ಲಿಂ ಮೂಲಭೂತವಾದಿಗಳು ಗಲಭೆ ಸೃಷ್ಟಿಸಿದ್ದಾರೆ. ಅವರಿಗೆ ತಸ್ಲೀಮರವರ ವಿಷಯಕ್ಕಿಂತ ನಂದಿಗ್ರಾಮದ ವಿಷಯದಲ್ಲಿ ಗಲಭೆ ನಡೆಸುವುದು ಮುಖ್ಯವಾಗಿದೆ. ಇದನ್ನು ನಮ್ಮ ಜನ ನೋಡುತ್ತಿದ್ದಾರೆ. ಯಾರು ಸರಿ, ಯಾರು ತಪ್ಪು ಮಾಡುತ್ತಿದ್ದಾರೆಂದು ನಿರ್ಧರಿಸುವಂತಹ ಪ್ರಜ್ಞೆ ಅವರಲ್ಲಿ ಇದೆ' ಎಂದು ಇಂಗ್ಲೀಷ್‌ನಲ್ಲಿ ನಮಗೆ ಹೇಳಿದರು.

ಕೋಲ್ಕತ್ತಾ ನಗರದ ಕೇಂದ್ರ ಭಾಗದಲ್ಲೇ ಇರುವ ಪಾರ್ಕ್ ಸ್ಟ್ರೀಟ್ ಏರಿಯಾದ ಎಂ.ಎಲ್.ಎ ಹಾಸ್ಟೆಲ್‌ನಲ್ಲಿ ನಾವು ಇಳಿದುಕೊಂಡಿದ್ದ ಹಿಂಭಾಗದ ರಸ್ತೆಯಲ್ಲಿ ಎರಡು ಟೈರು ಸುಟ್ಟು ರಸ್ತೆ ತಡೆ ಮಾಡುತ್ತಾ, ಪೋಲೀಸರತ್ತ ಕಲ್ಲು ಇಟ್ಟಿಗೆ ತೂರುತ್ತಿದ್ದ ದುಷ್ಕರ್ಮಿಗಳ ಮೇಲೆ ಲಾಟಿ ಬೀಸಿದ್ದನ್ನು, ಆ ಕಿಡಿಗೇಡಿಗಳು ಓಡುವಾಗ ಬಿದ್ದಿದ್ದನ್ನೇ ಭಾರಿ ದೌರ್ಜನ್ಯ, ಗಲಭೆ ಎಂಬಂತೆ ಪದೇ ಪದೇ ತೋರಿಸಿ ತೋರಿಸಿ ಸಂಪೂರ್ಣ ಕೋಲ್ಕೊತ್ತಾಕ್ಕೆ ಬೆಂಕಿ ಬಿದ್ದಿದೆ ಎಂಬಂತೆ ಕ್ಷಣಾರ್ಧದಲ್ಲೇ ಎಲ್ಲಾ ಮಾಧ್ಯಮಗಳು ಅರಚತೊಡಗಿದ್ದವು. ವಿಷಯ ತಿಳಿದ ತಕ್ಷಣವೇ ಘಟನೆ ನಡೆದ ಸ್ಥಳಕ್ಕೆ ಆಗಮಿಸಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಮನ್ ಬಸು ಶಾಂತಿಯಿಂದಿರಲು



ಒಂದು ಬೀದಿಯ ಗಲಭೆ

ಮನವಿ ಮಾಡುವ ಜೊತೆಗೆ ಕೋಲ್ಕತ್ತಾ ಜನತೆಯು ಶಾಂತಿ, ಸಹಬಾಳ್ವೆ ಸೌಹಾರ್ದಕ್ಕೆ ಹೆಸರಾಗಿದೆ, ಅಶಾಂತಿಗೆ ಕೋಲ್ಕತ್ತಾ ಜನತೆ ಅವಕಾಶ ನೀಡಲಾರರು. ನಾಳೆಯೇ 'ಶಾಂತಿಗಾಗಿ ನಾವು ನೀವು' ಎಂಬ ಘೋಷಣೆಯಡಿ ರ್‍ಯಾಲಿ ಎಂದು ಘೋಷಿಸಿಬಿಟ್ಟರು. ಒಂದೇ ಘಂಟೆಯಲ್ಲಿ ಎಲ್ಲವೂ ಮುಗಿದು ಮಾಮೂಲಿನಂತೆ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ಜನ ಮಗ್ನರಾದರೆ ಛಾನಲ್‌ಗಳಲ್ಲಿ ಮಾತ್ರ ಹಾಕಿದ್ದನ್ನೇ ಹಾಕುತ್ತಾ ಜನತೆಯನ್ನು ಪ್ರಚೋದನೆ ಮಾಡುತ್ತಿದ್ದವು. ನಾವು ಘಟನೆ ನಡೆದ ರಸ್ತೆಯಲ್ಲಿಯೇ ಇರುವ ಸರ್ಕಾರಿ ಕಛೇರಿಗೆ ಹೋಗಿ ಕೆಲಸ ಮುಗಿಸಿಕೊಂಡು ಬರುವಾಗ ಸರ್ಕಾರಿ ಅಧಿಕಾರಿಯೊಬ್ಬರನ್ನು "ಸಾರ್ ಇಲ್ಲಿ ಸಣ್ಣ ಪ್ರತಿಭಟನೆ ನಡೆಯುತ್ತಿತ್ತಲ್ಲಾ ಏನಾದರೂ ಸಮಸ್ಯೆಯಾಯಿತಾ" ಎಂದರೆ "ಏನೂ ತೊಂದರೆ ಇಲ್ಲ. ನಾನ್‌ಸೆನ್ಸ್, ಈಡಿಯೆಟ್‌ಗಳು ಇಂತಹ ಗಲಭೆಗಳನ್ನು ಸೃಷ್ಟಿಸುತ್ತಲೇ ಇರುತ್ತಾರೆ. ಯಾಕೆಂದರೆ ಬಂಗಾಲದ ಜನರು ನೆಮ್ಮದಿಯಿಂದ ಜೀವನ ನಡೆಸುವುದು ಅವರಿಗೆ ಬೇಕಾಗಿಲ್ಲ" ಎಂದರು. ಸಾರ್ ಅವರು ಯಾವ ಸಂಘಟನೆಯವರು" ಎಂದರೆ "ತಕ್ಷಣದಲ್ಲೇ ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್ ಗೂಂಡಾಗಳು" ಎಂಬ ಉತ್ತರ ಬಂತು. ತಕ್ಷಣದಲ್ಲೇ ಕೈಕುಲುಕಿ ವಾಪಸ್ಸು ಬಂದು ಎಂಎಲ್‌ಎ ಹಾಸ್ಟೆಲ್‌ನಲ್ಲಿ ಉಳಿದೆವು. ನವೆಂಬರ್ 22ರಂದು ಸಿಪಿಐ(ಎಂ) ನೇತೃತ್ವದಲ್ಲಿ 5 ಸಾವಿರಕ್ಕೂ ಹೆಚ್ಚು ಸೇರಿದ್ದ ಎಲ್ಲಾ ಪ್ರಗತಿಪರ ಸಂಘಟನೆಗಳು ಒಗ್ಗೂಡಿಕೊಂಡು ನಡೆದ ಶಾಂತಿ ರ್‍ಯಾಲಿಯಲ್ಲಿ ಪಾಲ್ಗೊಂಡ ನಾವು "ಅನ್ಯಾಯದ ವಿರುದ್ಧ ಹೋರಾಡಿ ಸ್ವಾಭಿಮಾನದಿಂದ ಬದುಕುತ್ತಿರುವ ದುಡಿಯುವ ಜನತೆಯೊಂದಿಗೆ ಶಾಂತಿಗಾಗಿ" ಕೋಲ್ಕತ್ತಾದಲ್ಲಿ ಭಾಗವಹಿಸಿದ ಸಂತೋಷದೊಂದಿಗೆ ನವೆಂಬರ್ 23 ಬೆಳಿಗ್ಗೆ 5 ಗಂಟಗೆ ಕೋಲ್ಕತ್ತಾ ಬಿಟ್ಟು 9 ಗಂಟೆಗೆ ಬೆಂಗಳೂರಿಗೆ ಬಂದು ರಾಜ್ಯದ ದಿನಪತ್ರಿಕೆಗಳನ್ನು ನೋಡಿ ವಾರವಾಯಿತೆಂದು ತಕ್ಷಣದಲ್ಲೇ ಪ್ರಜಾವಾಣಿಯನ್ನು ತಿರುಗಿಸಿದರೆ ನನ್ನ ಕಣ್ಣಿಗೆ ಪ್ರಜಾವಾಣಿಯ ನವೆಂಬರ್ 22ರಲ್ಲಿ ಮಧ್ಯ ಪುಟದಲ್ಲಿ ಪ್ರಕಟವಾಗಿರುವ ಫೋಟೋ ಚಿತ್ರ ಕಾಣಿಸಿತ್ತು. ಕೆಳಗೆ ಕೋಲ್ಕತ್ತಾ ನಗರದಲ್ಲಿ ಎಡರಂಗ ಸರ್ಕಾರದ ವಿರುದ್ಧ ಬಂದ್‌ಗೆ ಕರೆ ಕೊಟ್ಟಿದ್ದು ಸಂಪೂರ್ಣ ಬಂದ್ ಯಶಸ್ವಿಯಾಗಿ, ಸೈನಿಕರು ಗಸ್ತು ತಿರುಗುತ್ತಿರುವುದು, ಪೊಲೀಸರ ಕೈಯಲ್ಲಿ ಬಂದೂಕು ಇರುವ ಚಿತ್ರ ತೋರಿಸಲಾಗಿತ್ತು. ಪ್ರತ್ಯಕ್ಷವಾಗಿ ಕೋಲ್ಕೊತ್ತಾದಲ್ಲಿ ನಡೆದ ಘಟನೆಗೆ ಸಾಕ್ಷಿಯಾಗಿ ಬಂದು ಪತ್ರಿಕೆ ನೋಡಿದ ನನಗೆ ಪ್ರಜಾವಾಣಿಯಂತಹ ಪ್ರಜಾವಾಣಿಯೂ ಸೇರಿದಂತೆ ಪತ್ರಿಕೆಗಳು ಈ ಮಟ್ಟಕ್ಕೆ ಮಾಧ್ಯಮಗಳು ಇಳಿದಿವೆಯಲ್ಲ? ಮಾಧ್ಯಮಗಳ ವರದಿಗಳನ್ನು ನಂಬುವ ಸಾಮಾನ್ಯ ಜನರಲ್ಲಿ ಎಂತಹ ಹಸಿ ಹಸಿ ಸುಳ್ಳಿನ ಅಭಿಪ್ರಾಯ ಮೂಡಿಸುತ್ತಿದ್ದಾರೆ ಎಂಬುದು ಮತ್ತಷ್ಟು ಮನದಟ್ಟಾಯಿತು.

– ಬಿ.ರಾಜಶೇಖರಮೂರ್ತಿ

ಎಸ್‌ಎಫ್‌ಐ ರಾಜ್ಯಾಧ್ಯಕ್ಷರು

ಪರಂಪರೆಗೆ ವಿಕೃತಿ

ಪುಟ 3 ರಿಂದ

ಹೇಳೋದು? ಒಂದು ವೇಳೆ ಸರ್ಕಾರ ದೃಢ ನಿರ್ಧಾರದ ಕ್ರಮ ವಹಿಸಿದರೆ ಚೆಡ್ಡಿ ಪಡೆಯ ಆಟಾಟೋಪಕ್ಕೆ ತಡೆ ಹಾಕಲು ಸಾಧ್ಯ.

ಬಾಬಾಬುಡನ್‌ಗಿರಿಯಲ್ಲಿ ಹುಟ್ಟುಹಾಕಲಾದ ವಿವಾದ ಸ್ಪಷ್ಟವಾಗಿ ಕೋಮುವಾದಿ ಫ್ಯಾಶಿಸ್ಟ್ ಅಜೆಂಡಾದ ಭಾಗವಾಗಿದೆ. ಈಗ ಭಜರಂಗದಳ, ಶ್ರೀರಾಮಸೇನೆ, ಅಥವಾ ಇತರೆ ಸಂಘಗಳು ಬೇಡಿಕೆಗಳನ್ನು ಬಹಿರಂಗವಾಗಿ ಸಮರ್ಥಿಸಲು ಈ ಬಾರಿ ಖ್ಯಾತ ಸಂಶೋಧಕ ಡಾ: ಚಿದಾನಂದಮೂರ್ತಿಯವರು ಇಳಿದಿದ್ದಾರೆ. ಅದು ಹಿಂದುಗಳದ್ದೇ ಎಂದೂ, ದತ್ತ ಪೀಠದ ಪ್ರದೇಶದಲ್ಲಿ ತೆರಿಗೆ ಸಂಗ್ರಹಿಸಲು ಹೈದರಾಲಿ ಫಕೀರನನ್ನು ನೇಮಿಸಿದ್ದನೆಂದು ಕಥೆಯೊಂದನ್ನು ಹೇಳುತ್ತಿದ್ದಾರೆ. ಇಂತಹ ವಾದಗಳು ಹಾಗೂ ಸಂಘಪರಿವಾರದ ಹುನ್ನಾರಗಳಿಗೆ ಸವಾಲು ಒಡ್ಡಿ ಅವುಗಳನ್ನು ಬಟ್ಟ ಬಯಲಾಗಿಸುತ್ತಿರುವ ಬುದ್ಧಿಜೀವಿ, ಸಾಹಿತಿಗಳಿಗೆ ಪರ್ಯಾಯ ಎಂಬಂತೆ ಚಿದಾನಂದಮೂರ್ತಿ, ಭೈರಪ್ಪನವರನ್ನು ಸಂಘ ಪರಿವಾರ ಬಳಸುತ್ತಿದೆ. ಆದರೆ ಅವರು 'ಅಧ್ಬುತ' ಸಂಶೋಧನೆಗಳಿಂದ ನಗೆಪಾಟಲಿಗೆ ಈಡಾಗುತ್ತಿದ್ದಾರೆ.

ಇಂದಿನ ಗಂಭೀರ ಪ್ರಶ್ನೆ... ಕೋರ್ಟ್ ಆದೇಶದ ಮಿತಿಯಲ್ಲಿಯೇ ಶೋಭಾಯಾತ್ರೆ, ಭಜನೆ, ದತ್ತಮಾಲೆ-ಇತ್ಯಾದಿಗಳಿಗೆ ಅವಕಾಶ ಕಲ್ಪಿಸುವುದು. ಹಿಂದೆಂದೂ ಇಲ್ಲದ ಆಚರಣೆಗಳನ್ನು ಖಾಯಂಗೊಳಿಸುವಂತಹ ದಿಕ್ಕಿನಲ್ಲಿ ಹೆಜ್ಜೆ ಇಟ್ಟಂತೆ. ಹಂತಹಂತವಾಗಿ ಇಂತಹ ವಿಕೃತಿಗಳನ್ನು ಗಟ್ಟಿಗೊಳಿಸುತ್ತಾ, 'ದರ್ಗಾಪೀಠ'ದ ಒಳಗೆ ನುಸುಳುವುದು, ಸಂಘಪರಿವಾರದ ತಂತ್ರ. ಮೇಲಾಗಿ ಬಿಜೆಪಿ 'ಸ್ವಂತ ಶಕ್ತಿಯಿಂದ' ಅಧಿಕಾರಕ್ಕೆ ಬಂದರೆ 'ದತ್ತಪೀಠ' ವನ್ನಾಗಿಸುವ, ಅದಕ್ಕಾಗಿ ಈಗಿರುವುದನ್ನು ಧ್ವಂಸಗೊಳಿಸುವ ಮಾತನ್ನಾಡಿದೆ. ಹೀಗಾಗಿ ಇದು ಕೇವಲ ಆಡಳಿತಾತ್ಮಕ ಪ್ರಶ್ನೆ ಅಲ್ಲ. ಬದಲಾಗಿ ರಾಜಕೀಯ ಪ್ರಶ್ನೆಯಾಗಿದೆ. ಸಂಘ ಪರಿವಾರದ ಪಿತೂರಿಯನ್ನು ಅರಿಯುವ, ಸೋಲಿಸುವ ಎಚ್ಚರದ ಕ್ರಮ ವ್ಯಾಪಕವಾಗಬೇಕಿದೆ.

ಕನ್ನಡ ಜಾತ್ರಾನೆ ಇದೆ.....

"ರೀ.......

"ಏನೇ....

"ಮುಂದಿನ ವರ್ಷ ನಮ್ಮೂರಲ್ಲಂತೆ ಜಾತ್ರೆ"

"ಯಾವ ಜಾತ್ರೆ? ಈ ವರ್ಷ ತಾನೆ ಮಾರಿ ಜಾತ್ರೆ ಆಯ್ತಲ್ಲ?"

"ಮಾರಿ ಜಾತ್ರೆ ಅಲ್ಲರೀ, ಈ ವರ್ಷ ಬಾಳ ವಿಶೇಷ. ಅಮೃತವರ್ಷ ಅಂತೆ"

"ಓಹೋ ಕನ್ನಡ ಸಾಹಿತ್ಯ ಸಮ್ಮೇಳನದ ಬಗ್ಗೆ ಹೇಳ್ತಿದೀಯ ನೀನು"

"ಹೌದು ಕಣ್ರೀ, ಬಹಳ ಚೆನ್ನಾಗಿರುತ್ತಂತೆ 4,5 ದಿನ ಭೂರಿ ಭೋಜನ ಅಂತೆ"

"ಹೌದೌದು. ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯಕ್ಕಿಂತ ಭೂರಿ ಭೋಜನದ್ದೇ ದೊಡ್ಡ ಸುದ್ದಿ."

"ಅಲ್ವ.... ಮತ್ತೆ ಲಕ್ಷಾಂತ್ರ ಜನಕ್ಕೆ ಭೋಜನ ವ್ಯವಸ್ಥೆ ಮಾಡೋದು ಏನು ತಮಾಷೆ ಮಾತ?"

"ಏನಾದ್ರೂ ಆಗ್ಲಿ ನನಗೆ ಅದರಲ್ಲಿ ಆಸಕ್ತಿ ಇಲ್ಲ ಬಿಡು"

"ಯಾಕ್ರೀ?"

ಮತ್ತಿನ್ನೇನು? ಭೂರಿ ಭೋಜನ ಅಂತ ಬರೀ ಪುಳಿಚಾರು ಊಟ ನಾಕೈದು ದಿನ ಬೇಜಾರಲ್ವೇ? ಕೋಳಿ ಕುರಿ ಇಲ್ಲ. ಒಂದು ಮೀನು ಮೊಟ್ಟೆನೂ ಇಲ್ವಂತೆ. ಅದಕ್ಕೆ ಹೇಳಿದ್ದು ನಮ್ಮ ಮಾರಿ ಜಾತ್ರೆನೇ ವಾಸಿ"

"ಅದೇನಾದ್ರೂ ಆಗ್ಲಿ. ನಾವಂತೂ ನಮ್ಮೂರಲ್ಲಿ ನಡೆಯೋ ಸಾಹಿತ್ಯ ಸಮ್ಮೇಳನಕ್ಕಾಗಿ ಕೆಲವೊಂದು ನಿರ್ಣಯ ಕೈಗೊಳ್ಳಬೇಕೂ ಅಂತಿದೀವಿ"

"ಸಾಹಿತ್ಯ ಸಮ್ಮೇಳನಗಳಲ್ಲಿ ನಿರ್ಣಯಗಳಿಗೇನು ಕೊರತೆ? ಏನು ನಿರ್ಣಯ ಬೇಕಾದರೂ ತಗೋಬಹುದು. ಅಲ್ಲಿ ತಗೊಂಡ ನಿರ್ಣಯ ಜಾರಿ ಮಾಡೋ ಜವಾಬ್ದಾರಿ ಯಾರಿಗೂ ಇಲ್ವಲ್ಲ".

"ನಾವು ತಗೊಂಡಿರೋ ನಿರ್ಣಯ ಜಾರಿ ಮಾಡೇ ಮಾಡ್ತೀವಿ. ಅದು ನಮ್ಮದೇ ಜವಾಬ್ದಾರಿ"

"ಈ ಬಾರಿ ಎಪ್ಪತ್ತೈದನೇ ವರ್ಷ ಅಂತ ಏನು ಎಪ್ಪತ್ತೈದು ನಿರ್ಣಯ ತಗೋತಾರೋ ಏನೋ".

"ಅಷ್ಟೊಂದು ನಿರ್ಣಯ ಏನ್ರಿ ಇರುತ್ತೆ?

"ಇರದೇ ಏನು 75 ವರ್ಷದಿಂದ ನಿರ್ಣಯಗಳನ್ನು ತಗೊತಾನೇ ಇದಾರೆ. ಉದಾಹರಣೆಗೆ ಆಡಳಿತದಲ್ಲಿ ಕನ್ನಡ ಜಾರಿಗೊಳಿಸಬೇಕು ಅಂತ ಎಷ್ಟು ವರ್ಷದಿಂದ ನಿರ್ಣಯ ತಗೋತಾನೇ ಇದಾರೆ. ಆಡಳಿತದಲ್ಲಿ ಕನ್ನಡ ಜಾತ್ರಾನೇ ಇದೆ. ಇನ್ನು ಕನ್ನಡ ಮಾಧ್ಯಮದಲ್ಲಿ ಭೋದನೆ. ಇವರು ನಿರ್ಣಯ ತಗೊಂಡ ಹಾಗೆಲ್ಲ ಇಂಗ್ಲೀಷ್ ಇನ್ನೂ ಕೆಳಗಿನ ತರಗತಿಗಳಿಗೆ ಬಂದು ಒಂದನೇ ತರಗತಿಗೇ ಬಂದುಬಿಟ್ಟಿದೆ. ಅಂತೂ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ತಗೊಂಡ ನಿರ್ಣಯಗಳನ್ನು ಒಟ್ಟು ಗೂಡಿಸಿದ್ರೆ ಅದೊಂದು ಗಿನ್ನೀಸ್ ದಾಖಲೆ ಆಗುತ್ತೋ ಏನೋ. ಅದಿರ್ಲಿ ಸಮ್ಮೇಳನಗಳಲ್ಲಿ ಕಡೆಗೆ ನಿರ್ಣಯ ಕೈಗೊಂಡು ಮನೆಗೆ ಹೋಗಿ ಮಲಗಿಕೊಳ್ತಾರೆ. ನೀವು ನೋಡಿದ್ದರೆ ಇನ್ನೂ ನಮ್ಮೂರಲ್ಲಿ ಸಮ್ಮೇಳನ ಅಂತ ಹೇಳ್ತಿದ್ದ ಹಾಗೆ ಈಗ್ಲೆ ನಿರ್ಣಯ ತಗೊಂಡಿದಿವಿ ಅಂತೀಯಲ್ಲ ಅದೇನದು?

"ಅದು ಸಮ್ಮೇಳನದ ನಿರ್ಣಯದ ಥರ ಶಾಸ್ತ್ರಕ್ಕೆ ತಗೊಳೋ ನಿರ್ಣಯ ಅಲ್ಲರಿ. ಸಮ್ಮೇಳನ ಶುರುವಾಗುವ ಹೊತ್ತಿಗೆ ಜಾರಿಗೆ ಬಂದಿರಬೇಕು. ಅದಕ್ಕೆ ಈಗಿನಿಂದಲೇ ಪ್ರಯತ್ನ ಅಗತ್ಯ.

"ಅದೇನಪ್ಪ ಅಂಥದ್ದು? ಸಾಹಿತ್ಯ ಸಮ್ಮೇಳನದ ಹೊತ್ತಿಗೆ ಕನಿಷ್ಠ 10 ಹೊಸ ಸೀರೆ ತಗೋಬೇಕು. 5 ದಿನ ಬೆಳಿಗ್ಗೆ ಊಟದ ಹೊತ್ತಿಗೆ ಒಂದು, ರಾತ್ರಿ ಊಟದ ಹೊತ್ತಿಗೆ ಒಂದು ಹೊಸ ಸೀರೆಯಂತೆ ಒಟ್ಟು 10 ಹೊಸ ಸೀರೆ. ಬೆಳಿಗ್ಗೆ ಉಟ್ಟು ಊಟ ಮಾಡಿದ ಸೀರೆಯಲ್ಲಿ ರಾತ್ರಿ ಊಟಕ್ಕೆ ಹೋಗೋಕ್ಕಾಗುತ್ತಾ?"

"ಬೇಡ ಮಾರಾಯ್ತಿ ಇಂಥ ಕಠಿಣ ನಿರ್ಣಯಗಳನ್ನು ಕೈಗೊಳ್ಳಬೇಡ".

"ಆಹಾ ಏನ್ ಪುಕ್ಕಲು ಗಂಡಸು ನೀವು. ನೀವೇನೂ ಸೀರೆ ಕೊಡ್ಸೋದು ಬೇಡ, ಏನೂ ಬೇಡ. ಸಾಹಿತ್ಯ ಸಮ್ಮೇಳನ ಅಂದ್ರೆ ಅಲಂಕಾರ ಮಾಡ್ಕೊಂಡು ತಿರುಗಾಡ್ಕೊಂಡು, ಭೂರಿ ಭೋಜನ ಮಾಡೋದು ಅಲ್ಲ ಅಂತಾ ನನಗೂ ಗೊತ್ತು. ನಮ್ಮೂರಲ್ಲಿ ನಡೆಯೋ ಸಾಹಿತ್ಯ ಸಮ್ಮೇಳನದಲ್ಲಿ ಒಂದೊ ಜಾರಿ ಮಾಡಲು ಸಾಧ್ಯವಾಗುವಂತಹ ನಿರ್ಣಯಗಳನ್ನು ತಗೋಬೇಕು. ಇಲ್ಲ ಈವರೆಗೆ ತಗೊಂಡಿರೋ ನಿರ್ಣಯಗಳು ಜಾರಿಗೆ ಬರೋತನಕ ಬೇರೆ ಹೊಸ ನಿರ್ಣಯ ತಗೋಳಲ್ಲ ಅಂತ ಮರ್ಯಾದೆಯಿಂದ ಒಂದು ನಿರ್ಣಯ ತಗೋಬೇಕು".

"ಕರೆಕ್ಟ್ ಕಣೆ ನೀವು ಹೇಳಿದ್ದು. ಒನಕೆ ಓಬವ್ವನ ಹೊಡೆತ ಇದ್ದಂಗೆ".

- ಶ್ರೀ

ಸಂಘ ಪರಿವಾರವು ಗೋಸಾಗಣೆ ನೆಪದಲ್ಲಿ ಅಲ್ಪಸಂಖ್ಯಾತರ ಮೇಲೆ ಹಲ್ಲೆ ನಡೆಸುವುದು ಕೇವಲ ಕರಾವಳಿಗೆ ಮಾತ್ರ ಸೀಮಿತವಾಗಿಲ್ಲ. ಮೊನ್ನೆ ಅದು ತಿಪಟೂರಿನಲ್ಲಿ ನಡೆದುಹೋಯಿತು.

ತಿಪಟೂರು ಶಾಂತಿಗೆ ಬೆಂಕಿ ಇಟ್ಟ ಭಜರಂಗದಳ

ತಿಪಟೂರಿನಲ್ಲಿ ಆಗೊಮ್ಮೆ ಈಗೊಮ್ಮೆ ಸಣ್ಣ ಮಟ್ಟ ಘಟನೆಗಳು ನಡೆಯುತ್ತಿದ್ದು ಬಿಟ್ಟರೆ ಹಿಂದೂ ಮುಸ್ಲಿಮರ ಮಧ್ಯೆ ಬಾಂಧವ್ಯ ಸದಾ ಐಕ್ಯತೆಯಿಂದ ಇತ್ತು. ಆದರೆ ಇತ್ತೀಚೆಗಂತೂ ಭಜರಂಗದಳ ಹಾಗೂ ಗೋ ಸಂರಕ್ಷಣಾ ವೇದಿಕೆಯ ಹೆಸರಿನಲ್ಲಿ ಗೂಂಡಾ ಪಡೆಗಳು ಪೈಶಾಚಿಕ ವರ್ತನೆಯಿಂದ ಕೋಮುದಳ್ಳುರಿ ಹೆಚ್ಚಾಗಿದ್ದು ರಾಜಕೀಯ ಪಕ್ಷಗಳು ತಮ್ಮ ಬೇಳೆ ಕಾಳು ಬೇಯಿಸಿಕೊಳ್ಳಲು ನಾ ಮುಂದು ತಾ ಮುಂದು ಎನ್ನುತ್ತಿದ್ದಾರೆ. ತಿಪಟೂರಿನ ಜನತೆ ಶಾಂತವಾಗಿದ್ದರೂ ಕೋಮುವಾದದ ಲಾಭ ಪಡೆಯಲು ರಾಜಕೀಯ ಪಕ್ಷಗಳು ಇನ್ನಿಲ್ಲದ ತಂತ್ರಗಳನ್ನು ಮಾಡುತ್ತಲೆ ಇವೆ. ಹಸುಗಳ ಮಾರಾಟದ ವಿಷಯದಲ್ಲಿ ಆಗಾಗ ಗೋಸಂರಕ್ಷಣಾ ವೇದಿಕೆ ಹಾಗೂ ಭಜರಂಗದಳದ ಕಾರ್ಯಕರ್ತರು ಹಸುಗಳನ್ನು ಹಿಡಿದು ಗೋಸಂರಕ್ಷಣೆಯ ಹೆಸರಲ್ಲಿ ನಿರಂತರ ದಬ್ಬಾಳಿಕೆ ನಡೆಸುತ್ತಲೆ ಬಂದಿದ್ದರು. ಡಿಸೆಂಬರ್ 4 ರಂದು ಆದದ್ದು ಇದೆ. ಹಸುಗಳ ಮಾರಾಟ ವಿಷಯದಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದು ಪರಿಸ್ಥಿತಿ ವಿಕೋಪಕ್ಕೇರಿ ತಿಪಟೂರು ನಗರಕ್ಕೆ ಆವರಿಸಿತ್ತು. ಇದರ ಪರಿಣಾಮ ಕೋಮುವಾದಿಗಳು ದನಸಾಗಣೆಯನ್ನು ನೆಪ ಮಾಡಿಕೊಂಡು ಗಾಂಧಿನಗರದ ಕಡೆಯಿಂದ ಸಾಗಿಸುತ್ತಿದ್ದ ದನಗಳನ್ನು ಅಡ್ಡ ಹಾಕಿ 'ನೀವು ದನ ಕಡಿಯಲು ತೆಗೆದುಕೊಂಡು ಹೋಗುತ್ತೀದ್ದೀರಿ' ಎಂದು ಏಕಾಏಕಿ ಗಲಭೆ ಎಬ್ಬಿಸಿದಾಗ ಸುತ್ತಮುತ್ತಲ ಜನ ಅವರಿಸಿಕೊಂಡು ಘರ್ಷಣೆಗೆ ಇಳಿದ ಕೋಮುವಾದಿ, ಭಜರಂಗದಳದ ಕಾರ್ಯಕರ್ತರು ಅನಗತ್ಯ ವಿವಾದವನ್ನು ಎಬ್ಬಿಸಿ ಇಡೀ ನಗರವನ್ನೇ ತಲ್ಲಣಗೊಳಿಸಿದರು.

ದನಗಳ ಸಂತೆ ಇಂದು ನೆನ್ನೆಯದಲ್ಲ

ತಿಪಟೂರು ತಾಲ್ಲೂಕಿನ ಕರಡಾಳು ದನಗಳ ಸಂತೆ ದನದ ವ್ಯಾಪಾರಕ್ಕೆ ಪ್ರಸಿದ್ದಿ ಪಡೆದಿದೆ. ಈ ಸಂತೆ ತುಂಬಾ ಹಿಂದಿನಿಂದಲೂ ನಡೆಯುತ್ತಾ ಬಂದಿದ್ದು, ಪ್ರತಿ ಮಂಗಳವಾರ ನಡೆಯುತ್ತದೆ. ಇಲ್ಲಿಗೆ ವ್ಯಾಪಾರ ಮಾಡಲು ರೈತರು ಬೇರೆ ಬೇರೆ ಊರುಗಳಿಂದ ಬರುವುದು ಹಾಗೂ ಅವುಗಳನ್ನು ಖರೀದಿಸಿ ವಾಹನಗಳಲ್ಲಿ ಸಾಗಾಟ ನಡೆಸುತ್ತಾರೆ.

ಹೊಸಪೇಟೆ, ಚಿತ್ರದುರ್ಗ, ಬೆಂಗಳೂರು, ಮಾಗಡಿ, ಬಿಜಾಪುರ, ಬಳ್ಳಾರಿಗಳಿಗೆ ಇಲ್ಲಿಂದ ದನಗಳು ಹೋಗುತ್ತವೆ. ಇದು ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯ ಉಪಕೇಂದ್ರವಾಗಿದ್ದು, ಇದು ಇಡೀ ರಾಜ್ಯದಲ್ಲೇ ನಡೆಯುವ ವಿಶೇಷ ವಾರದ ಸಂತೆ. ಎರಡು ಮೂರು ಬಾರಿ ಭಜರಂಗದಳದ ಕಾರ್ಯಕರ್ತರು ಇಲ್ಲಿ ಗಲಾಟೆ ಮಾಡಲು ಹೋಗಿ ರೈತರೆ ಅವರನ್ನು ಬೀದಿಯಲ್ಲಿ ಬಡಿದು ಓಡಿಸಿದ್ದಾರೆ. ರೈತರಿಂದ ದನಗಳನ್ನು ಖರೀದಿಸುವವರೆಗೆ ಕಾದು ಸಾಗಾಟ ಮಾಡುವಾಗ ರಸ್ತೆ ಮಧ್ಯೆದಲ್ಲಿ ತಡೆ ಹಿಡಿದು ಅವುಗಳನ್ನು ಗೋಶಾಲೆಗೆ ಕಳುಹಿಸುವ ನೆಪದಲ್ಲಿ ಹಿಂದೂ ಮುಸ್ಲಿಮರ ಮಧ್ಯೆ ಗಲಬೆ ಸೃಷ್ಟಿಸಿ ಬೇಳೆ ಬೇಯಿಸಿಕೊಳ್ಳಲು ರಾಜಕೀಯ ಪಕ್ಷ ಬಿ.ಜೆ.ಪಿ. ಮತ್ತು ಭಜರಂಗಿಗಳು ಸಂಚು ನಡೆಸಿದ್ದು, ಅದಕ್ಕೆ ಗೋಸಂರಕ್ಷಣೆ ಹೆಸರಲ್ಲಿ ಬೀದಿಗೆ ಗೂಂಡಾ ಪಡೆ ಇಳಿಸಿದ್ದು, ಐಕ್ಯ ತಿಪಟೂರು ನಗರದಲ್ಲಿ ರಕ್ತದ ಓಕುಳಿ ನಡೆಸಲು ಮುಂದಾದರು. ಶ್ರೀರಾಮ ಸೇತು ರಥಯಾತ್ರೆ ಬರುವ ಒಂದು ದಿನ ಮುನ್ನ ಇದು ನಡೆದಿದ್ದು ನೋಡಿದರೆ ಗಲಭೆಯ ಉದ್ದೇಶ ಅರ್ಥವಾಗುತ್ತದೆ.

ಮುಸ್ಲಿಮರ ಮೇಲೆ ಮಾರಣಾಂತಿಕ ಹಲ್ಲೆ - ಆಟೋಗಳಿಗೆ ಬೆಂಕಿ

ಬೆಳಿಗ್ಗೆ 12 ಗಂಟೆಗೆ ನಡೆದ ಗಲಭೆಯನ್ನು ತಣ್ಣಗಾಗಿಸಲು ಪೋಲಿಸ್ ಠಾಣೆಯಲ್ಲಿ ಕರೆದ ಸಭೆಗೆ ಮುಸ್ಲಿಂ ಮುಖಂಡರು ಹಾಗೂ ಹಿಂದೂ ಮುಖಂಡರು ಆಗಮಿಸಿದಾಗ ಸಭೆ ಆರಂಭಕ್ಕೆ ಮುನ್ನವೇ ಪೂರ್ವನಿಯೋಜಿತ ಯೋಜನೆಯನ್ನು ಭಜರಂಗಿಗಳು ಕಾರ್ಯರೂಪಕ್ಕೆ ಇಳಿಸಿ ಮುಸ್ಲಿಮರ ಆಟೋಗಳನ್ನು ಬಾಡಿಗೆಗೆ ಕರೆದು ಹಾಸನ ರಸ್ತೆಯಲ್ಲಿ ಜನರಿಲ್ಲದ ಸ್ಥಳದಲ್ಲಿ ಮುಸ್ಲಿಮರನ್ನು ಥಳಿಸಿ ಆಟೋಗಳಿಗೆ ಬೆಂಕಿ ಇಟ್ಟು, ಅಟ್ಟಹಾಸ ಮೆರೆದರು. ಇದರಿಂದ ಕುಪಿತರಾದ


ಹತ್ತಿದ ಬೆಂಕಿ ಆರುವುದೆಂತು?

ಮುಸ್ಲಿಮರ ಗುಂಪು ರೈಲ್ವೇ ನಿಲ್ದಾಣದ ಬಳಿ ದಾಂಧಲೆ ಎಬ್ಬಿಸಿ ದ್ವಿಚಕ್ರ ವಾಹನ ಹಾಗೂ ಕಾರುಗಳಿಗೆ ಕಲ್ಲು ತೂರಾಟ ನಡೆಸಿತು. ಇದರಿಂದ ಎರಡು ಕಡೆ ಘರ್ಷಣೆ ಪ್ರಾರಂಭವಾಗಿ 144 ನೇ ಸೆಕ್ಷನ್ ಪ್ರಕಾರ ಪಟ್ಟಣದಲ್ಲಿ ನಿಷೆದಾಜ್ಞೆ ಜಾರಿಗೊಳಿಸಲಾಯಿತು. ಅಂಗಡಿ ಮುಂಗಟ್ಟುಗಳು ಸ್ವಯಂಘೋಷಿತ ಬಂದ್ ಆಗಿ, ಇಡಿ ನಗರ ಸ್ಮಶಾನ ಮೌನವಾಯಿತು. ಪೆಟ್ಟು ತಿಂದ ಮುಸ್ಲಿಮರನ್ನು ಆಸ್ಪತ್ರೆಗೆ ದಾಖಲು ಮಾಡಿದ್ದು, ಅವರ ಪರಿಸ್ಥಿತಿ ಚಿಂತಾಜನಕವಾಗಿದೆ.

ಗಲಭೆಕೋರರಿಂದಲೆ ಬಂದ್‌ಗೆ ಕರೆ— ನಿಷೇದಾಜ್ಞೆ ಉಲ್ಲಂಘಿಸಿ ಮೆರವಣಿಗೆ

ಊರಿಗೆ ಬೆಂಕಿ ಇಟ್ಟವರೆ ಅನ್ಯಾಯವಾಯಿತು ಎಂದು ಬೊಬ್ಬೆ ಹೊಡೆದರು. ಅವರೇ ಬಂದ್‌ಗೆ ಕರೆ ನೀಡಿ ಬಂದ್ ಕೂಡ ಮಾಡಿ 144 ನೇ ನಿಷೇದಾಜ್ಞೆ ಉಲ್ಲಂಘಿಸಿ ಮೆರವಣಿಗೆ ನಡೆಸಿ ರಾಮ ಸೇತುಯಾತ್ರೆಯನ್ನು ಬರಮಾಡಿಕೊಂಡರು. ಮುಸ್ಲಿಂ ವಿರೋಧಿ ಭಾಷಣವನ್ನು ಮಾಡಿ ಅಬ್ಬರದ ಭಾವವೇಷದಲ್ಲಿ ಮುಸ್ಲಿಮರಲ್ಲಿ ಭಯದ ವಾತಾವರಣ ಸೃಷ್ಟಿಸಿದರು.

ಕೋಮುವಾದಿಗಳ ಅಟ್ಟಹಾಸಕ್ಕೆ ಕಡಿವಾಣ ಹಾಕಿ- ಪ್ರಗತಿಪರರ ಮನವಿ

ಅತ್ತ ಕೋಮುವಾದಿಗಳು ಅಟ್ಟಹಾಸ ಮೆರೆಯುತ್ತಿದ್ದರೆ ಇತ್ತ ಸಿ.ಪಿ.ಐ.(ಎಂ) ಡಿ.ವೈ.ಎಫ್.ಐ., ಅಹಿಂದ, ಕೆ.ಪಿ.ಆರ್.ಎಸ್. ದಲಿತ ಸಂಘರ್ಷ ಸಮಿತಿ, ಬಹುಜನ ಸಮಾಜ ಪಕ್ಷ, ಹಾಗೂ ಹೊನ್ನಾರು ಪತ್ರಿಕೆಯ ಸಂಪಾದಕ ಉಜ್ಜಜ್ಜೆ ರಾಜಣ್ಣ ಮತ್ತಿತರ ಪ್ರಗತಿಪರರು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ಐ.ಜಿ. ಯವರಿಗೆ ಮನವಿ ನೀಡಿ ಈ ಕೃತ್ಯದಲ್ಲಿ ಭಾಗಿಯಾದವರನ್ನು ಬಂಧಿಸಲು ಮನವಿ ಮಾಡಿಕೊಂಡರು.

ಮಾಜಿ ಪ್ರದಾನಿ ಭೇಟಿ -


ಘಟನೆ ನಡೆದ ನಂತರ ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೆಗೌಡರು ಭೇಟಿ ನೀಡಿದ್ದರು. ಗಲಭೆ ಪ್ರಾರಂಭವಾದ ತಕ್ಷಣ ಪೋಲಿಸರ ಮಧ್ಯ ಪ್ರವೇಶವನ್ನು ಜನತೆ ಸ್ವಾಗತಿಸಿದ್ದು ಡಿ.ವೈ.ಎಸ್.ಪಿ. ಮಹದೇವಯ್ಯ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಸಿ.ಸಿ. ಪಾಟೀಲ್ ರವರು ಇನ್ನೂ ಹೆಚ್ಚಿನ ಗಲಭೆಯಾಗುವುದನ್ನು ತಪ್ಪಿಸುವಲ್ಲಿ ಸೂಕ್ತ ಕ್ರಮ ಕೈಗೊಂಡರು. ದನಗಳ ಸಾಗಾಟ ವಿಷಯಕ್ಕೆ ಆಗಾಗ ಇಂತಹ ಘಟನೆ ನಡೆಯುತ್ತಲೆ ಇದ್ದು ಪರಿವಾರ ಬೇಳೆ ಬೇಯಿಸಿಕೊಳ್ಳುತ್ತಿದ್ದು ಚುನಾವಣೆಗೆ ಮುಂಚೆ ಸಂಘ ಪರಿವಾರದ ಈ ರಿಹರ್ಸಲ್ ಪ್ರಗತಿಪರ ಜನರ ಪ್ರತಿರೋಧದಿಂದ ಅರ್ಧಕ್ಕೆ ನಿಂತಿದೆ. ತಿಪಟೂರಿಗೆ ಬೆಂಕಿ ಇಕ್ಕಲು ಕಾದಿರುವ ಇವರಿಗೆ ಕಡಿವಾಣ ಹಾಕದಿದ್ದರೆ ಮತ್ತೊಮ್ಮೆ ಗರಿಗೆದರುತ್ತಾರೆ. ಅದಕ್ಕೆ ಕಾನೂನು ಕ್ರಮ, ಜನರ ಎಚ್ಚರದ ಪ್ರತಿರೋಧ ಅಗತ್ಯ.

■ ಅಲ್ಲಾ ಬಕಾಷ್


ಈಗಿನ ಒಂದು ದಿನದ ಸಿಇಟಿ ಯನ್ನು ಎರಡು ದಿನಕ್ಕೆ ವಿಸ್ತರಿಸಬೇಕು ಹಾಗೂ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ ಕೇಂದ್ರೀಯ ಶಾಸನವನ್ನು ಕೂಡಲೇ ಜಾರಿಗೆ ತರಬೇಕು ಮುಂತಾದ ಬೇಡಿಕೆಗಳಿಗೆ ಆಗ್ರಹಿಸಿ ಎಸ್‌ಎಫ್‌ಐ ಬೆಂಗಳೂರಿನಲ್ಲಿ ನಡೆಸಿದ ಪ್ರತಿಭಟನೆಯ ಚಿತ್ರ

ಕಾಣೆಯಾಗಿವೆ ರಾತ್ರಿಗಳು

ಅವ್ವನ ಸೆರಗು
ಹೊದ್ದು
ಮಲಗಿದ ರಾತ್ರಿಗಳು
ಇನಿಯನ ತಬ್ಬಿ
ಹಿಡಿದು
ಮಲಗಿದ ರಾತ್ರಿಗಳು
ಅಜ್ಜ ಸತ್ತಾಗ
ಭಜನೆ ಮಾಡಿದ
ರಾತ್ರಿ
ಮನೆಯ ಮಂದಿನ
ಬೆಂಕಿ ನಂದಿ
ಬೂದಿಯಾದಂತೆ



ಐಟಿ ಬಿಟಿ
ಕಂಪನಿಗಳ ಹಗಲುಗಳಿಗೆ
ಮುಡುಪಿಟ್ಟು.
ಕಾಣೆಯಾಗಿವೆ
ಬುದ್ದ ಎದ್ದ
ರಾತ್ರಿಗಳು

– ಬಿ.ಶ್ರೀನಿವಾಸ, ಹಾವೇರಿ

ಹಾಸನದ 'ನಲ್ಲೂರ' ಇನ್ನೊಂದು 'ಬಿಹಾರ'?

ಊಟ ಕೇಳಿದವನ ಪ್ರಾಣಕ್ಕೆ ಸಂಚಕಾರ

"ದೂರವಾಣಿ ಕರೆ ಬಂದ ಕೂಡಲೇ ಪೊಲೀಸರು ಸ್ಥಳಕ್ಕೆ ತೆರಳಿದ್ದರೆ ಆತನ ಪ್ರಾಣ ಉಳಿಸಬಹುದಿತ್ತು. ಈ ಮಾತನ್ನು ಹೆಚ್ಚಾಗಿ ಚಲನಚಿತ್ರದಲ್ಲಿ ಯಾವುದಾದರೂಂದು ಹೀಂಸಾತ್ಮಕ ಘಟನೆ ನಡೆದ ನಂತರ ಪೊಲೀಸರ ಆಗಮನವಾದರೆ ನೆರೆದವರು ಹೇಳುವ ಮಾತಾದರೂ, ಈ ಮೇಲಿನ ಮಾತು ಮಾತ್ರ ಹಾಸನ ಜಿಲ್ಲೆಯಾದ್ಯಂತ ಜನಸಾಮಾನ್ಯರು ಆಡಿಕೊಳ್ಳುತ್ತಿರುವುದು ಮಾಮೂಲಾಗಿದೆ.

"ನಲ್ಲೂರು" ಒಂದು ಪುಟ್ಟ ಗ್ರಾಮ. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನಲ್ಲಿದೆ. ಈ ಗ್ರಾಮದವರೆಂದರೆ ಇತರೆ ಗ್ರಾಮದವರಿಗೆ ಅಷ್ಟೇನೂ ಸದಭಿಪ್ರಾಯವಿರಲಿಲ್ಲ. ಸುತ್ತಮುತ್ತಲಿನ ಗ್ರಾಮದವರನ್ನು ಹೆದರಿಸುವ, ಬೇರಾರೂ ಉಸಿರೆತ್ತದಂತೆ ನೋಡಿಕೊಂಡು ಬಂದವರೆಂಬ ಪ್ರತಿಷ್ಠೆ ಮೆರೆದವರೆಂಬ ಮಾತುಗಳು ಇಲ್ಲಿನ ಕೆಲವರ ಬಗ್ಗೆ ಅಲ್ಲಲ್ಲಿ ಕೇಳಿಬರುತ್ತಿವೆ. ಈ ಪ್ರತಿಷ್ಠೆಯೇ ಒಬ್ಬ ಅಮಾಯಕನನ್ನು ಬಲಿ ತೆಗೆದುಕೊಂಡಿದೆ.

ಊಟಕ್ಕಾಗಿ ಕಾದು ನಿಂತರು

ಕಳೆದ ಭಾನುವಾರ ರಾತ್ರಿ ಈ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ತೆರಳುತ್ತಿದ್ದವರು ಪೂಜೆ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಸಾಮಾನ್ಯವಾಗಿ ಧ್ವನಿವರ್ಧಕ ಹಾಕಿರುತ್ತಾರೆ. ಈ ಧ್ವನಿವರ್ಧಕದ ಧ್ವನಿಯನ್ನು ಹುಡುಕುತ್ತಾ ಪಕ್ಕದ ದೊಡ್ಡಗನ್ನಿ ಗ್ರಾಮದ ಶಿವನಂಜಯ್ಯ ಪೂಜೆ ಮಾಡುತ್ತಿರುವ ಸ್ಥಳಕ್ಕೆ ಬಂದು ಊಟಕ್ಕಾಗಿ ಕಾದುನಿಂತರು. ತಡ ರಾತ್ರಿಯವರೆಗೂ ಊಟ ನೀಡದೇ ಇದ್ದಾಗ, ಎರಡು ದಿನಗಳಿಂದ ಹಸಿವಿನಿಂದಿದ್ದ ಈತ ಅಲ್ಲೇ ಪಕ್ಕದ ಮನೆಗೆ ನೇರವಾಗಿ ಹೋದರು. ಆ ಮನೆಯಲ್ಲಿದ್ದ (ಒಂಟಿ) ಮಹಿಳೆಗೆ ಊಟ ಕೊಡಿ ಎಂದು ಕೇಳಿದ್ದಾರೆ. ಆತ ಊಟ, ನೀರು ಕೇಳಿದ್ದನ್ನು ತಪ್ಪಾಗಿ ತಿಳಿದುಕೊಂಡ ಆಕೆ ಕಿರುಚಾಡಿದಳು. ಆಕೆ ಕಿರುಚಿದ್ದನ್ನು ಕೇಳಿದ ಪೂಜೆಯಲ್ಲಿದ್ದ ಮಾಲಾಧಾರಿಗಳು ಪೂಜೆ ಬಿಟ್ಟು ಓಡಿಬಂದು ಆತನನ್ನು ಮನೆಯಿಂದ ನೇರವಾಗಿ ಎಳೆದು ತಂದು ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿದರು. ಶಿವನಂಜಯ್ಯನವರಿಗೆ ಮಾತು ಸ್ಪಷ್ಟತೆ ಇಲ್ಲದೇ ಇರುವುದರಿಂದ ಕೈ ಸನ್ನೆ ಮಾಡಿ ಏನೇನು ಹೇಳಲು ಪ್ರಯತ್ನ ಪಟ್ಟರೂ ಕೇಳುವ ಸ್ಥಿತಿಯಲ್ಲಿರದ ಮಾಲೆ ಹಾಕಿದ ಯುವಕರು ದೊಣ್ಣೆ, ಕಲ್ಲಿನಿಂದ ಹೊಡೆದದ್ದಲ್ಲದೆ, ಸೀಮೆ ಎಣ್ಣೆ ಸುರಿದು ಕೈ, ಕಾಲು ಮತ್ತು ಎದೆಭಾಗಕ್ಕೆ ಬೆಂಕಿ ಹಚ್ಚಿ ವಿಕೃತ ಸಂತೋಷದಿಂದ ಕೇಕೆ ಹಾಕುತ್ತಿದ್ದಾರೆ. ಇದರಿಂದ ದೈಹಿಕವಾಗಿ ಬಳಲಿದ್ದ ಆತ ಬೆಳಿಗ್ಗೆ ಕೊನೆಯುಸಿರೆಳೆದರು.

ಶಿವನಂಜಯ್ಯರಿಗೆ 45 ವರ್ಷವಾಗಿದ್ದು ಈ ಹಿಂದೆ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ನಿರ್ವಹಿಸಿದ್ದರು. ತದನಂತರ ಅನಾರೋಗ್ಯದ ಕಾರಣದಿಂದ ತನ್ನ ಮೂಲವೃತ್ತಿ ಕ್ಷೌರಿಕ ಕೆಲಸವನ್ನು ಮುಂದುವರೆಸುತ್ತಾ ಬಂದಿದ್ದರು. ಸೆಕ್ಯುರಿಟಿ ಗಾರ್ಡ್ ಆಗಿದ್ದಾಗಲೂ, ಕ್ಷೌರಿಕನಾಗಿ ಸೇವೆ ಸಲ್ಲಿಸುತ್ತಿದ್ದಾಗಲೂ ಪ್ರಾಮಾಣಿಕನಾಗಿದ್ದಾರೆಂದು ಆ ಗ್ರಾಮದ ಜನರು ಈಗಲೂ ಹೇಳುತ್ತಿದ್ದಾರೆ. ಇವರಿಗೆ 2 ಹೆಣ್ಣುಮಕ್ಕಳಿದ್ದು ಹಿರಿಯ ಮಗಳಿಗೆ ಮದುವೆ ಮಾಡಿಸುವಾಗ ಮಾಡಿದ್ದ ಸಾಲವನ್ನು ತೀರಿಸಲು ಮನೆಯಲ್ಲಿದ್ದವರೆಲ್ಲರೂ ದುಡಿಯಲು ನಿರ್ಧರಿಸಿ ಈತನ ಹೆಂಡತಿ ತನ್ನ ಮಕ್ಕಳೊಂದಿಗೆ ಬೆಂಗಳೂರಿನ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ. ಈತ ಮಾತ್ರ ಒಬ್ಬಂಟಿಯಾಗಿಯೇ ನಲ್ಲೂರಿನಲ್ಲೇ ಇದ್ದು ಊಟಕ್ಕೆ ತೊಂದರೆಯಿದ್ದುದರಿಂದ ಅಕ್ಕಪಕ್ಕದ ಗ್ರಾಮಗಳಲ್ಲಿ ಓಡಾಡಿಕೊಂಡು ಹಲವರಿಂದ ಊಟ ಕೇಳಿ ಪಡೆಯುತ್ತಿದ್ದರು.

ಮಾಲಾಧಾರಿಗಳು ಸೇರಿದಂತೆ ಅಲ್ಲಿನ ಹುಡುಗರು ವಿಕೃತ ಸಂತೋಷಕ್ಕೆ ಶಿವನಂಜಯ್ಯನನ್ನು ಕಂಬಕ್ಕೆ ಕಟ್ಟಿ ಥಳಿಸಿದರೂ ಅಲ್ಲಿದ್ದ ಹಿರಿಯರು ವಿವೇಚನೆಯಿಂದ ವರ್ತಿಸಲಿಲ್ಲ. ಶಿವನಂಜಯ್ಯ ಊಟ ಕೇಳಿದ ಮನೆಯಲ್ಲಿದ್ದ ಮಹಿಳೆಯ ಪತಿ ಮಂಜು ಮಾಲಾಧಾರಿಗಳ ಮುಖಂಡನಾಗಿರುವ ಕಾರಣ ಅಯ್ಯಪ್ಪ ಸ್ವಾಮಿ ಭಕ್ತರು ಇರುಮುಡಿ



ಹೊಡೆತದಿಂದ ಕಟ್ಟಿದ್ದ ಕಂಬದಲ್ಲೇ ಸಾವು

ಕಟ್ಟಿಸುವುದನ್ನು ಅರ್ಧದಲ್ಲೇ ಬಿಟ್ಟು ಓಡಿಬಂದು ಅಮಾಯಕನನ್ನು ಥಳಿಸಿ ತಮ್ಮ ಕ್ರೌರ್ಯವನ್ನು ಸಾರ್ವಜನಿಕರ ಎದುರೇ ಮೆರೆದರು.

'ಪ್ರತಿಷ್ಠೆ'ಯ ಮಾತು

"ನಮ್ಮ ಊರಿನವರೆಂದರೆ ತಾಲ್ಲೂಕಿನಲ್ಲೇ ಹೆದರುವ ವಾತಾವರಣ ಇದೆ. ಹಾಗಿದ್ದರೂ ನಮ್ಮ ಊರಿನಲ್ಲೇ ಕಳ್ಳತನಕ್ಕೆ ಬಂದಿದ್ದಾನೆಂದರೆ ಬಿಡುವುದುಂಟಾ?' ಎಂಬ ಪ್ರತಿಷ್ಠೆ ಮಾತುಗಳನ್ನಾಡುತ್ತಲೇ ಶಿವನಂಜಯ್ಯನನ್ನು ಥಳಿಸುತ್ತಿದ್ದರಂತೆ.

ಪೊಲೀಸರ ಮೀನಮೇಷ

ಮೂರು ವರ್ಷಗಳ ಹಿಂದೆ ಹಾಸನ ತಾಲ್ಲೂಕಿನ ದ್ಯಾಪಲಾಪುರದಲ್ಲಿ ಪೊಲೀಸರ ನಿರ್ಲಕ್ಷ್ಯದಿಂದ ಸುಮಾರು 80 ಮನೆಗಳಿಗೆ ಪುಂಡರ ಗುಂಪು ಹಾಡುಹಗಲೇ ಬೆಂಕಿ ಹಚ್ಚಿದ್ದು ಜಿಲ್ಲೆಗೆ ಕುಖ್ಯಾತಿಯ ಕಳಂಕ ತಂದಿತ್ತು. ದ್ಯಾಪಲಾಪುರದಲ್ಲಿ ಜೋಡಿ ಕೊಲೆ ನಡೆದ ಮಾಹಿತಿ ಲಭಿಸಿದರೂ ಪೊಲೀಸರು ಸ್ಥಳಕ್ಕೆ ತೆರಳಲು ಮೀನಾಮೇಷ ಎಣಿಸುತ್ತಿರುವಾಗ ಪುಂಡರ ಗುಂಪು ಕ್ರಿಯೆಗೆ ಪ್ರತಿಕ್ರಿಯೆ ಎನ್ನುವಂತೆ ಸುಮಾರು 80 ಮನೆಗಳಿಗೆ ಬೆಂಕಿ ಹಚ್ಚಿತ್ತು. ಈ ಘಟನೆ ನಡೆಯುವ ಒಂದು ವರ್ಷ ಮೊದಲು ಹಾಸನ ನಗರದ ಬೊಮ್ಮನಾಯ್ಕನ ಹಳ್ಳಿಯಲ್ಲಿ ಸತ್ತ ಮಗುವನ್ನು ಬದುಕಿಸುತ್ತೇನೆಂದು ಒಬ್ಬರು ಹೇಳಿದ್ದನ್ನು ನಂಬಿದ ಇಡೀ ಜಿಲ್ಲೆಯ ಸುಮಾರು ಹತ್ತುಸಾವಿರಕ್ಕೂ ಮಿಕ್ಕ ಜನ ಕುತೂಹಲದಿಂದ ಪವಾಡದ ಸ್ಥಳಕ್ಕೆ ತೆರಳಿದಾಗಲೂ ಕೇವಲ ರಕ್ಷಣೆಗಾಗಿ ಬೆರಳೆಣಿಕೆಯ ಪೊಲೀಸರು ಇದ್ದು, ನಂತರ ಅಲ್ಲಿ ಸೇರಿದ ಸಾವಿರಾರು ಜನರು ತಾವು ಮೋಸ ಹೋಗಿದ್ದೀವಿ ಎಂದು ತಿಳಿದಾಗ ಮಗು ಬದುಕಿಸುತ್ತೇನೆ ಎಂದು ನಂಬಿಸಿದ ಮಹಿಳೆಯನ್ನು ರೊಚ್ಚಿಗೆದ್ದು ಥಳಿಸಿ ಆಕೆಯ ಮನೆಗೆ ಬೆಂಕಿ ಹಚ್ಚಿ ಅನಾಹುತಕ್ಕೆ ಕಾರಣವಾಯಿತು. ಈ ಪ್ರಕರಣದಲ್ಲಿ ಜನರನ್ನು ಮೋಸಗೊಳಿಸುವ ಪ್ರಯತ್ನಗಳ ಬಗ್ಗೆ ಹಾಗೂ 'ಪವಾಡ' ನಿರೀಕ್ಷಿಸಲು ಜಿಲ್ಲೆಯ ನಾನಾ ಭಾಗದಿಂದ ಸಾವಿರಾರು ಜನರು ಸೇರುವರೆಂಬ ಮುನ್ಸೂಚನೆ ಪೊಲೀಸ್ ಇಲಾಖೆಗೆ ದೊರಕಿದ್ದರೂ ಆಕೆಯನ್ನು ಮೋಸಗೊಳಿಸುವ ಪ್ರಯತ್ನದ ಆಪಾದನೆಯ ಮೇಲೆ ಮೊದಲೇ ವಶಕ್ಕೆ ತೆಗೆದುಕೊಂಡಿದ್ದರೆ ಇಂತಹ ದುರ್ಘಟನೆ ನಡೆಯುತ್ತಿರಲಿಲ್ಲ.

'ಬೆಳಿಗ್ಗೆ ಬರುತ್ತೇವೆ'

ಶಿವನಂಜಯ್ಯನನ್ನು ಕಟ್ಟಿಹಾಕಿ ಥಳಿಸುತ್ತಿದ್ದುದನ್ನು ಗಮನಿಸಿದ ಓರ್ವ ಚನ್ನರಾಯಪಟ್ಟಣದ ಪೊಲೀಸ್ ಠಾಣೆಗೆ ದೂರವಾಣಿ ಮುಖಾಂತರ "ಇಲ್ಲೊಬ್ಬ ಕಳ್ಳನನ್ನು ಕಟ್ಟಿ ಹಾಕಿದ್ದೇವೆ ಬೇಗ ಬನ್ನಿ" ಎಂದು ತಿಳಿಸಿದರೂ 'ಬೆಳಿಗ್ಗೆವರೆಗೆ ಅಲ್ಲೇ ಕಟ್ಟಿಹಾಕಿರಿ ಬೆಳಗ್ಗೆ ಬರುತ್ತೇವೆ' ಎಂದು ಪೊಲೀಸರು ಉತ್ತರ ನೀಡಿದ್ದು ಸಹಾ ಪುಂಡರಿಗೆ ಮಧ್ಯರಾತ್ರಿವರೆಗೂ ಆತನಿಗೆ ಹಿಂಸೆ ನೀಡಲು ಸಾಧ್ಯವಾಯಿತು.

ಈ ಮೇಲಿನ ಮೂರು ಪ್ರಕರಣಗಳನ್ನು ಗಮನಿಸಿದಾಗ ಪೊಲೀಸ್ ವೈಫಲ್ಯ ಎದ್ದುಕಾಣುತ್ತಿದೆ. ಈ ಮೂರು ಪ್ರಕರಣದಲ್ಲೂ ಪೊಲೀಸ್ ಇಲಾಖೆಗೆ ಸೂಕ್ತ ಸಮಯದಲ್ಲಿ ಮಾಹಿತಿ ಲಭ್ಯವಿದ್ದರೂ ತಮ್ಮ ಅಸಡ್ಡೆ, ಉದಾಸೀನತೆ ಈ ಎಲ್ಲಾ ಘಟನೆಗಳ ಬೆಳವಣಿಗೆಗೆ ಕಾರಣವಾಯಿತು.

ಶಿವನಂಜಯ್ಯನನ್ನು ಕೊಲೆಗೈದ ಪ್ರಕರಣವನ್ನು ಪೊಲೀಸರು ತಡವಾಗಿ ಎಚ್ಚೆತ್ತುಕೊಂಡರೂ, ಹತ್ಯೆಗೆ ಕಾರಣರಾದವರನ್ನು ಬಂಧಿಸಿದರು. ಇರುಮುಡಿಕಟ್ಟಿ ಶಬರಿಮಲೆಗೆ ಹೋಗಬೇಕಾದ ಮಾಲಾಧಾರಿಗಳು ನೇರವಾಗಿ ಜೈಲಿಗೆ ಹೋಗಬೇಕಾದ ವಿಶೇಷ ಪ್ರಸಂಗ ಜಿಲ್ಲೆಯ ಪೊಲೀಸ್ ವೈಫಲ್ಯದಿಂದ ನಡೆದೇ ಹೋಯಿತು.

ಹಮೀದ್ ಶಾವಲ್
ಹಾಸನ

ರಾಜಿ ಕಬೂಲಿ!!

ಈ ಪ್ರಕರಣವನ್ನು ರಾಜಿ ಸಂಧಾನದ ಮೂಲಕ ಪರಿಹರಿಸುವ ಮತ್ತು ಮೃತರ ಕುಟುಂಬಕ್ಕೆ ಹಣದ ಆಮಿಷ ತೋರಲು ಯತ್ನಿಸುತ್ತಿರುವ ವಿಷಯ ಈಗ ಬೆಳಕಿಗೆ ಬಂದಿದೆ. ರಾಜಿ ಸಂಧಾನದಲ್ಲಿ ಅಧಿಕಾರಿಗಳು ಮತ್ತು ರಾಜಕೀಯ ಮುಖಂಡರು ಭಾಗವಹಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಶಿವನಂಜಯ್ಯ ಕೆಳವರ್ಗದ ಕೋಮಿನವನಾಗಿದ್ದು, ಪ್ರಬಲ ಕೋಮಿನವರು ಒತ್ತಡ ತಂದು ರಾಜಿ ಮಾಡಲು ಯತ್ನಿಸುತ್ತಿದ್ದಾರೆ. ಈ ಪೈಶಾಚಿಕ ಕೃತ್ಯ ಎಸಗಿದವರನ್ನು ಶಿಕ್ಷೆಯಿಂದ ತಪ್ಪಿಸಲು ರಾಜಿ ಸಂಧಾನ ನಡೆಸುತ್ತಿರುವುದನ್ನು ಶಿವನಂಜಯ್ಯನ ಗ್ರಾಮಸ್ಥರು ಖಂಡಿಸಿದ್ದು ಹಸಿದು ಅನ್ನ ಕೇಳಲು ಬಂದವನಿಗೆ ಆಹಾರ ನೀಡುವುದು ಮಾನವೀಯತೆ, ಆದರೆ ಅಮಾಯಕನನ್ನು ಕೊಲ್ಲುವುದು ಅಪರಾಧ ಎಂದು ಹೇಳುತ್ತಿದ್ದಾರೆ. ರಾಜಿ ಸೂತ್ರ ಮಾಡಿ ಇಡೀ ಪ್ರಕರಣವನ್ನು ದಿಕ್ಕುತಪ್ಪಿಸುತ್ತಿರುವ ಹಾಗೂ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿರುವ ಅಧಿಕಾರಿಗಳ ವಿರುದ್ಧ ಕಿಡಿ ಕಾರಿದ್ದಾರೆ.

ಬಡವನೊಬ್ಬನನ್ನು ಹಿಗ್ಗಾಮುಗ್ಗಾ ಥಳಿಸಿ ಕೊಲೆ ಮಾಡಿದರೂ ಅಧಿಕಾರಿ ವರ್ಗ ಗಂಭೀರವಾಗಿ ಕ್ರಮಕ್ಕೆ ಕೈಗೊಂಡಂತೆ ಕಂಡುಬರುತ್ತಿಲ್ಲ, ಅಲ್ಲದೆ ಇದುವರೆಗೂ ಜನ ಪ್ರತಿನಿಧಿಗಳು ಈ ಕುರಿತು ಚಕಾರ ಎತ್ತದಿರುವುದು ಸಂಶಯಕ್ಕೆ ಎಡೆ ಮಾಡಿದೆ. ಆರ್ಥಿಕವಾಗಿ ದುರ್ಬಲನಾದವನು ಸಮಾಜದಲ್ಲಿ ಬದುಕಲು ಹಕ್ಕಿಲ್ಲವೇ?

ರಾಜಿ ಪ್ರಯತ್ನ ಯಶಸ್ವಿಯಾದರೆ ಹತ್ಯೆ ಆರೋಪಿಗಳು ಜೈಲಿನಿಂದ ಹೊರಬರುವುದಲ್ಲದೆ, ಹಣವಿದ್ದವರು ಕೊಲೆ ಮಾಡಬಹುದು- ಆಮೇಲೆ ರಾಜಿ ಮಾಡಿಕೊಳ್ಳಬಹುದು ಎನ್ನುವ ಹೊಸ ಯುಗ ಆರಂಭವಾಗುವ ಸಾಧ್ಯತೆ ಇದೆ.

ದೂರದ ಬಿಹಾರದಲ್ಲಿ ಇಂತಹ ಘಟನೆಯನ್ನು ಕೇಳಿದ್ದೇವೆ, ಅವರ ಸಮಾನಕ್ಕೆ ನಲ್ಲೂರು ಗ್ರಾಮಸ್ಥರು ನಿಂತಿದ್ದು ವಿಷಾದನೀಯ. ಪ್ರಕರಣದ ನಿಜವಾದ ಆರೋಪಿಗಳಿಗೆ ಶಿಕ್ಷೆಯಾದರೆ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ ಪ್ರಕರಣಗಳನ್ನು ರಾಜಿ ಮಾಡುವ ನೀಚ ರಾಜಕಾರಣಿಗಳಿಗೆ ಸರಿಯಾದ ಬುದ್ಧಿ ಕಲಿಸಿದಂತಾಗುವುದು.

ಈ ಬುದ್ಧಿಜೀವಿಗಳೇಕೆ ಎಡಪಕ್ಷಗಳನ್ನು ದೂಷಿಸುವಲ್ಲಿ ನಿರತರಾಗಿದ್ದಾರೆ?

ಪ್ರಭಾತ್ ಪಟ್ನಾಯಕ್ - ಪ್ರಬೀರ ಪುರಕಾಯಸ್ಥರ ವಿಶ್ಲೇಷಣೆ

ಸುಮಾರು ಒಂದು ವರ್ಷದ ಹಿಂದೆ ಪಶ್ಚಿಮ ಬಂಗಾಳದ ನಂದಿಗ್ರಾಮದ ಸಾವಿರಾರು ಬಡಜನರನ್ನು ಅವರ ಮನೆಗಳಿಂದ ಹೊಡೆದೋಡಿಸಿ ಶರಣಾರ್ಥಿ ಶಿಬಿರಗಳಿಗೆ ಅಟ್ಟಲಾಯಿತು. ಅವರು ಸಿಪಿಐ(ಎಂ) ಬೆಂಬಲಿಗರಾಗಿದ್ದುದೇ ಅವರ ಏಕೈಕ ತಪ್ಪು. ಸುಮಾರು ಎಂಟು ತಿಂಗಳು ಸಂಕಟ ಅನುಭವಿಸಿದ ನಂತರ ಈಗ ಅವರು ತಂತಮ್ಮ ಅಳಿದುಳಿದ ಮನೆಗಳಿಗೆ ಮರಳಿದ್ದಾರೆ. ಇದಕ್ಕೆ ಪಶ್ಚಿಮ ಬಂಗಾಳದ ಜನಗಳಿಂದ ಕಳೆದ ಮೂರು ದಶಕಗಳಿಂದ ಸತತವಾಗಿ ತಿರಸ್ಕೃತರಾಗುತ್ತಿರುವ ಅಲ್ಲಿನ ಸಿಪಿಐ(ಎಂ) ವಿರೋಧಿ ಶಕ್ತಿಗಳು ಬೊಬ್ಬೆ ಹಾಕುತ್ತಿವೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಇತ್ತೀಚಿನ ವರೆಗೂ ಜಾಗತೀಕರಣ-ವಿರೋಧಿ ಹೋರಾಟದಲ್ಲಿ ಎಡಪಕ್ಷಗಳ ಜೊತೆಗಿದ್ದವರೂ, ಮುಖ್ಯವಾಗಿ ಹಲವು ಬುಧ್ಧಿಜೀವಿಗಳು ಕೂಡಾ ಈ ತಿರಸ್ಕೃತ ಶಕ್ತಿಗಳ ಜೊತೆಗೆ ಕೈ ಜೋಡಿಸುತ್ತಿದ್ದಾರೆ. ಅಲ್ಲಿ ಜನಗಳ ಇಚ್ಛೆಗೆ ವಿರುದ್ಧವಾಗಿ ರಾಸಾಯನಿಕ ಸಂಕೀರ್ಣವನ್ನೇನನ್ನೂ ಸ್ಥಾಪಿಸುವುದಿಲ್ಲ ಎಂದು ಎಡರಂಗ ಸರಕಾರ ಕಳೆದ ಮಾರ್ಚ್ ತಿಂಗಳಲ್ಲೆ ಘೋಷಿಸಿದ್ದರೂ ಎಡಪಂಥೀಯರ ವಿರುದ್ಧ ವಿಷಕಾರುತ್ತಿದ್ದಾರೆ; ನಂದಿಗ್ರಾಮದ 2007ರ ಘಟನೆ ಮತ್ತು ಗುಜರಾತಿನ 2002ರ ಅಲ್ಪಸಂಖ್ಯಾತರ ಮಾರಣಹೋಮವನ್ನು ಹೋಲಿಸಲಾಗುತ್ತಿದೆ! ಅದೇ ರೀತಿ ನಂದಿಗ್ರಾಮ ಮತ್ತು ಕರ್ನಾಟಕದ ನಂದಿಗುಡಿಯ ನಡುವೆ ಯಾವುದೇ ಸಾಮ್ಯ ಇಲ್ಲದಿದ್ದರೂ ಅವನ್ನು ಹೋಲಿಸಲಾಗುತ್ತಿದೆ. ಇದು ನಿಜಕ್ಕೂ ಬೇಸರದ ಸಂಗತಿ.

ಇದು ನಮ್ಮ ದೇಶದ ಪ್ರಗತಿಶೀಲ ಶಕ್ತಿಗಳಲ್ಲಿ ಮಾತ್ರವಲ್ಲ, ನೋಮ್ ಚೋಮ್ಸ್ಕಿ, ವಾಲ್ಡನ್ ಬೆಲ್ಲೋ, ತಾರೀಖ್ ಅಲಿ ಮುಂತಾದ ಅಂತರ್ರಾಷ್ಟ್ರೀಯ ಮಟ್ಟದ ಚಿಂತಕರಲ್ಲೂ ಆತಂಕ ಮೂಡಿಸಿದೆ. ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟ ಈಗ ನಮ್ಮ ಸಮಯದ ಪ್ರಮುಖ ಹೋರಾಟ, ಎಡ ಪಕ್ಷಗಳು ಈ ಹೋರಾಟದಲ್ಲಿ ಜನಪರ ಶಕ್ತಿಗಳ ಪಾಳೆಯದಲ್ಲಿನ ಅನಿವಾರ್ಯ ಭಾಗ, ಜನಪರ ಶಕ್ತಿಗಳ ಐಕ್ಯತೆಯಲ್ಲಿ ಒಡಕು ತರಲು ಈಗ ಯಾವುದೇ ಆಧಾರ ಉಳಿದಿಲ್ಲದಿರುವಾಗ ಅಂತಹ ಯಾವುದೇ ಕೃತ್ಯ ಮಾಡಬೇಡಿ ಎಂದು ಅವರು ಕೇಳಿಕೊಂಡರೂ ಅವರನ್ನೇ 'ಸಿಪಿಐ(ಎಂ)-ಪರ' ನಿಲುವು ತಳೆದಿದ್ದಾರೆ ಎಂದು ದೂಷಿಸಲಾಗುತ್ತಿದೆ. ಹೀಗೇಕಾಗುತ್ತಿದೆ?


ಸಾಮ್ರಾಜ್ಯಶಾಹೀ ಜಾಗತೀಕರಣವನ್ನು ವಿರೋಧಿಸುತ್ತಿರುವ ಮೈತ್ರಿಕೂಟದಲ್ಲಿ ಆಂತರಿಕ ಮತಬೇಧಗಳು ಇದ್ದವು ಎಂಬುದು ಎಲ್ಲರಿಗೂ ಗೊತ್ತು. ಅವೀಗ ಒಡಕಿನ ಹಂತ ತಲುಪಿವೆ ಎಂಬುದನ್ನು ಇದು ಸೂಚಿಸುತ್ತದೆ ಎಂದು ವಿಜ್ಞಾನ ಮತ್ತು ಅಭಿವೃದ್ಧಿ ಪ್ರಶ್ನೆಗಳ ಅಧ್ಯಯನಕಾರರಾದ ಪ್ರಬೀರ್ ಪುರಕಾಯಸ್ಥ ಹೇಳಿದರೆ, ಜಾಗತೀಕರಣದ ಪ್ರಭಾವದಲ್ಲಿ ರಾಜಕೀಯವನ್ನು ಧ್ವಂಸಗೊಳಿಸುವ ಪ್ರಕ್ರಿಯೆಯ ಸಂಕೇತ ಇದು ಎನ್ನುತ್ತಾರೆ ಪ್ರಸಿದ್ಧ ಜನಪರ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಆದ್ದರಿಂದಲೇ ಈ ಬುದ್ಧಿಜೀವಿಗಳಿಗೆ ಚೋಮ್ಸ್ಕಿಯವರ ಒಂದು ರಾಜಕೀಯ ನಿಲುವು 'ಸಿಪಿಐ(ಎಂ)-ಪರ' ನಿಲುವಾಗಿ ಕಾಣುತ್ತದೆ ಎನ್ನುತ್ತಾರೆ ಅವರು. ಸಾಮ್ರಾಜ್ಯಶಾಹಿಗಳ ಕಬಂಧ ಬಾಹುಗಳ ಅರಿವೇ ಇಂತಹವರಿಗೆ ಇದ್ದಂತಿಲ್ಲ ಎನ್ನುತ್ತಾರೆ ಈ ಇಬ್ಬರೂ ಅಧ್ಯಯನಕಾರರು.

> ನಂದಿಗ್ರಾಮದ ಬಡರೈತರು ನಿರಾಶ್ರಿತ ಶಿಬಿರಗಳಿಂದ ಕೊನೆಗೂ ತಮ್ಮ ಮನೆಗಳಿಗೆ ಹಿಂದಿರುಗಲು ಪ್ರಯತ್ನಿಸಿದರೆ ಈ ಬುದ್ಧಿಜೀವಿಗಳಿಗೇನು ಕಷ್ಟ? ಇವರೇಕೆ ಇಷ್ಟೊಂದು ಎಗರಾಡಬೇಕು? ನಂದಿಗ್ರಾಮದ ಘಟನೆಗಳನ್ನು ಗುಜರಾತಿನ 2002ರ ಮಾರಣಹೋಮದೊಂದಿಗಾಗಲೀ, ಕರ್ನಾಟಕದ ನಂದಗುಡಿಯೊಂದಿಗಾಗಲೀ ಹೋಲಿಸುವವರು ಎಂಥವರು?

ಅಭಿವೃದ್ಧಿಯೇ ಬೇಡವೆಂದರೆ ಹೇಗೆ?

ಎಡ ಪಕ್ಷಗಳ ವಿರುದ್ಧ ವಿಷಕಾರುತ್ತಿರುವ ಇವರಲ್ಲಿ ಹಲವರಿಗೆ ಇದು ಬಂಡವಾಳಶಾಹೀ ಅಭಿವೃದ್ಧಿಯ ಪ್ರಶ್ನೆಯಲ್ಲ, ಕೇವಲ ಅಭಿವೃದ್ಧಿಯ ಪ್ರಶ್ನೆ. ನಿಜ, ಬಂಡವಾಳಶಾಹಿ ಅಭಿವೃದ್ಧಿ ಅಸಮಾನತೆಗಳನ್ನು ಹೆಚ್ಚಿಸುತ್ತದೆ. ಆದ್ದರಿಂದ ಅಭಿವೃದ್ಧಿಯೇ ಬೇಡ ಎಂಬ ನಿಲುವು ಇವರದ್ದು.

'ನಾವು ಜಾಗತೀಕರಣಕ್ಕೆ ಪರ್ಯಾಯವನ್ನು ಏಕೆ ಹುಡುಕಬೇಕು' ಪಾರಂಪರಿಕ ಉತ್ಪಾದನಾ ವಿಧಾನವೇ ನಮ್ಮ ಪರ್ಯಾಯ' ಎನ್ನುವ ಇವರಿಗೆ ಸಹಜವಾಗಿಯೇ ವಿಜ್ಞಾನ, ತಂತ್ರಜ್ಞಾನ ಮತ್ತು ಅಭಿವೃದ್ಧಿ 'ಶತ್ರು'ಗಳಾಗಿ ಕಾಣುತ್ತವೆ, ಭೂಸುಧಾರಣೆ ಮತ್ತು ಕೈಗಾರಿಕೀಕರಣ ಕೂಡಾ ಅವರ ಅಜೆಂಡಾದಲ್ಲೇ ಇಲ್ಲ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥರವರು. ಈ ಮಂದಿ ಪರ್ಯಾಯವಾಗಿ ಕಾಣುವ ಪಾರಂಪರಿಕ ಉತ್ಪಾದನಾ ವಿಧಾನದಲ್ಲಿ ಉತ್ಪಾದನಾ ಸಾಧನ ಅಂದರೆ ಭೂಮಿಯ ಒಡೆತನ ಯಾರದ್ದಾಗಿರುತ್ತದೆ ಎಂಬುದು ಅವರಿಗೆ ಸಮಸ್ಯೆಯೆ ಅಲ್ಲ!


ಮೇಧಾ ಪಾಟ್ಕರ್


ಅರುಂಧತಿ ರಾಯ್

ಎರಡನೆಯದಾಗಿ, ಇವರಲ್ಲಿ ಬಹಳಷ್ಟು ಮಂದಿಗೆ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ, ಅಭಿವೃದ್ಧಿ ಎಲ್ಲವೂ ಒಂದೇ. ಆದ್ದರಿಂದ ಅಭಿವೃದ್ಧಿಯಲ್ಲಿ, ಸಾಮ್ರಾಜ್ಯಶಾಹಿ-ವಿರುದ್ಧ ಹೋರಾಟದಲ್ಲಿ ಇವರ ಪ್ರಕಾರ ಭಾರತದ ಪ್ರಭುತ್ವಕ್ಕೆ ಅಥವಾ ಸರಕಾರಕ್ಕೆ ಯಾವುದೇ ಪಾತ್ರವಿಲ್ಲ. ಆದ್ದರಿಂದಲೆ ಭಾರತದ ಪ್ರಭುತ್ವ ಸ್ವಾತಂತ್ರ್ಯ ಸಿಕ್ಕ ಕೂಡಲೆ ಕೈಗಾರಿಕಾ ಅಭಿವೃದ್ಧಿಗಾಗಿ ನಿರ್ಮಿಸಿದ ಮೂಲರಚನೆಗಳನ್ನು, ಸಾರ್ವಜನಿಕ ರಂಗವನ್ನು ಉದಾರೀಕರಣ-ಖಾಸಗೀಕರಣ-ಜಾಗತೀಕರಣದ ನೀತಿಗಳ ಅಡಿ ಅದೇ ಪ್ರಭುತ್ವ ಕಳಚಿ ಹಾಕಲಾರಂಭಿಸಿದಾಗ ಅದರ ವಿರುದ್ಧ ಕಾರ್ಮಿಕ ಸಂಘಗಳ ಹೋರಾಟ ಇವರಿಗೆ ಅಷ್ಟು ಮುಖ್ಯವೆನಿಸಲಿಲ್ಲ.

ಸ್ವಾತಂತ್ರ್ಯದ ನಂತರ ಭಾರತದ ಪ್ರಭುತ್ವ ಕೈಗಾರಿಕಾ ಬಂಡವಾಳಕ್ಕೆ ಮೂಲರಚನೆಯನ್ನು ಒದಗಿಸಿಕೊಟ್ಟಿತು. ಈ ದೊಡ್ಡ-ದೊಡ್ಡ ಯೋಜನೆಗಳು 'ಅಭಿವೃದ್ಧಿ' ಎಂಬುದೇನೋ ನಿಜ, ಆದರೆ ಅವು ಮುಖ್ಯವಾಗಿ ಬಂಡವಾಳಶಾಹಿ ಅಭಿವೃದ್ಧಿಯಾಗಿದ್ದವು, ಅವುಗಳ ಫಲ ಹೆಚ್ಚಾಗಿ ಬಂಡವಾಳಶಾಹಿ ವರ್ಗಕ್ಕೆ ಹೋದವು. ಅಷ್ಟೇ ಅಲ್ಲ, ಈ ದೊಡ್ಡ-ದೊಡ್ಡ ಯೋಜನೆಗಳಲ್ಲಿ ನಿರ್ವಸಿತರಾದವರಿಗೆ, ಅವರು ಕಳಕೊಂಡ ಭೂಮಿಗೆ, ನೈಸರ್ಗಿಕ ಸಂಪನ್ಮೂಲಗಳಿಗೆ ಸರಿಯಾದ ಪರಿಹಾರ ದೊರೆಯಲಿಲ್ಲ. ಅವರನ್ನು ಸಮಾಜದ ಅತಿ ಕೆಳ ಹಂತಕ್ಕೆ ತಳ್ಳಲಾಯಿತು. ಈ ಮೊದಲು ಹೇಳಿದಂತೆ ಐದು ದಶಕಗಳ ಈ ಅಭಿವೃದ್ಧಿ ಅಸಮಾನತೆಗಳನ್ನು ಹೆಚ್ಚಿಸಿತು. ಆದ್ದರಿಂದ ಅಭಿವೃದ್ಧಿಯನ್ನೇ ನಿಲ್ಲಿಸಬೇಕು, ಈ ದೊಡ್ಡ ಯೋಜನೆಗಳೇ, ಅವನ್ನು ಕೈಗೊಂಡ ಪ್ರಭುತ್ವವೇ ಜನಗಳ ಶಾಂತಿಯನ್ನು ಕೆಡಿಸಿದ್ದು, ಆದ್ದರಿಂದ ಇವನ್ನು ವಿರೋಧಿಸಬೇಕು ಎಂಬುದು ಈ ಮಂದಿಯ ನಿಲುವು ಎಂದು ಪ್ರಬೀರ್ ಪುರಕಾಯಸ್ಥ ವಿಶ್ಲೇಷಿಸುತ್ತಾರೆ.

ಆ ಮಂದಿಯ ಇಂತಹ ನಿಲುವಿಗೆ ಇನ್ನೊಂದು ಕಾರಣವೂ ಇದೆ. ಈ ಅಭಿವೃದ್ಧಿಯನ್ನು ನಿಲ್ಲಿಸಿದರೆ ಬುಡಕಟ್ಟು ಜನಗಳು, ರೈತರು ತಮ್ಮ ಜೀವನಾಧಾರಗಳನ್ನು ಕಳಕೊಳ್ಳುವ ಪ್ರಸಂಗ ಬರುವುದಿಲ್ಲ ಎಂಬುದು ಅವರ ನಂಬಿಕೆ. ಆದರೆ ಇವೆಲ್ಲಾ ನಿಜವೇ? ಬಂಡವಾಳಶಾಹಿ ಆರ್ಥಿಕದಲ್ಲಿ ದೊಡ್ಡ ಯೋಜನೆಗಳಿಲ್ಲದಿದ್ದರೂ ಅರಣ್ಯಗಳು ಟಿಂಬರ್ ಮಾಫಿಯಾದ ಅಕ್ರಮಣಕ್ಕೆ ತುತ್ತಾಗುತ್ತವೆ; ರೈತರ ಜಮೀನು ಮಾರುಕಟ್ಟೆ ಶಕ್ತಿಗಳ, ರಿಯಲ್ ಎಸ್ಟೇಟ್ ಡೆವಲಪರುಗಳ ಪಾಲಾಗುತ್ತದೆ ಎಂದು ಪ್ರಬೀರ್ ಪುರಕಾಯಸ್ಥ ನೆನಪಿಸುತ್ತಾರೆ.

ಕೇವಲ ಭಿನ್ನಾಭಿಪ್ರಾಯಗಳಿಂದಷ್ಟೇ ಅಲ್ಲ

ನಂದಿಗ್ರಾಮ ಪ್ರಶ್ನೆಯನ್ನು ನಿರ್ವಹಿಸುವಲ್ಲಿ ತಪ್ಪುಗಳಾಗಿರಬಹುದು, ಇದನ್ನು ಸ್ವತಃ ಬುದ್ಧದೇವ ಭಟ್ಟಾಚಾರ್ಜಿಯವರೇ ಹೇಳಿಕೊಂಡಿರುವಾಗ ಬುದ್ದಿಜೀವಿಗಳ ತೀವ್ರ ದೂಷಣೆಗೆ ಇದಷ್ಟೆ ಕಾರಣವಿರಲಿಕ್ಕಿಲ್ಲ ಎಂಬುದು ಪ್ರಭಾತ್ ಪಟ್ನಾಯಕ್‌ರವರ ವಿಶ್ಲೇಷಣೆ. ಕೇವಲ ಇಷ್ಟೇ ಆಗಿದ್ದರೆ, ಅಥವಾ ಎಡರಂಗದ ಕೈಗಾರಿಕಾ ನೀತಿಯ ಬಗ್ಗೆ ಅವರಿಗೆ ಮೂಲಭೂತ ಭಿನ್ನಾಭಿಪ್ರಾಯಗಳಿದ್ದರೂ, ಅವರು ಈ ಬಗ್ಗೆ ಬಹಿರಂಗ ಪತ್ರ, ಮಿತ್ರತ್ವಪೂರ್ಣ ಟೀಕೆ, ಲೇಖನಗಳು ಇತ್ಯಾದಿಗಳ ಮೂಲಕ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿತ್ತು. ಆದರೆ ಅವರು ಎಡರಂಗವನ್ನು ಕೋಮವಾದಿ ಫ್ಯಾಸಿಸ್ಟರೊಂದಿಗೆ ಹೋಲಿಸುವ ಮಟ್ಟಕ್ಕೆ ಹೋಗಿರುವುದು ಕೇವಲ ಇಂತಹ ಭಿನ್ನಾಭಿಪ್ರಾಯಗಳಿಂದಷ್ಟೇ ಅಲ್ಲ; ಇವರಲ್ಲಿ ಹೆಚ್ಚಿನವರು ಮಾಜಿ ಸೋಶಲಿಸ್ಟ್ ಗುಂಪುಗಳಿಗೆ, ಎನ್ ಜಿ ಒ ಗಳಿಗೆ ಸೇರಿದವರು, ನಕ್ಸಲೀಯರು ಇತ್ಯಾದಿಗಳ ಬಗ್ಗೆ ಸಹಾನುಭೂತಿ ಹೊಂದಿದವರು ಆಗಿದ್ದು ಸಂಘಟಿತ ಎಡಪಂಥೀಯರು ಅಂದರೆ ಭಾರತದ

ಪುಟ 13 ಕ್ಕೆ

ಮತ್ತೆ ಬಾಲ ಬೆಳೆಸಿಕೊಳ್ಳುವುದು ಕಷ್ಟ ಸ್ವಾಮೀ!


ಅಭಿವೃದ್ಧಿಯನ್ನು ನಿಲ್ಲಿಸಿದ ಮಾತ್ರಕ್ಕೆ ಅಸಮಾನತೆಗಳನ್ನು ತಡೆಯಲು ಸಾಧ್ಯವಿಲ್ಲ, ಪಾರಂಪರಿಕ ಪರ್ಯಾಯ ಅಂದರೂ ಕೂಡ ಈಗಾಗಲೇ ಇರುವ ಅಸಮಾನತೆಗಳನ್ನು ಕಾಯ್ದುಕೊಳ್ಳುವುದು ಎಂದೇ ಆಗುತ್ತದೆ ಎಂಬುದು ಎಡಪಕ್ಷಗಳ ನಿಲುವು. ಒಂದು ಹೆಚ್ಚು ಸಮತ್ವದ ಸಮಾಜಕ್ಕಾಗಿ ಹೋರಾಟ ಖಂಡಿತವಾಗಿಯೂ ಸಮಾಜವನ್ನು ಪ್ರಸಕ್ತ ಬಡತನದ ಮಟ್ಟದಲ್ಲೆ ಇಡುವುದರಿಂದ ಸಾಧ್ಯವಿಲ್ಲ, ಬದಲಾಗಿ ಒಂದು ಹೆಚ್ಚು ಸಮತ್ವದ ಪರ್ಯಾಯಕ್ಕಾಗಿ ಹೋರಾಟದ ಮೂಲಕ ಮಾತ್ರ ಸಾಧ್ಯ. ಅಭಿವೃದ್ಧಿಯ ವಿರುದ್ಧವೇ ನಿಲುವು ತಳೆದರೆ, ದೊಡ್ಡ-ದೊಡ್ಡ ಯೋಜನೆಗಳ ವಿರುದ್ಧ, ಕೈಗಾರಿಕೀಕರಣದ ವಿರುದ್ಧ ನಿಲುವು ತಳೆದರೆ, ತಮ್ಮ ಜೀವನಾಧಾರವನ್ನು ಕಳೆದುಕೊಳ್ಳುವ ರೈತರು, ಬುಡಕಟ್ಟು ಜನಗಳೊಂದಿಗೆ, ತಾವು ಕೆಲಸ ಮಾಡುವ ಕಾರ್ಖಾನೆಗಳ ಮಾಲಕರ ವಿರುದ್ಧ ಹೋರಾಡುತ್ತಿರುವ ಕಾರ್ಮಿಕರು ಒಂದು ಸಮಾನತೆಯ ಸಮಾಜಕ್ಕಾಗಿ ಜತೆಗೂಡುವ ಸಾಧ್ಯತೆಯನ್ನು ತಪ್ಪಿಸಿದಂತೆಯೂ ಆಗುತ್ತದಲ್ಲವೇ?

ಪ್ರಭುತ್ವದ ಮೂಲಕ ಅಭಿವೃದ್ಧಿಯ ಪ್ರಕ್ರಿಯೆಯನ್ನು ವಿರೋಧಿಸುವುದು ಈಗೊಂದು ಫ್ಯಾಶನ್ ಆಗಿದೆ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥ. ತಾವು ಎಡ ಪಂಥೀಯರೆಂದು ಹೇಳಿಕೊಳ್ಳುವ ಕೆಲವು ಎನ್.ಜಿ.ಒ.ಗಳು(ಸರಕಾರಿಯೇತರ ಸಂಸ್ಥೆಗಳು) ಕೂಡಾ ಪ್ರಭುತ್ವ ತನ್ನ ಸಾಮಾಜಿಕ ಕ್ರಿಯೆಗಳನ್ನು ತಮಗೆ ವಹಿಸಬೇಕು ಎಂದು ಕೇಳುತ್ತಿವೆ. ಅತ್ತ ಐಎಂಎಫ್, ವಿಶ್ವಬ್ಯಾಂಕ್ ಮತ್ತಿತರ ಜಾಗತೀಕರಣದ ಸಿದ್ಧಾಂತಿಗಳು ಪ್ರಭುತ್ವದ ಆರ್ಥಿಕ ಕ್ರಿಯೆಗಳನ್ನು ಖಾಸಗಿ ಬಂಡವಾಳಕ್ಕೆ ವಹಿಸಿಕೊಡಬೇಕು ಎಂದು ಪ್ರತಿಪಾದಿಸುತ್ತಾರೆ. ಹೀಗೆ ಎನ್ ಜಿ ಒ ಗಳು ವಾಸ್ತವವಾಗಿ ಜಾಗತೀಕರಣದ ಶಕ್ತಿಗಳಿಗೆ ಪೂರಕವಾಗಿ ಕೆಲಸ ಮಾಡುತ್ತವೆಯಲ್ಲವೇ? ಆದರೆ ಎಡ ಪಕ್ಷಗಳ ಈ ಅಭಿಪ್ರಾಯ ಅದೇಕೋ ಇವರಿಗೆ ಪಥ್ಯವಾಗುತ್ತಿಲ್ಲ. ನಂದಿಗ್ರಾಮ/ಸಿಂಗೂರು ಘಟನೆಗಳಲ್ಲಿ ಕಾಣುತ್ತಿರುವುದು ಈ ಅಭಿಪ್ರಾಯ-ಭೇದದ ಒಂದು ಚಿತ್ರ ಎನ್ನುವ ಪುರಕಾಯಸ್ಥ ಈಗ ನಮ್ಮ ಮುಂದಿರುವ ಪ್ರಶ್ನೆ ಬುಡಮಟ್ಟದಲ್ಲಿ ಸಾಮ್ರಾಜ್ಯಶಾಹಿ ಅಜೆಂಡಾವನ್ನು ಎದುರಿಸುವುದು ಹೇಗೆ ಎಂಬುದು ಎನ್ನುತ್ತಾರೆ. ಭೂತಕಾಲಕ್ಕೆ ಅಥವಾ ಪಾರಂಪರಿಕ ಉತ್ಪಾದನಾ ವಿಧಾನಕ್ಕೆ ಹಿಂದಿರುಗುವುದಾಗಲೀ, ಡಬ್ಲ್ಯುಟಿಒ ವನ್ನು ತ್ಯಜಿಸುವುದಾಗಲೀ, ಕೈಗಾರಿಕೀಕರಣವನ್ನು ವಿರೋಧಿಸುವುದಾಗಲೀ ನಮ್ಮ ಭವಿಷ್ಯದ ಆಯ್ಕೆಯಾಗುವುದು ಸಾಧ್ಯವಿಲ್ಲ. ವಿಕಾಸ ಎನ್ನುವುದು ಒಂದು ಒಮ್ಮುಖವಾದ ಪ್ರಕ್ರಿಯೆ- ಪ್ರಾಣಿ ಪ್ರಪಂಚದಲ್ಲೂ ಮತ್ತು ಮಾನವ ಸಮಾಜದಲ್ಲೂ. ಮನುಷ್ಯ ಮತ್ತೆ ಬಾಲ ಬೆಳೆಸಿಕೊಳ್ಳಲು ಸಾಧ್ಯವಿಲ್ಲವಲ್ಲ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥ.

ಜನಶಕ್ತಿ ಕನ್ನಡ ವಾರಪತ್ರಿಕೆ ಡಿಸೆಂಬರ್ 30, 200

ಕರಾವಳಿಯ ಸಾಮಾಜಿಕ ಸ್ಥಿತ್ಯಂತರಗಳು

ಇತ್ತೀಚೆಗೆ ನಡೆದ ಉಡುಪಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕರಾವಳಿಯ ಜನರ ಬದುಕಿನ ಸ್ಥಿತ್ಯಂತರಗಳ ಕುರಿತು ಬಿ.ಮಾಧವರವರು ಮಂಡಿಸಿದ ಪ್ರಬಂಧವಿದು. ಕರಾವಳಿಯ ಆರ್ಥಿಕ–ಸಾಮಾಜಿಕ – ರಾಜಕೀಯ ಬದುಕಿನ ಕುರಿತ ವಿಶ್ಲೇಷಣೆ ಇಲ್ಲಿದೆ.




ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳನ್ನು ಒಳಗೊಂಡ ಕರ್ನಾಟಕದ ಕರಾವಳಿಯು ಸಾಮಾಜಿಕವಾಗಿ ಪ್ರಗತಿಪರವಾದ ಪ್ರದೇಶ. ಕನ್ನಡ ಎಂಬ ಶಬ್ದವೇ ಈ ಜಿಲ್ಲೆಗಳ ಹೆಸರುಗಳಲ್ಲಿ ಪ್ರಧಾನವಾಗಿದೆ. 'ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮದು' ಎಂದು ಹಾಡಿದವರು ಕರಾವಳಿಯ ಮಂಜೇಶ್ವರ ಗೋವಿಂದ ಪೈಗಳು. ಕನ್ನಡ ನಾಡಿನ ಜನ ಜೀವನದ ಎಲ್ಲಾ ರಂಗಗಳಲ್ಲೂ ಪ್ರಮುಖ ಪಾತ್ರ ವಹಿಸುವ ಕರಾವಳಿಯ ಜನರು ಕನ್ನಡ ಮಾತ್ರವಲ್ಲದೆ ತುಳು, ಕೊಂಕಣಿ, ಮಲಯಾಳಂ, ಬ್ಯಾರಿ ಭಾಷೆ, ಉರ್ದು, ಇಂಗ್ಲೀಷ್ ಇತ್ಯಾದಿಯಾಗಿ ಅನೇಕ ಭಾಷೆಗಳನ್ನು ಆಡುತ್ತಾರೆ. ಎಲ್ಲಾ ಭಾಷೆಗಳ, ಎಲ್ಲಾ ಮತಗಳ ಮತ್ತು ಎಲ್ಲಾ ಜಾತಿಗಳ ಜನರು ಸೌಹಾರ್ದತೆಯಿಂದ ಬಾಳುತ್ತಾ ಬಂದ ಪರಂಪರೆ ಇಲ್ಲಿದೆ.

ಚೋಮನದುಡಿಯ ಆಶಯ

ಕರಾವಳಿಯ ಇತ್ತೀಚಿನ ಸಾಮಾಜಿಕ ಸ್ಥಿತ್ಯಂತರಗಳಿಗೆ ಚಾಲನೆ ನೀಡಿದ ಬೆಳವಣಿಗೆಗಳಲ್ಲಿ ಭೂಸುಧಾರಣೆ ಪ್ರಮುಖವಾಗಿದೆ. ಭೂರಹಿತ ಕೃಷಿ ಕಾರ್ಮಿಕನೊಬ್ಬನ ಕರಾಳ ಬದುಕನ್ನು ಚಿತ್ರಿಸಿದ ಡಾ: ಶಿವರಾಮ ಕಾರಂತರ 'ಚೋಮನ ದುಡಿ' ಹಾಗೂ ಅಂದು ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದ ಕಾಸರಗೋಡಿನ ಕಯ್ಯೂರಿನಲ್ಲಿ ನಡೆದ ರೈತ ಚಳುವಳಿಯ ನೈಜ ಕಥೆಯನ್ನು ತೆರೆದಿಟ್ಟ ನಿರಂಜನರ 'ಚಿರಸ್ಮರಣೆ' ಕೃತಿಗಳು ಭೂಸುಧಾರಣೆಗಾಗಿ ನಡೆದ ರೈತರ ಚಳುವಳಿಗೆ ಸ್ಫೂರ್ತಿ ನೀಡಿದ್ದವು. ಚೋಮನ ಮನದ ತುಡಿತವನ್ನು ಓದುಗರ ಮನ ಮುಟ್ಟುವಂತೆ ಕಾರಂತರ ಹೀಗೆ ಬಣ್ಣಿಸುತ್ತಾರೆ: "ಪ್ರತಿ ಕ್ಷಣವೂ ಅವನ ಮುಂದೆ ಮುನಿದು ನಿಂತಿರುವ ನೇಗಿಲಿನ ಚಿತ್ರ ಕಾಣಿಸುತ್ತದೆ. ಒಮ್ಮೊಮ್ಮೆ 'ನಾನು ನನಗಾಗಿ ನೇಗಿಲನ್ನು ಹಿಡಿಯಬಾರದಾದರೆ, ಇನ್ನೊಬ್ಬರಿಗಾಗಿ ಏತಕ್ಕೆ ಹಿಡಿಯಬೇಕೆಂದು ಯೋಚಿಸುತ್ತಾನೆ. ಬೇಸಾಯಗಾರನಾಗುವ ಯೋಗ ತನಗಿಲ್ಲದಿದ್ದರೆ ಇನ್ನೊಬ್ಬರ ಗದ್ದೆಯ ಕೆಸರಿನಲ್ಲಿ ಈಜಿ, ಏತಕ್ಕೆ ಬಾಳಬೇಕೆಂದು ಆತನಿಗೆ ತೋರುವುದಿಲ್ಲ. ವಿಚಾರಗಳ ಕೋಲಾಹಲ ಅವನ ಮಿದುಳಿನಲ್ಲಿ ನಡೆಯುತ್ತಿದೆ. ಈವರೆಗೆ 'ಧನಿಯರು' ಎಂದೊಡನೆ ಬಾಗಿ ಬಗ್ಗಿದ ಅವನ ಮನಸ್ಸು, ವಿನಯ, ವಿನಯವೇನು ದಾಸ್ಯ ಬುದ್ಧಿ, ಈಗ ನೆಟ್ಟಗೆ ನಿಲ್ಲಲು ಹೋರಾಡುತ್ತಿದೆ". ಕೈಯೂರಿನ ರೈತ ಚಳುವಳಿಯ ಕಾರ್ಯಕರ್ತರಾದ ಅಪ್ಪು, ಚಿರುಕಂಡ, ಕುಂಞಂಬು ಮತ್ತು ಅಬೂಬಕ್ಕರ್‌ರನ್ನು ಮಂಗಳೂರಿನ ಸೆಶನ್ಸ್ ನ್ಯಾಯಾಲಯದ ತೀರ್ಪಿನಂತೆ ಗಲ್ಲಿಗೇರಿಸಲಾಗಿತ್ತು. ಇವರು ಕೂಡಾ ಭೂರಹಿತ ಕೃಷಿ ಕಾರ್ಮಿಕರಾಗಿದ್ದರು. ಆದರೆ ಭೂಸುಧಾರಣೆ ಬಂದಾಗ ಚೋಮನಂತಹ ಭೂರಹಿತ ಕೃಷಿ ಕಾರ್ಮಿಕರಿಗೆ ಭೂಮಿ ಸಿಗಲಿಲ್ಲ. ಅವರು ಕೃಷಿ ಕೂಲಿಕಾರರಾಗಿಯೇ ಉಳಿದರು. ಗೇಣಿ ಒಕ್ಕಲುಗಳಾಗಿದ್ದವರಿಗೆ ಅವರು ಬೇಸಾಯ ಮಾಡುತ್ತಿದ್ದ ಭೂಮಿಯ ಒಡೆತನ ಸಿಕ್ಕಿತು.

ಭೂರಹಿತರಿಗೆ ಭೂಮಿ ಸಿಗಬೇಕಾದರೆ ಸಮಗ್ರ ಭೂಸುಧಾರಣೆ ಜಾರಿಯಾಗಬೇಕಾಗಿದೆ. ಸರಕಾರದ ವಶದಲ್ಲಿರುವ ಹೆಚ್ಚುವರಿ ಭೂಮಿ ಮತ್ತು ಭೂಪರಿಮಿತಿಯನ್ನು ಮೀರಿ ಭೂಮಾಲಕರ ವಶದಲ್ಲಿರುವ ಭೂಮಿಯನ್ನು ಭೂರಹಿತರಿಗೆ ಹಂಚಿದಾಗ ಮಾತ್ರ 'ಚೋಮನ ದುಡಿ'ಯ ಆಶಯ ಈಡೇರುತ್ತದೆ. ಆದರೆ ಈಗ ಹೊಸತೊಂದು ಪರಿಸ್ಥಿತಿ ಉದ್ಭವಿಸಿದೆ. ವಿಶೇಷ ಆರ್ಥಿಕ ವಲಯಗಳಿಗಾಗಿ ಸಾವಿರಗಟ್ಟಲೆ ಎಕರೆ ಭೂಮಿಯನ್ನು ವಶಪಡಿಸಲಾಗುತ್ತಿದೆ. ಸರಕಾರದ ಹೆಚ್ಚುವರಿ ಭೂಮಿ, ರೈತರ ಕೃಷಿಭೂಮಿ ಎಲ್ಲವೂ ಎಸ್‌ಇಜೆಡ್ ಕೈಗಾರಿಕೀಕರಣದ ಹೆಸರಿನಲ್ಲಿ ಕೊಚ್ಚಿಹೋಗುತ್ತಿದೆ. ಭೂರಹಿತರಿಗೆ ಕೊಡಲು ಇನ್ನೂ ಭೂಮಿಯೇ ಇರಲಾರದು.



'ಚೋಮನದುಡಿ' ಸಿನಿಮಾದ ಚೋಮ - ವಾಸುದೇವರಾವ್



ಜ್ಞಾನಪೀಠ ಪುರಸ್ಕೃತ ಶಿವರಾಮಕಾರಂತ


ಕೊಳ್ಳುವ ಸಾಮರ್ಥ್ಯ ಹೆಚ್ಚಿದಂತೆ

ಭೂ ಸುಧಾರಣೆ ಜಾರಿಯಾಗಿ ಮೂರು ದಶಕಗಳು ಕಳೆದಿವೆ. ಭೂಮಿಯ ಒಡೆತನ ಪಡೆದ ಲಕ್ಷಗಟ್ಟಲೆ ರೈತರ ಜೀವನ ಮಟ್ಟದಲ್ಲಿ ಸುಧಾರಣೆ ಆಗಿದೆ. ಗ್ರಾಹಕ ವಸ್ತುಗಳನ್ನು ಕೊಂಡುಕೊಳ್ಳುವ ಅವರ ಆರ್ಥಿಕ ಸಾಮರ್ಥ್ಯ ಹೆಚ್ಚಿದಂತೆ ಮಾರುಕಟ್ಟೆ ವಿಸ್ತರಣೆಯಾಗಿ ವಾಣಿಜ್ಯ ಚಟುವಟಿಕೆಗಳು ವ್ಯಾಪಕವಾಗಿ ಬೆಳೆದವು. ರೈತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾವಂತರಾದರು. ಇವುಗಳು ಕರಾವಳಿಯ ಸಾಮಾಜಿಕ ಪ್ರಗತಿಗೆ ಅನುಕೂಲಕರವಾದ ಬೆಳವಣಿಗೆಗಳು. ಆದರ ಭೂ ಸುಧಾರಣೆ ಜಾರಿಯಾ ನಂತರದ ದಶಕಗಳ ಸ್ವಾಭಾವಿಕವಾಗಿ ರೈತರ ಕುಟುಂಬಗಳು ಬೆಳೆದವು. ಅವಿಭಜಿತ ಕುಟುಂಬಗಳು ವಿಭಜನೆಯಾಗುವುದು ಅನಿವಾರ್ಯವಾಯಿತು. ಇದರ ಪರಿಣಾಮವಾಗಿ ಕುಟುಂಬದ ಭೂಮಿಯನ್ನು ಪಾಲು ಮಾಡುವುದು ಅನಿವಾರ್ಯವಾಯಿತು. ಹೀಗೆ ಪಾಲು ಮಾಡಿದಾಗ ಪ್ರತೀ ಕುಟುಂಬಕ್ಕೆ ದೊರಕಿದ ಭೂಮಿ ತೀರಾ ಅತ್ಯಲ್ಪ. ಇಂತಹ ತುಂಡು ಭೂಮಿಯನ್ನು ಅವಲಂಬಿಸಿ ಕೃಷಿ ಮಾಡಿ ಬದುಕುವುದು ಅಸಾಧ್ಯವಾಯಿತು. ಯುವಜನರು ಉದ್ಯೋಗ ಹುಡುಕಿಕೊಂಡು ಅಲೆದಾಡುವುದು ಅನಿವಾರ್ಯವಾಯಿತು. ಒಂದು ಸಣ್ಣ ಸಂಖ್ಯೆಯ ಯುವಕರು ಕೊಲ್ಲಿ ರಾಷ್ಟ್ರಗಳಲ್ಲಿ ಉದ್ಯೋಗ ಗಳಿಸಿದರು. ಅನೇಕ ಬಡ ರೈತರು ಕೃಷಿ ಕಾರ್ಮಿಕರಾದರು. ಇಲ್ಲವೇ ಗ್ರಾಮೀಣ ಕೂಲಿ ಕಾರ್ಮಿಕರಾದರು. ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಾ ಬಂತು. ರಾಜ್ಯದ ಹೊರಗೆ, ವಿಶೇಷವಾಗಿ ಮುಂಬಯಿಯಲ್ಲಿ ಕರಾವಳಿಯ ಜನರು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗದಲ್ಲಿದ್ದಾರೆ. ವಿಶೇಷವಾಗಿ ಹೋಟೆಲ್ ಉದ್ಯಮದಲ್ಲಿ ಕರಾವಳಿಯ ಜನರ ಪಾತ್ರ ದೊಡ್ಡದು.



ಬೀಡಿ ಸುತ್ತುವುದರಲ್ಲಿ [illegible] ಕಂಡವರು

ಹೀಗೆ ಹೊರ ಜಗತ್ತಿನೊಂದಿಗೆ ಹೆಚ್ಚು ಹೆಚ್ಚು ಸಂಪರ್ಕಗಳು ಬೆಳೆದ ಪರಿಣಾಮವಾಗಿ ಕರಾವಳಿಯ ಜನರಲ್ಲಿ ಸಂಕುಚಿತ, ಪ್ರಾದೇಶಿಕ ಭಾವನೆಗಳು ದೂರವಾದವು. ಕನ್ನಡ ಭಾಷೆ ಬೆಳೆಯಿತು. 'ಎಂಥದು ಮಾರಾಯ್ರೆ' ಎಂಬಂತಹ ಇಲ್ಲಿನ ಭಾಷೆಗಳು ಇತರ ಜಿಲ್ಲೆಗಳವರಿಗೆ ತಮಾಷೆಯಾಗಿ ಕಾಣುತ್ತಿದ್ದವು. ಕರ್ತೃ ಕರ್ಮ ಕ್ರಿಯೆ ಈ ಮೂರನ್ನೂ ಒಳಗೊಂಡ ಸಾಹಿತ್ಯ ಭಾಷೆಯನ್ನೇ ಸಂಭಾಷಣೆಗಳಲ್ಲೂ ಬಳಸುವುದು ಇಲ್ಲಿನ ಪರಿಪಾಠವಾಗಿತ್ತು. ಇದು ವಿದ್ಯಾವಂತರ ಭಾಷೆಯೆಂದು ಸಾಮಾನ್ಯ ಜನರು ಕನ್ನಡವನ್ನು ದೂರವಿಟ್ಟು ಈ ಪ್ರದೇಶದ ಭಾಷೆಗಳಾದ ತುಳು, ಬ್ಯಾರಿ ಭಾಷೆ ಮತ್ತು ಕೊಂಕಣಿ ಭಾಷೆಗಳಲ್ಲೇ ಮಾತನಾಡುವುದು ಸಾಮಾನ್ಯವಾಗಿತ್ತು. ಆದರೆ ಈಗ ಕರಾವಳಿಯಲ್ಲಿ ಕನ್ನಡವು ಜನಸಾಮಾನ್ಯರ ಆಡುಭಾಷೆಯಾಗಿ ಬೆಳೆದು ಬಂದಿದೆ. ಕರಾವಳಿಯ ವಿಶಿಷ್ಟವಾದ ಕಲೆ ಯಕ್ಷಗಾನ, ಯಕ್ಷಗಾನ ಬಯಲಾಟ ಮತ್ತು ತಾಳಮದ್ದಲೆ ಕಲೆಗಳು ಕರಾವಳಿಯ ಜನರಿಗೆ ಮಾತುಗಾರಿಕೆಯನ್ನು ಕಲಿಸಿವೆ. ಇಲ್ಲಿನ ಹಳ್ಳಿಗಳ ಸಾಮಾನ್ಯ ಅವಿದ್ಯಾವಂತ ಜನರು ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡುವಂತೆ ಕಲಿಸಿದ ಈ ಕಲೆ ಈಗ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿದೆ.



ಸಮುದ್ರದ ನೆಂಟಸ್ತನ ಮೀನಿಗೆ ಬರ ಈಗ!


ಬೀಡಿ ಕೈಗಾರಿಕೆ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ದಶಕಗಳಲ್ಲಿ ಬೃಹತ್ತಾಗಿ ಬೆಳೆದಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈಗ ಸುಮಾರು ನಾಲ್ಕು ಲಕ್ಷ ಬೀಡಿ ಕಾರ್ಮಿಕರಿದ್ದಾರೆ. ನಗರಗಳಲ್ಲಿ ಮಾತ್ರವಲ್ಲದೆ ಹಳ್ಳಿ ಹಳ್ಳಿಗಳಿಗೂ ವ್ಯಾಪಿಸಿರುವ ಬೀಡಿ ಕೈಗಾರಿಕೆಯಲ್ಲಿ ಶೇ.95 ರಷ್ಟು ಮಹಿಳೆಯರೇ ದುಡಿಯುತ್ತಿದ್ದಾರೆ. ಅಲ್ಪ ಆದಾಯದ ಈ ಉದ್ಯೋಗವನ್ನು ಸಾಮಾನ್ಯವಾಗಿ ಪುರುಷ ಕಾರ್ಮಿಕರು ಇಷ್ಟಪಡುವುದಿಲ್ಲ. ಏನಿದ್ದರೂ, ಲಕ್ಷಾಂತರ ಮಹಿಳೆಯರ ಬದುಕಿನಲ್ಲಿ ಬೀಡಿ ಉದ್ಯಮವು ಒಂದು ಸ್ಥಿತ್ಯಂತರವನ್ನೇ ನಿರ್ಮಿಸಿದೆ. ಪುರುಷನ ಅಲ್ಪ ಆದಾಯದಲ್ಲಿ ಕುಟುಂಬ ನಿರ್ವಹಣೆ ಅಸಾಧ್ಯವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಬೀಡಿ ಕೆಲಸದಿಂದಾಗಿ ಮಹಿಳೆಯರು ಸ್ವಲ್ಪಮಟ್ಟಿಗೆ ಸ್ವಾವಲಂಬಿಗಳಾಗಿದ್ದಾರೆ. ಇದರ ಪರಿಣಾಮವಾಗಿ ಮಹಿಳೆಯರಿಗೆ ಕುಟುಂಬದಲ್ಲಿ ಹೆಚ್ಚು ಗೌರವ ಮತ್ತು ಸ್ವಾತಂತ್ರ್ಯ ಸಿಗುತ್ತಿದೆ. ಕೌಟುಂಬಿಕ ಹಿಂಸೆಗಳು ಗಣನೀಯವಾಗಿ ಕಡಿಮೆಯಾಗಿವೆ. ಲಕ್ಷಗಟ್ಟಲೆ ಕುಟುಂಬಗಳಲ್ಲಿ ವಿಕಾಸಗೊಂಡ ಈ ಸಾಮಾಜಿಕ ಬೆಳವಣಿಗೆಯ ಪರಿಣಾಮಗಳು ಸಮಾಜದ ಇತರ ಕುಟುಂಬಗಳ ಮೇಲೆ ಕೂಡಾ ಪ್ರಭಾವ ಬೀರಿವೆ. ಈಗ ಎಲ್ಲಾ ರಂಗಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಒದಗಿಸಿದ ನಂತರ ಬೀಡಿ ಕಾರ್ಮಿಕರಂತಹ ಬಡ ಮಹಿಳೆಯರು ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು, ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವುದನ್ನೂ ಗಮನಿಸಬಹುದು. ವಿದ್ಯಾಭ್ಯಾಸದ ಕೊರತೆಯಿದ್ದರೂ, ಬೀಡಿಯಂತಹ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಲ್ಲಿ ಸಂಘಟನಾ ಪ್ರಜ್ಞೆ ಮತ್ತು ರಾಜಕೀಯ ಪ್ರಜ್ಞೆ ಬೆಳೆದು ಬರುತ್ತಿದೆ. ಇದರಿಂದಾಗಿ ಅವರು ಸಾಮಾಜಿಕ ಜೀವನದಲ್ಲಿ ತಮ್ಮನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಬೆಳೆದು ಬರುತ್ತಿರುವ ಸ್ವಸಹಾಯ ಗುಂಪುಗಳು ಕರಾವಳಿಯ ಸಾಮಾಜಿಕ ಜೀವನದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ. ಮಹಿಳೆಯರಲ್ಲಿ ಸ್ವಾವಲಂಬನೆ ಮತ್ತು ಆತ್ಮ ವಿಶ್ವಾಸದ ಪ್ರಜ್ಞೆಯನ್ನು ಮೂಡಿಸುವುದರಲ್ಲಿ ಸ್ವಸಹಾಯ ಚಳುವಳಿ ದೊಡ್ಡ ಕೊಡುಗೆ ನೀಡಿದೆ.

ಕರಾವಳಿಯಲ್ಲಿ ಸಾಕ್ಷರತೆಯ ಪ್ರಮಾಣ ಕರ್ನಾಟಕದ ಇತರ ಜಿಲ್ಲೆಗಳಿಗಿಂತ ಹೆಚ್ಚಿದೆ. ಸರ್ಕಾರದ ಸಾಕ್ಷರತಾ ಅಭಿಯಾನ ಈ ನಿಟ್ಟಿನಲ್ಲಿ ಗಣನೀಯ ಕೊಡುಗೆ ನೀಡಿದೆ ಎಂಬುದನ್ನು ಗುರುತಿಸುವಾಗಲೇ, ಕರಾವಳಿಯ ಪ್ರಜಾಪ್ರಭುತ್ವ ಚಳುವಳಿಗಳಿಂದಾಗಿ ಜನರ ಪ್ರಜ್ಞೆಯ ಮಟ್ಟ

ಪುಟ 12



ಕೇಳುವವರಿಗಲ್ಲಾ ಉದ್ಯೋಗ ನೀಡುತ್ತೇನೆ ಎಂದು ಭರವಸೆಗಳ ಮಹಾಪೂರ ಹರಿಸಿದರೂ ಹಾಸನ ಸತ್ಸಂಗಕ್ಕೆ ಮೊದಲ ದಿನ ಬಂದ ಜನ ನಂತರ ಕಡಿಮೆಯಾದದ್ದು ಏಕೆ?

ರವಿಶಂಕರ್ ಗುರೂಜಿ ಮತ್ತು ಮೂರು 'ಸಿ'ಗಳು

"ಭಾರತ ದೇಶವನ್ನು ಕರಪ್ಷನ್, ಕಮ್ಯೂನಲಿಸಂ ಮತ್ತು ಕಮ್ಯುನಿಸಂ ಎನ್ನುವ ಮೂರು 'ಸಿ'ಗಳಿಂದ ದೂರ ಇಡಬೇಕು. ಇದು ಬೋಧನೆ.

"ಕರ್ನಾಟಕದಲ್ಲಿ ಎಷ್ಟೇ ಜನ ನಿರುದ್ಯೋಗಿಗಳಿದ್ದರೂ ನಮ್ಮ ಸಂಸ್ಥೆಗೆ ಅರ್ಜಿ ಸಲ್ಲಿಸಿದರೆ ಎಲ್ಲರಿಗೂ ಉದ್ಯೋಗ ಕೊಡಿಸಲಾಗುವುದು" ಇದು ಭರವಸೆ.

ಈ ಮೇಲಿನ ಎರಡೂ ಘೋಷಣೆಗಳಿಗೆ ಒಂದಕ್ಕೊಂದು ಸಂಬಂಧ ಇಲ್ಲದಿದ್ದರೂ ಈ ಎರಡೂ ಬೊಗಳೆಯನ್ನು ಘೋಷಿಸಿದವರು ಮಾತ್ರ ಒಬ್ಬರೆ.

ಇಂದು ದೆಹಲಿ, ನಾಳೆ ನ್ಯೂಯಾರ್ಕ್, ನಾಡಿದ್ದು ಜಪಾನ್‌ನಲ್ಲಿ "ಯೋಗ, ಪ್ರಾಣಾಯಾಮ, ಧ್ಯಾನ" ಕಲಿಸಿಕೊಡುವ ನೆಪದಲ್ಲಿ ಪ್ರಪಂಚ ಸುತ್ತುತ್ತಿರುವ ಅಂತರಾಷ್ಟ್ರೀಯ ಖ್ಯಾತಿ (?)ಯ ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಗುರೂಜಿ ಎಂಬ ಹೈಟೆಕ್ ಗುರು ಕಳೆದ ವಾರ ಹಾಸನದಲ್ಲಿ ತಾನೇ ಏರ್ಪಡಿಸಿದ "ಮಹಾಸತ್ಸಂಗ" ಕಾರ್ಯಕ್ರಮದಲ್ಲಿ ನೆರೆದ ಸಾವಿರಾರು ಜನರಿಗೆ ಹೇಳಿದ ಮಾತು.

ಪ್ರಜ್ಞಾವಂತ ಜನ, ಇತಿಹಾಸದ ಪ್ರಜ್ಞೆ ಇರುವವರು, ರಾಜಕೀಯ ವಿಜ್ಞಾನದ ಆಳ ಅರಿತಿರುವವರು ಜನಪರ ಕಾಳಜಿ ಇರುವವರು ಇವರ ಹೇಳಿಕೆ ಒಪ್ಪುವುದು ಕಷ್ಟ ಹಾಗೂ ಈ ಮೂರು 'ಸಿ'ಗಳ ಪೈಕಿ ಎರಡರಲ್ಲಿ ಈ ಗುರೂಜಿ ಎಷ್ಟರಮಟ್ಟಿಗಿನ ಪ್ರಾವಿಣ್ಯ ಗಳಿಸಿದ್ದಾರೆ ಅಂತ ನೋಡಬೇಕಾಗುತ್ತದೆ. ಪ್ರಶ್ನೋತ್ತರ ವೇಳೆಯಲ್ಲಿ ಈ ಬಗ್ಗೆ ಯುವಕನೋರ್ವ ಗುರೂಜಿಗೆ ನೇರವಾಗಿ ಪ್ರಶ್ನೆ ಕೇಳಿದ. "ಮೂರು 'ಸಿ' ಗಳಲ್ಲಿ ಕರಪ್ಷನ್ ಮತ್ತು ಕಮ್ಯೂನಲಿಸಂನ್ನೂ ದೂರ ಇಡಬೇಕು ಸರಿ, ಇದರ ಜೊತೆ ಕಮ್ಯೂನಿಸಂ ಏಕೆ? ಕಮ್ಯುನಿಸಂ ಬದಲು "ಕ್ಯಾಪ್ಟಿಸಂ" ಸೇರಿಸಬಹುದಲ್ಲವೇ? ಎಂದಾಗ ಗುರೂಜಿಯವರು "ಕಮ್ಯೂನಿಸಂ ದೇವರು ಅಧ್ಯಾತ್ಮವನ್ನು ನಂಬುವುದಿಲ್ಲ. ಕಮ್ಯೂನಿಸಂ ಅಂದರೆ ನಕ್ಸಲಿಸಂ, ಅಲ್ಲಿ ಹಿಂಸೆ ಇರುತ್ತೆ. ಇಲ್ಲಿ ಕೈಗಾರಿಕೆಗಳು ಮುಚ್ಚಿ ಹೋಗುತ್ತಿರುವುದರಿಂದ ನಿರುದ್ಯೋಗ ಮತ್ತು ಬಡತನ ಹೆಚ್ಚಾಗುತ್ತದೆ" ಎಂದು ಹೇಳಿದರು ಈ ಉತ್ತರಕ್ಕೆ ಒಪ್ಪದ ಇನ್ನೋರ್ವ.

ನಿರುತ್ತರ

"ಭಾರತದ ಕಮ್ಯುನಿಸ್ಟರು ನಕ್ಸಲಿಸಂನ ಹಿಂಸೆಯನ್ನು ಉಗ್ರವಾಗಿ ವಿರೋಧಿಸುತ್ತಾರೆ. ಕಮ್ಯೂನಿಸ್ಟ್ ಪಥದಲ್ಲಿ ಸಾಗಿದ ಚೀನಾದಲ್ಲಿ ಬಡತನ ನಿವಾರಣೆಯಾಗುತ್ತಿರುವುದರ ಜೊತೆಗೆ ಆ ದೇಶ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿರುವುದನ್ನು ಇಡೀ ಪ್ರಪಂಚವೇ ಗಮನಿಸುತ್ತಿರುವಾಗ ಕಮ್ಯೂನಿಸಂ ಬೇಡ ಎನ್ನುವುದು ಎಷ್ಟು ಸರಿ? ಎಂದು ಕೇಳಿದಾಗ ಉತ್ತರ ನೀಡಲು ತಡಬಡಿಸಿದ ಗುರೂಜಿ ತನ್ನ ಮುಖದಲ್ಲಿ ಇಳಿಬಿಟ್ಟ ಕೂದಲಿನ ಮಧ್ಯೆ ಕಣ್ಣು ಪಿಳಿಪಿಳಿ ಮಾಡುತ್ತಾ ಆ ಕಡೆ ಈ ಕಡೆ ನೋಡುವುದನ್ನು ಗಮನಿಸಿದ ನಿರೂಪಕರು ಕೂಡಲೇ ಬೇರೆಯವರಿಗೆ ಪ್ರಶ್ನೆಗೆ ಅವಕಾಶ ಮಾಡಿಕೊಟ್ಟರು.

ನಿಜ, ಕಮ್ಯುನಿಸಂ ದೈವದ ಅಸ್ತಿತ್ವವನ್ನು ಒಪ್ಪುವುದಿಲ್ಲ. ವಿಜ್ಞಾನವೂ ಸಹ ದೇವರ ಅಸ್ತಿತ್ವ ಒಪ್ಪುವುದಿಲ್ಲ. ಆದರೆ ಯಾವುದೇ ಧರ್ಮೀಯರ ಆಚರಣೆಯನ್ನು, ನಂಬಿಕೆಯನ್ನು ವಿರೋಧಿಸುವುದಿಲ್ಲ ಅವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುತ್ತದೆ. ಅಥವಾ ಅವಹೇಳನ ಮಾಡುವುದಿಲ್ಲ ಎನ್ನುವುದನ್ನು ಗುರೂಜಿಯವರು ಒಮ್ಮೆ ಧ್ಯಾನದಿಂದ ಕಣ್ಣುತೆರೆದು ನೋಡಿದರೆ ತಿಳಿಯಬಹುದು. ಕಮ್ಯೂನಿಸಂಗೂ ನಕ್ಸಲಿಸಂಗೂ ಇರುವ ವ್ಯತ್ಯಾಸ ಗೊತ್ತಿಲ್ಲದ ಈ ಗುರೂಜಿ, ಕಮ್ಯೂನಿಸಂ ಇದ್ದೆಡೆ ಹಿಂಸೆ ಇರುತ್ತೆ ಅಭಿವೃದ್ಧಿ ಇರಲ್ಲ, ಬಡತನ ಇರುತ್ತೆ ಅಂತ ಸಾಮ್ರಾಜ್ಯಶಾಹಿಗಳ, ಬಂಡವಾಳಶಾಹಿಗಳ ಅಣಿಮುತ್ತುಗಳನ್ನೇ ಬೋಧನೆ ಮಾಡುತ್ತಾರೆ.

ಅಮೇರಿಕಾ ಸೇರಿದಂತೆ ಕೋಮುವಾದ ಹಾಗೂ ಭಯೋತ್ಪಾದನೆ ವಿಶ್ವವ್ಯಾಪಿಯಾಗಿ ಪಸರಿಸಿರುವುದು ಕಮ್ಯೂನಿಸಂನಿಂದಲ್ಲ ಅನ್ನುವುದು ಕಮ್ಯೂನಿಸ್ಟ್ ರಾಷ್ಟ್ರಗಳಾದ ಚೈನಾ, ಕ್ಯೂಬಾ, ವಿಯೆಟ್ನಾಂ, ಕೋರಿಯಾ ದೇಶಗಳತ್ತ ಗಮನಹರಿಸಿದರೆ ತಿಳಿಯಬಹುದು. ಈ ರಾಷ್ಟ್ರಗಳಲ್ಲಿ ಕೋಮುವಾದ ಭಯೋತ್ಪಾದನೆಯ ಪಿಡುಗು ಇಲ್ಲ. ಭಾರತದಲ್ಲಿ ಕಳೆದ 30 ವರ್ಷಗಳಿಂದ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಸರಕಾರ ಹೊಂದಿದ ಪಶ್ಚಿಮ ಬಂಗಾಳದಲ್ಲಿ ಕೋಮುಗಲಭೆ ನಡೆದಿಲ್ಲ, ಅಲ್ಲೆಲ್ಲಾ ಜನ ನೆಮ್ಮದಿ, ಶಾಂತಿ, ಗೌರವದಿಂದ ಬದುಕುತ್ತಿದ್ದಾರೆ.

ಕಮ್ಯುನಿಸಂ ಮತ್ತು ನಕ್ಸಲಿಸಂ

ಕಮ್ಯೂನಿಸಂ ಇದ್ದಲ್ಲಿ ನಕ್ಸಲಿಸಂ, ಹಿಂಸೆ ಇರುತ್ತೆ ಅಭಿವೃದ್ಧಿ ಆಗೋಲ್ಲ ಎಂದು ಹೇಳುವ ಇವರು ಪಶ್ಚಿಮ ಬಂಗಾಲದ ನಂದಿಗ್ರಾಮದಲ್ಲಿ ಕೈಗಾರಿಕೆ ಸ್ಥಾಪಿಸಲು ಅಲ್ಲಿನ ಸರಕಾರ ಉದ್ದೇಶಿಸಿದಾಗ ನಕ್ಸಲರು ಹಿಂಸೆಯಿಂದ ಕೈಗಾರಿಕೆ ಸ್ಥಾಪಿಸಿದಂತೆ ಅಡ್ಡಿಪಡಿಸಿರುವುದು ಕಾಣಲಿಲ್ಲವೇ? ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಾವಿರಾರು ನಿರುದ್ಯೋಗಿ ಯುವಜನರಿಗೆ ಉದ್ಯೋಗ ನೀಡಲು ಕೈಗಾರಿಕೆ ಸ್ಥಾಪನೆಗೆ ಹೊರಟಿದ್ದು ಅಲ್ಲಿನ ಕಮ್ಯೂನಿಸ್ಟ್ ಸರಕಾರ. ಆದರೆ ಇದನ್ನು ಹಿಂಸೆಯಿಂದ ವಿರೋಧಿಸಿ ಕೈಗಾರಿಕೆ ಸ್ಥಾಪನೆಯನ್ನು ವಿರೋಧಿಸಿದ್ದು ನಕ್ಸಲ್‌ಗಳು. ಕಮ್ಯೂನಿಸ್ಟ್ ಸರಕಾರ ಉರುಳಿಸಬೇಕೆನ್ನುವ ಕೆಟ್ಟ ಯೋಚನೆಯೊಂದಿಗೆ ಅಲ್ಲಿನ ವಿರೋಧ ಪಕ್ಷವು ನಕ್ಸಲ್‌ಗಳನ್ನು ಬೆಂಬಲಿಸಿ ಛೂ ಬಿಟ್ಟಿರುವುದು ಇತ್ತೀಚೆಗೆ ಬಹಿರಂಗಗೊಂಡಿರುವ ಅಂಶ. ಈ ಒಂದು ಘಟನೆಯೂ ನಕ್ಸಲಿಸಂಗೂ, ಕಮ್ಯೂನಿಸಂಗೂ ಇರುವ ಅಗಾಧ ವ್ಯತ್ಯಾಸದ ಚಿಕ್ಕ ಉದಾಹರಣೆ ಅಷ್ಟೆ. ಕಮ್ಯೂನಿಸಂ ಬಲಗೊಳ್ಳುವುದನ್ನು ಸಹಿಸದ ಸಂಘ ಪರಿವಾರದ 'ತುತ್ತೂರಿ'ಗಳ ಪುನರಾವರ್ತನೆ ಮೂಲಕ ಇಂತಹ ಹೇಳಿಕೆ ನೀಡುವ ಬದಲು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಮ್ಮೆ ಅವಲೋಕನ ಮಾಡಿದರೆ ಅರ್ಥವಾಗುತ್ತದೆ.

"ಕಮ್ಯೂನಿಸಂ ಅಂದರೆ ಹಿಂಸೆ ಅಲ್ಲ. ಅದೊಂದು ವಿಜ್ಞಾನ, ಸಾಮಾಜಿಕ, ಆರ್ಥಿಕ ಚಿಂತನೆಯ ರಾಜಕೀಯ ವಿಜ್ಞಾನ. ಅದೊಂದು ಮನುಕುಲದ ವಿಮೋಚನೆಯ ಸಿದ್ಧಾಂತ. ದುಡಿವ ಜನರ ಹೋರಾಟದ, ತ್ಯಾಗದ ಹಾಗೂ ಕಾರ್ಮಿಕರ ಹಕ್ಕಿನ ಭರವಸೆಯ ಸಂಕೇತ.

ಶೋಷಣೆ ಯಾರಿಂದ ?

ಕರ್ನಾಟಕದಲ್ಲಿ ಎಷ್ಟೇ ಜನ ನಿರುದ್ಯೋಗಿಗಳಿದ್ದರೂ. ತಮ್ಮ ಸಂಸ್ಥೆಗೆ ಅರ್ಜಿ ಸಲ್ಲಿಸಿದರೆ ಉದ್ಯೋಗ ಕೊಡಿಸಲಾಗುವುದು ಎಂದು ಭರವಸೆ ನೀಡಿದ ಗುರೂಜಿಯವರು ಕೆಲಸಕ್ಕೆ ಯಾವ ಮಾನದಂಡ ಬಳಸುತ್ತಾರೆ ಎನ್ನುವುದು ನಿಗೂಢವಾಗಿಯೇ ಉಳಿದಿದೆ. ಆರ್ಟ್ ಆಫ್ ಲೀವಿಂಗ್ ಸಂಸ್ಥೆಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಲು ಬರುವ ನಿರುದ್ಯೋಗಿಗಳಿಂದ "ಅರ್ಜಿ ಶುಲ್ಕ" ಅಂತ ಎಷ್ಟು ಪಡೆಯುತ್ತಾರೆ ಎಂದು ವಿವರಗಳೂ ಸಹ ಜನರಿಗೆ ತಿಳಿದಿಲ್ಲ. ರಾಜ್ಯದಲ್ಲಿ ದಿನಂಪ್ರತಿ ಕೆಲಸಕ್ಕಾಗಿ ಪರದಾಡುವ ನಿರುದ್ಯೋಗಿ ಯುವಜನರು ಒಂದು ಕಡೆಯಾದರೆ, ಉದ್ಯೋಗದ ಹಕ್ಕಿಗಾಗಿ ಸಾವಿರಾರು ಯುವಕ, ಯುವತಿಯರು ಧರಣಿ, ಪ್ರತಿಭಟನೆ ನಡೆಸುತ್ತಿದ್ದರೂ ಇಂದಿನವರೆಗೂ ತುಟಿಪಿಟಿಕ್ ಎನ್ನದ ಗುರೂಜಿಯವರು ಹಾಸನ ಜಿಲ್ಲಾಕ್ರೀಡಾಂಗಣದಲ್ಲಿ ನಡೆದ 'ಮಹಾಸತ್ಸಂಗ' ಕಾರ್ಯಕ್ರಮದಲ್ಲಿ ಏಕಾಏಕಿ ಅಲ್ಲಿ ಸೇರಿದ್ದ ಜನರಿಗೆ (ಇಲ್ಲಿ ಯಾರೂ ಉದ್ಯೋಗ ಬೇಡಿ ಬಂದಿಲ್ಲ) ಎಂದು ಭರವಸೆ ನೀಡಿದರು. ಧ್ಯಾನ, ಪ್ರಾಣಾಯಾಮ ಕಾರ್ಯಕ್ರಮದಲ್ಲಿ ಇಂತಹ ಭರವಸೆ ನೀಡುವ ಬದಲು ಉದ್ಯೋಗಕ್ಕಾಗಿ ಧರಣಿ ನಡೆಸುತ್ತಿರುವ ಸ್ಥಳಕ್ಕೆ ತೆರಳಿ ನೇರವಾಗಿ ಉದ್ಯೋಗ ನೀಡುವ ಬಗ್ಗೆ ಮಾತನಾಡಬಹುದಿತ್ತು. ಆವಾಗಲಾದರೂ ಇವರ ಭರವಸೆಗೆ ಬೆಲೆ ಬರುತ್ತಿತ್ತು.

ಈ ಗುರೂಜಿ ಈ ಹಿಂದೆ ಹೇಗಿದ್ದರು? ಈಗ ಹೇಗಾಗಿದ್ದಾರೆ?

ಧ್ಯಾನ, ಪ್ರಾಣಾಯಾಮ ಶಿಬಿರದ ಹೆಸರಿನಲ್ಲಿ ನಡೆಸುವ ಕಾರ್ಯಕ್ರಮದ ಟಿಕೇಟಿನ ದರ ಐದುಸಾವಿರ, ಮೂರು ಸಾವಿರ, ಎರಡು ಸಾವಿರ ಹೀಗೆ ಇದ್ದಾಗ ಈ ರೀತಿ ಸಂಗ್ರಹ ಮಾಡಿದ ಇವರು ಈಗ ಎಷ್ಟೆಷ್ಟು ಕೋಟಿ ಒಡೆಯರಾಗಿದ್ದಾರೆ ಅಂತ ಈಗಾಗಲೇ ರಾಜ್ಯದ ಹಲವಾರು ಪತ್ರಿಕೆಗಳು ಬಹಿರಂಗಗೊಳಿಸಿವೆ.

ಕೊನೆ ಮಾತು

ಯೋಗ ಪ್ರಾಣಾಯಾಮ, ಧ್ಯಾನ ಮತ್ತು ಪಾಶ್ಚಾತ್ಯ ಶೈಲಿಯ ಜಿಮ್‌ಗಳು ಎರಡೂ ವ್ಯಾಯಾಮ ಅಷ್ಟೆ. ಧ್ಯಾನ, ಪ್ರಾಣಾಯಾಮದ ಹೆಸರಿನಲ್ಲಿ ಮುಗ್ಧ ಜನರ ಭಾವನೆಗಳನ್ನು ಲೂಟಿ ಮಾಡುವ ಇವರ ಮಾರ್ಗದ ಪರಿಭಾಷೆ ಏನು ಎಂದು 'ದೈವಾಂಶ ಸಂಭೂತರೇ ಹೇಳಬೇಕು. ದೇಹ ಸದೃಢ, ಆರೋಗ್ಯ ಹಾಗೂ ಚೈತನ್ಯದಿಂದ ಇರಲು ವ್ಯಾಯಾಮ ಒಂದಿಷ್ಟು ದುಡಿಮೆ, ಒಂದಿಷ್ಟು ಮನರಂಜನೆ ಹಾಗೂ ವಿಶ್ರಾಂತಿ ಸಾಕು. ಅಂತೂ ಗುರೂಜಿ ಭಾಷಣ-ಯೋಗ ಕಲಿಕೆಗೆ ಒಂದೆರಡು ದಿನಗಳಲ್ಲೇ ಜನ ವಿದಾಯ ಹೇಳುತ್ತಾ ಹೋಗಿ ಕಡಿಮೆಯಾದದ್ದು ಯಾಕೆ ಎಂದು ಅವರು ಯೋಚಿಸುವುದು ಒಳ್ಳೆಯದು.

- ಎಸ್.ಹೆಚ್.ಗುಲ್ಬಾಡಿ

ರವಿಶಂಕರ್ ಗುರೂಜಿಗೆ ಕಮ್ಯೂನಿಸ್ಟರು ಅಂದ್ರೆ ಭಯ ಯಾಕೆ?

ಈ ದೇಶದ ಕಾರ್ಮಿಕ ವರ್ಗದಿಂದ ಪ್ರಗತಿಪರರವರೆಗೆ ಸಾಮಾನ್ಯ ಜನರು ಒಪ್ಪಿಕೊಳ್ಳುತ್ತಿರುವ 'ಕಮ್ಯೂನಿಸಂ' ಈ ಗುರೂಜಿಗೆ ಯಾಕೆ ಬೇಡ ಎಂದು ಮೂಲ ಹುಡುಕುತ್ತಾ ಹೋದಾಗ ಕಾರಣಗಳು ಸ್ಪಷ್ಟವಾಗಿ ಕಾಣಸಿಗುತ್ತದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಭೂ ಅತಿಕ್ರಮಣ ಅಕರಮವಾಗಿ ನಡೆದಿದೆ. ಅದರಲ್ಲಿ ಪ್ರಭಾವಿ ವ್ಯಕ್ತಿಗಳ ಕೈವಾಡವಿದ್ದು ಅದನ್ನು ಪತ್ತೆಹಚ್ಚಲಿಕ್ಕೆ ಎ.ಟಿ.ರಾಮಸ್ವಾಮಿ ನೇತೃತ್ವದಲ್ಲಿ ಒಂದು ಸಮಿತಿ ಅಸ್ತಿತ್ವದಲ್ಲಿದ್ದು, ಈಗಾಗಲೇ ಈ ಸಮಿತಿಯು ರಾಜ್ಯಪಾಲರಿಗೆ ನೀಡಿರುವ ವರದಿಯಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸರ್ಕಾರದ ಜಮೀನನ್ನು ಲಪಟಾಯಿಸಿರುವವರ ಪಟ್ಟಿಯಲ್ಲಿ ರವಿಶಂಕರ್ ಗುರೂಜಿಯ ಹೆಸರೂ ಮುಂಚೂಣಿಯಲ್ಲಿದೆ. ಅಲ್ಲದೆ "ಜನಶಕ್ತಿ" ವಾರಪತ್ರಿಕೆಯೂ ಸಹಾ ಗುರೂಜಿಯ ಫೋಟೋಸಹಿತ ವಿವರಗಳನ್ನು ಪ್ರಕಟಿಸಿತ್ತು. ಎ.ಟಿ.ರಾಮಸ್ವಾಮಿಯ ನೇತೃತ್ವದ ಸಮಿತಿಯಲ್ಲಿ ಪ್ರಮುಖವಾಗಿ ರಾಜ್ಯ ಕಮ್ಯೂನಿಸ್ಟ್ ಮುಖಂಡರೂ, ಬಾಗೇಪಲ್ಲಿಯ ಮಾಜಿ ಶಾಸಕರಾದ ಶ್ರೀರಾಮರೆಡ್ಡಿಯವರು ಇರುವುದು ಕುಲಾಚಾರ: ಜಾತಿ-ವರ್ಗ ಹಿತಾಸಕ್ತಿ ಗಮನಿಸಿದ ಗುರೂಜಿ ಇಷ್ಟರವರೆಗೂ ಎಲ್ಲಿಯೂ ಕಮ್ಯುನಿಸಂ ಬಗ್ಗೆ ಮಾತನಾಡದೇ ಇದ್ದವರು ಏಕಾಏಕಿ ಹಾಸನದಲ್ಲಿ ಬೇಡವಾದ '3' ಸಿಗಳಲ್ಲಿ ಕಮ್ಯೂನಿಸಂನ್ನು ಸೇರಿಸಿ ಪರೋಕ್ಷವಾಗಿ "ಯಾವುದೋ" ಪಕ್ಷಕ್ಕೆ ರಾಜಕೀಯವಾಗಿ ಬೆಂಬಲಕ್ಕೆ ನಿಂತಿರಬಹುದೇ? ಅಕ್ರಮ ಭೂ ಅತಿಕ್ರಂನದ ಬಗ್ಗೆ ಪತ್ರಿಕೆಯಲ್ಲಿ ವರದಿ ಬಂದಿರುವುದನ್ನು ಪತ್ರಕರ್ತರು ಗುರೂಜಿಗೆ ಪ್ರಶ್ನೆ ಕೇಳಿದಾಗ "ಅದೆಲ್ಲಾ ಶುದ್ಧ ಸುಳ್ಳು, ನನಗೆ ಇನ್ನೂ ಆಸ್ತಿ ಬರಬೇಕಾಗಿದೆ" ಎಂದು ಹೇಳಿರುವುದನ್ನು ಗಮನಿಸಿದರೆ ಈತ ಇನ್ನೂ ಎಷ್ಟು ಕಡೆ ಆಸ್ತಿ ಮಾಡಿರಬಹುದು ಎನ್ನುವುದನ್ನು ಬಯಲಿಗೆ ಬರಬೇಕಾಗಿದೆ.



ಸಂಗಾತಿಯನ್ನರಸುವ ಹೊತ್ತು

ಮೀನಾಕ್ಷಿ ಬಾಳಿ

ಸಾಂಪ್ರದಾಯಿಕ ಮದುವೆಗಳು ಜಾತಿ, ವರ್ಗ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವ, ಡಂಭಾಚಾರ, ಒಣ ಪ್ರತಿಷ್ಠೆ ಮೆರೆಸುವ ನೆಪಗಳಾಗಿರುವಾಗ ಇಲ್ಲೊಂದು ಭಿನ್ನ ಮಾದರಿಇದೆ.

*ಎಮ್ಮವರು ಬೆಸಗೊಂಡಡೆ
ಶುಭಲಗ್ನವೆನ್ನಿರಯ್ಯ,
ರಾಶಿಕೂಟ ಋಣಸಂಬಂಧವುಂಟೆಂದು
ಹೇಳಿರಯ್ಯ,
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯ,
ನಾಳಿನ ದಿನಕ್ಕಿಂದಿನ ದಿನ ಲೇಸೆಂದು ಹೇಳಿರಯ್ಯ
ಕೂಡಲ ಸಂಗಮದೇವನ ಪೂಜಿಸಿದ ಫಲ
ನಿಮ್ಮದಯ್ಯ.*

ಇದು ಕ್ರಾಂತಿಕಾರಿ ಸಮಾಜ ಚಿಂತಕ ಬಸವಣ್ಣನವರ ವಚನ. ವಿವಾಹವೆಂಬ ಸಂಸ್ಥೆಯ ಸುತ್ತಾ ಹುತ್ತ ಕಟ್ಟಿದ ಧಾರ್ಮಿಕ ಕಂದಾಚಾರಗಳನ್ನು ಖಂಡಿಸುವ ದಿಶೆಯಲ್ಲಿ ಈ ವಚನ ಸ್ಪಷ್ಟ ಕಣ್ನೋಟ ನೀಡುತ್ತದೆ. ಗಂಡು-ಹೆಣ್ಣುಗಳ ಪರಸ್ಪರ ದೈಹಿಕ ಮತ್ತು ಮಾನಸಿಕ ಕಾಮನೆಗಳು ನಿಸರ್ಗದಷ್ಟೇ ಸಹಜ ಮತ್ತು ಆರೋಗ್ಯ ಪೂರ್ಣವು ಹೌದು. ನೈಸರ್ಗಿಕ ಒತ್ತಾಸೆಗಳ ಫಲವಾಗಿ ಪರಸ್ಪರ ಕೂಡಿ ಬಾಳುವ ಸಂಗಾತಿ ಬಯಕೆಯನ್ನು ದುರ್ಬಳಕೆ ಮಾಡಿಕೊಂಡಿರುವ ವಿವಾಹವೆಂಬ ಸಂಸ್ಥೆಯ ಹಿಂದಿನ ಪುರುಷ ಕೇಂದ್ರಿತ ಆಯಾಮಗಳನ್ನು ಬಸವಣ್ಣ ಇಲ್ಲಿ ನಿಷ್ಕರ್ಷೆಗೆ ಒಳಪಡಿಸುತ್ತಾರೆ.

ಮಹಿಳಾ ವಿರೋಧಿ ನೆಲೆ

ಸಾಮಾಜಿಕ ಸ್ವಾಸ್ಥ್ಯ ಕಾಪಾಡಲೆಂದು ವಿವಾಹವೆಂಬ ಸಂಸ್ಥೆಯನ್ನು ನಾಗರೀಕ ಸಮುದಾಯ ಅಭಿವೃದ್ಧಿಪಡಿಸಿಕೊಂಡು ಬರುತ್ತಿದೆ ಎಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ ಪ್ರಾಯೋಗಿಕವಾಗಿ ರೂಢಿಗತವಾಗಿರುವ ವಿವಾಹವೆಂಬ ಪದ್ಧತಿಯ ಹತ್ತಾರು ಆಚರಣೆಗಳು ಮಹಿಳಾ ವಿರೋಧಿ ನೆಲೆಯನ್ನೇ ಕಾಣಿಸುತ್ತವೆ. ಖಾಸಗಿ ಆಸ್ತಿಯ ಅಧಿಕಾರದೊಂದಿಗೆ ತಳಕು ಹಾಕಿಕೊಂಡಿರುವ ವಿವಾಹ, ಕುಟುಂಬ ಇತ್ಯಾದಿ ಸಾಮಾಜಿಕ ಸಂಸ್ಥೆಗಳು ಪುರುಷ ಪ್ರಧಾನ ಆಶಯಗಳನ್ನೇ ಬಿಂಬಿಸುತ್ತಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದ್ದರಿಂದಲೇ ವಿವಾಹವೆಂಬ ವಿಧಿ ನಿಯಮವು ಪುರುಷರಿಗೆ ಕೊಡ ಮಾಡುವ ಸೌಲತ್ತುಗಳೇ ಬೇರೆ. ಸ್ತ್ರೀಯರಿಗೆ ಹೊರಿಸುವ ಜವಾಬ್ದಾರಿ-ಕರ್ತವ್ಯಗಳೇ ಬೇರೆ, 'Marriage is an relation for a boy. But it is an life for a gril' -ಹೌದು ಮದುವೆ ಎಂಬುದು ಪುರುಷನಿಗೆ ಒಂದು ಸಂಬಂಧ ಮಾತ್ರ. ಸ್ತ್ರೀಯರಿಗೆ ಬಹಳ ಸಾರಿ ಅದು ಬಿಡಿಸಲಾಗದ, ಬಿಡಿಸಿಕೊಳ್ಳಲಾಗದ ಸಂಪೂರ್ಣ ಬದುಕಿನ ಬಂಧನವಾಗಿರುತ್ತದೆ. ಆದ್ದರಿಂದಲೇ ಇವತ್ತಿಗೂ ಭಾರವೆನಿಸಿದರೆ ಪುರುಷರು ವಿವಾಹ ಸಂಬಂಧಗಳನ್ನು ಧಿಕ್ಕರಿಸಿ ಓಡಿ ಹೋಗುವಷ್ಟು ಸುಲಭವಾಗಿ ಸ್ತ್ರೀಯರು ಸಂಸಾರದ ಜಂಜಡವನ್ನು ಬಿಡಿಸಿಕೊಂಡು ಹೋಗಲಾಗದು. ನಮ್ಮ ಧರ್ಮ ಶಾಸ್ತ್ರಗಳು, ಸಾಮಾಜಿಕ ವಿಧಿನಿಯಮಗಳು ವಿವಾಹವನ್ನು ಕುರಿತು ಸ್ತ್ರೀ-ಪುರುಷರಿಬ್ಬರಿಗೂ ಹತ್ತಾರು ತಾರತಮ್ಯಗಳನ್ನು ಕಲ್ಪಿಸಿವೆ. ಧರ್ಮಶಾಸ್ತ್ರಗಳ ಚೌಕಟ್ಟಿನಲ್ಲಿಯೇ ಬಾಲ್ಯವಿವಾಹ, ಬಹುಪತ್ನಿತ್ವ, ವಿಧವಾವೇತನ, ಪುತ್ರಬಯಕೆ ಇತ್ಯಾದಿಗಳನ್ನು ಪೋಷಿಸಿಕೊಂಡು ಬರಲಾಗಿದೆ. ಧರ್ಮಶಾಸ್ತ್ರಗಳು ನೈತಿಕ ನಿಯಮಾವಳಿಯ ಅಡಿಯಲ್ಲಿ ಸ್ತ್ರೀಪುರುಷರಿಬ್ಬರಿಗೂ ಸಮಾನವಾದ ಮೌಲ್ಯಗಳನ್ನು ಬೋಧಿಸಿವೆಯಾದರೂ ಈ ನೀತಿ ಶಾಸ್ತ್ರವು ಇವತ್ತಿಗೂ ಆದರ್ಶ ಮಾತ್ರವಾಗಿ ಅನುಕರಿಸಲಾಗದ ಬೋಧನೆ ಮಾತ್ರವಾಗಿ ಉಳಿದಿವೆ. ಸಮಾಜ ಬದುಕಿನಲ್ಲಿ ಮಾತ್ರ 'ಮದುವೆ' ಎಂಬ ಚೌಕಟ್ಟು ಅನೇಕ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಹರಡಿಬಿಟ್ಟಿದೆ.

ರಕ್ತಗಾಲಿನ ಚರಿತ್ರೆ

12ನೇ ಶತಮಾನದಲ್ಲಿ ಬಸವಾದಿ ಅಸಂಖ್ಯ ಕಾಯಕ ಜೀವಿಗಳು ಸೇರಿ ಅಂದು ನೆರವೇರಿಸಿದ್ದ ಹರಳಯ್ಯ-ಮಧುವರಸರ ಮಕ್ಕಳ ಅಂತರ್ಜಾತಿ ವಿವಾಹವನ್ನು ಈ ಕಾರಣಕ್ಕಾಗಿಯೇ ಪುರೋಹಿತಶಾಹಿ ಖಂಡಿಸಿತು. ಅಷ್ಟೇ ಅಲ್ಲ ರಾಜಪ್ರಭುತ್ವವನ್ನು ಬಳಸಿಕೊಂಡು ಕಲ್ಯಾಣದಲ್ಲಿ ಶರಣರ ಮಾರಣಹೋಮವನ್ನೇ ನಡೆಸಿತ್ತು. ಅಂತರ್ಜಾತಿ ವಿವಾಹಕ್ಕೆ ಅನುವು ಮಾಡಿಕೊಟ್ಟವರ, ಅಂಥದೊಂದು ಮದುವೆಗೆ ಒಡ್ಡಿಕೊಂಡವರ ರಕ್ತದ ಓಕುಳಿಯನ್ನು ಅವರು ಹರಿಸಿದ್ದರು. ಕ್ರಾಂತಿ ಕೆಂಡದ ಕುಂಡ ಹೊತ್ತ ಸಮಾಜವಾದಿ ಸಂಗಾತಿಗಳು ಮಾತ್ರ ಆ ಅಂದಿನ ಕಲ್ಯಾಣದ ಬೀದಿಯಿಂದ ಇಂದಿನವರೆಗೂ ರಕ್ತಗಾಲಿನ ತಮ್ಮ ಪಾಲಿನ ತಮ್ಮ ಚರಿತ್ರೆ ಬರೆಯುತ್ತಲೇ ಬರುತ್ತಿದ್ದಾರೆ. ಹೌದು ಸಮಾಜದ ಎಲ್ಲ ನಿರ್ಬಂಧ, ಸಂಕೋಲೆ ಮಡಿವಂತಿಕೆಯನ್ನು ಮುರಿದು ಶುದ್ಧ ಪ್ರೀತಿ ಮತ್ತು ಮಾನವಾಂತಃಕರಣವನ್ನು ನೆಚ್ಚಿಕೊಂಡವರು ಇವತ್ತಿಗೂ ಅರ್ಥಪೂರ್ಣವಾಗಿ ಸ್ವಯಂ ಇಚ್ಛೆಯ ವ್ಂದ್ಂವಿಗ್ಳ್ನ್ನ ಮಾಡಿಕೊಳ್ಳುತ್ತಿದ್ದಾರೆ. ಜಾತಿಯ ಕಟ್ಟಳೆ ಮೀರಿ, ಅಂತಸ್ತಿನ ಸೊಕ್ಕನ್ನು ಧಿಕ್ಕರಿಸಿ ಪರಸ್ಪರ ಸಮಾಲೋಚನೆ, ತಿಳುವಳಿಕೆ, ಗೌರವಾದರಗಳೊಂದಿಗೆ ಸಂಗಾತಿಗಳನ್ನು ಅರಸಿಕೊಂಡು ಮೌಲ್ಯಯುತ ಬದುಕು ಸವೆಸುತ್ತಿದ್ದಾರೆ. ಸೈದ್ಧಾಂತಿಕ ಬದ್ಧತೆ ಮತ್ತು ಸಾಮಾಜಿಕ ಕಳಕಳಿಯೊಂದಿಗೆ ವಿವಾಹ ಏರ್ಪಡಿಸಿಕೊಂಡು ಸುಖವಾಗಿ ಬದುಕುತ್ತಿರುವ ಬೆರಳೆಣಿಕೆಯಷ್ಟು ಕುಟುಂಬಗಳ ಸಾಲಿಗೆ ಇತ್ತೀಚೆಗೆ ಇನ್ನೊಂದು ಹೊಸ ಜೋಡಿ ಬಂದು ಸೇರಿದೆ.

09.12.2007ರಂದು ಗುಲ್ಬರ್ಗಾ ವಿದ್ಯಾರ್ಥಿ ಸಂಘದ ಮುಖಂಡರಾದ ಶರಣಪ್ಪ ಸೈದಾಪೂರ ಮತ್ತು ಸಂಗೀತಾ ಗಿರಿ ಇಬ್ಬರೂ ಪ್ರಜ್ಞಾವಂತಿಕೆ ಮೆರೆದು ಪರಸ್ಪರ ಮೆಚ್ಚಿ ಸಂಗಾತಿಗಳಾಗಿದ್ದಾರೆ. ಪ್ರಜ್ಞಾ ಕಾನೂನು ಸಲಹಾ ಸಮಿತಿ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ನಗರದ ಖೂಬಾ ಕಲ್ಯಾಣ ಮಂಟಪದಲ್ಲಿ ವರದಕ್ಷಿಣೆ ಪಿಡುಗಿಲ್ಲದ, ಬಾಜಾಬಜಂತ್ರಿ, ಆಹೇರಿ, ಅದ್ದೂರಿ ಖರ್ಚುಗಳಿಲ್ಲದ, ಎಲ್ಲಕ್ಕಿಂತ ಹೆಚ್ಚಾಗಿ ಯಾವುದೇ ಧರ್ಮ ಜಾತಿಯ ಆಚರಣೆಗಳಿಲ್ಲದೆ, ಕ್ಲೀಷೆಗಳಿಲ್ಲದೆ ಒಂದು ಸರಳ, ಅರ್ಥಪೂರ್ಣ ಮದುವೆ ನಡೆಸಲಾಯಿತು. ಶರಣಪ್ಪ ಸೈದಾಪುರ ಮತ್ತು ಸಂಗೀತಾ ಗಿರಿ ಅಂದು ಬಾಳಿನ ಸಂಗಾತಿಗಳಾಗುವ ಪ್ರತಿಜ್ಞೆಗೈದರು.

ಹಿಂದೆ ಇದೇ ರೀತಿ ಸರಳ ಮದುವೆ ಮಾಡಿಕೊಂಡಿರುವ 'ಜನಶಕ್ತಿ' ವಾರಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್, ಬೆಂಗಳೂರು ಇವರ ಮಾತುಗಳೊಂದಿಗೆ ಮದುವೆ ಮಂಟಪವು ಸೈದ್ಧಾಂತಿಕ ಅನುಭವ ಮಂಟಪವಾಗಿ ಕಂಗೊಳಿಸಿತು. ಅಂತೆಯೇ ಗುಲ್ಬರ್ಗಾದಂಥ ಪಕ್ಕಾ ಫ್ಯೂಡಲ್ ಏರಿಯಾದಲ್ಲಿದ್ದುಕೊಂಡು ಈಗ ಇಪ್ಪತ್ತು ವರ್ಷಗಳ ಹಿಂದೆ ಒಂದು ಕಪ್ ಚಹಾದೊಂದಿಗೆ ಮದುವೆ ಮಾಡಿಕೊಂಡಿರುವ ಸುಭಾಶ್ಚಂದ್ರ ಬಾಗಿ ದಂಪತಿಗಳು. ವಧು-ವರರಿಗೆ ಪ್ರತಿಜ್ಞೆ ಬೋಧಿಸಿದರು. ಎಸ್.ಎಫ್.ಐ. ಮುಖಂಡರಾದ ವಿಜಯಕುಮಾರ ದೊಡ್ಡಮನಿಯವರು ಶುಭಾಶಯ ಕೋರಿದರೆ ಸಮುದಾಯ ಸಂಗಾತಿಗಳು ಶೃಂಗಾರ ಗೀತೆಗಳನ್ನು ಹಾಡಿದರು. ನವವಿವಾಹಿತ ಶರಣಪ್ಪ ಮತ್ತು ಸಂಗೀತಾ ಅವರು ತಮ್ಮ ಖುಷಿ ಮತ್ತು ಕ್ರಾಂತಿಯ ಹೆಜ್ಜೆಗಳನ್ನು ಸಭಿಕರೊಂದಿಗೆ ಹಂಚಿಕೊಂಡದ್ದು ಯುವ ಪೀಳಿಗೆಗೆ ಒಂದು ಕರೆಯಾಗಿ ಪರಿಣಮಿಸಿತು. ಮೊದ ಮೊದಲು ಇಂಥದೊಂದು ಸರಳ ಮತ್ತು ಧಾರ್ಮಿಕಾಂಶಗಳಿಲ್ಲದ ಮದುವೆಗೆ ಅಸಮ್ಮತಿ ಸೂಚಿಸಿದ ವಧು-ವರರ ಪಾಲಕರು ಸಂಗಾತಿಗಳ ಪ್ರಬುದ್ಧ ನಡೆ ಮತ್ತು ಸಮಜಾಯಿಸಿಯಿಂದಾಗಿ ತಾವೇ ಖುದ್ದಾಗಿ ಬಂದು ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದು ಹೊಸ ವ್ಯವಸ್ಥೆಗೆ ಒಡ್ಡಿಕೊಳ್ಳುತ್ತಿರುವ ಸಮಾಜಕ್ಕೆ ಸಂಕೇತವಾಗಿತ್ತು. ಶುಭಾಶಯ ಕೋರಲೆಂದು ನೆರೆದಿದ್ದ ನೂರಾರು ಜನತೆಗೆ ಈ ಖರ್ಚಿಲ್ಲದ ಸರಳ ಮದುವೆ ಖುಷಿ ಕೊಟ್ಟಿದ್ದು ಅವರ ಕಣ್ಣುಗಳಲ್ಲಿ ಪ್ರತಿಬಿಂಬಿಸತೊಡಗಿತ್ತು. ಅರೇ! ಮದುವೆ ಅಂದ್ರ ಇಷ್ಟ್ ಸರಳಾಗಿ, ಛಂದಾಗಿ, ಭರ್ತಿಯಾಗಿ ಮಾಡ್‌ಬಹುದಲ್ಲಾ ಎಂದು ಅವರು ಮಾತಾಡಕೊಳ್ಳತೊಡಗಿದರು. ಹದಿಹರೆಯ ಕಿಶೋರಿ ಕಂಗಳಲ್ಲಿ ಹಾಂ ನಾವು ನಮಗೆ ಫಸಂದ್ ಬಂದವರನ್ನೇ ಆರಿಸಿಕೊಂಡು ಎಲ್ಲ ಎಲ್ಲ ಹುಸಿ ಬೇಲಿ ಕಿತ್ತೊಗೆದು ಮದುವೆ ಮಾಡಿಕೊಳ್‌ಬಹುದು ಎಂಬ ಮಿಂಚು ಫಳಫಳಿಸುತ್ತಿತ್ತು. ಅವರ ಉದ್ಗಾರವಾಚಕಗಳಲ್ಲಿ ಅದು ವ್ಯಕ್ತವೂ ಆಗುತ್ತಿತ್ತು. ○



ಬಾಳ ಸಂಗಾತಿಗಳಾದ ಶರಣಪ್ಪ ಸೈದಾಪುರ, ಸಂಗೀತಾ ಗಿರಿ

ಕುಲಾಚಾರ: ಜಾತಿ-ವರ್ಗ ಹಿತಾಸಕ್ತಿ

ಅವರವರ ಜಾತಿ, ಕುಲ, ಗೋತ್ರಗಳಲ್ಲಿಯೇ ಮದುವೆಯಾಗಬೇಕೆಂಬ ಕುಲಾಚಾರ ಜಾತಿ ವ್ಯವಸ್ಥೆಯನ್ನು ಸ್ಥಾಯಿಗೊಳಿಸುವ ಸಶಕ್ತ ಅಸ್ತ್ರವಾದರೆ, ಅವರವರ ಅಂತಸ್ತು, ಪ್ರತಿಷ್ಠೆ, ವರಮಾನಗಳಿಗೆ ತಕ್ಕವರ ನಡುವೆ ನಡೆಯುವ ವಿವಾಹಗಳು ವರ್ಗಹಿತಾಸಕ್ತಿಯನ್ನು ಕಾಪಾಡುವ ತಂತ್ರವಾಗಿವೆ. ಮದುವೆ ಸಂಬಂಧಗಳಲ್ಲಿ ಆಚರಿಸುವ ಕನ್ಯಾ ಪರೀಕ್ಷೆ, ಹಸ್ತಸಾಮುದ್ರಿಕ, ಜ್ಯೋತಿಷ್ಯ, ಶುಭ ಮುಹೂರ್ತ, ಧಾರ್ಮಿಕ, ಪೂಜೆ ಪುನಸ್ಕಾರ ಇತ್ಯಾದಿಗಳಂತೂ ಮೌಢ್ಯದ ಪರಮಾವಧಿಯನ್ನು ಪೋಷಿಸಿಕೊಂಡು ಬರುತ್ತಿವೆ. ಹೆಚ್ಚುತ್ತಿರುವ ವರದಕ್ಷಿಣೆ, ವರೋಪಚಾರ, ಅದ್ದೂರಿ ಮದುವೆ, ಶ್ರೀಮಂತಿಕೆ ಪ್ರದರ್ಶನ ಇವೆಲ್ಲವೂ ಸಾಮಾಜಿಕ ಅಪರಾಧಗಳಾಗಿವೆ. ನಮ್ಮ ದೇಶದಲ್ಲಿ ಸಂಭವಿಸುತ್ತಿರುವ ಒಟ್ಟು ಮದುವೆಗಳಲ್ಲಿ ಪ್ರತಿಶತ 90 ರಷ್ಟು ಮದುವೆಗಳು ಪರಸ್ಪರ ತಿಳುವಳಿಕೆ, ನಂಬಿಕೆ ಗೌರವಗಳಿಲ್ಲದ ಅಪರಿಚಿತ ವ್ಯಕ್ತಿಗಳ ನಡುವೆ ನಡೆಯುತ್ತವೆ. ಅಪ್ಪ-ಅಮ್ಮ-ಬಂಧು ಬಾಂಧವರ ಇಷ್ಟದಂತೆ, ಅಷ್ಟಕ್ಕೂ ಪರಸ್ಪರ ಅಂತಸ್ತು, ಜಾತಿ, ಕೊಡುಕೊಳ್ಳುವ ವ್ಯವಹಾರಗಳ ನಿರ್ಣಯದಂತೆ ಆಯ್ಕೆಯ ಅವಕಾಶವಿಲ್ಲದೆ ನಡೆಯುವ ಈ ಮದುವೆಗಳು ಲೆಕ್ಕವಿಲ್ಲದಷ್ಟು ಸಮಸ್ಯೆಗಳನ್ನು ಹುಟ್ಟು ಹಾಕಿವೆ. ನೂರಕ್ಕೆ 80 ರಷ್ಟು ಕುಟುಂಬಗಳು ಪರಸ್ಪರ ಸಾಮರಸ್ಯವಿಲ್ಲದೆ, ಪ್ರೀತ್ಯಾದರಗಳಿಲ್ಲದೆ ಸಾಮಾಜಿಕ ಒಪ್ಪಂದದಂತೆ ನಿಭಾಯಿಸಿಕೊಂಡು ಬರುತ್ತಿವೆ. ಆದಾಗ್ಯೂ ನಮ್ಮ ಮಡಿವಂತ, ಕಂದಾಚಾರಿ ಸಮಾಜಕ್ಕೆ ಅವೆಲ್ಲವೂ 'ಸುಖವಾಗಿವೆ-ಚೆನ್ನಾಗಿವೆ' ಎಂದು ಸಮರ್ಥಿಸಿಕೊಳ್ಳುವ ನಿರ್ಬಂಧವಿದೆ. ನಮ್ಮ ಪರಂಪರಾಗತ ಕುಟುಂಬ ವ್ಯವಸ್ಥೆಯಲ್ಲಿ ವೈವಾಹಿಕ ಸಂಬಂಧಗಳ ನಡುವೆ ಪರಸ್ಪರ ಪ್ರೀತಿ, ನಂಬುಗೆ ವಿಶ್ವಾಸ, ತಿಳುವಳಿಕೆ ಇರಲೇಬೇಕೆಂದೇನೂ ಇಲ್ಲ. ಅವು ಯಾವುವು ಇರದಿದ್ದರೂ ನಮ್ಮ ಕುಟುಂಬಗಳು ವಿಘಟನೆಯಾಗದಂತೆ ಅಂತೂ ಬದುಕಿನುದ್ದಕ್ಕೂ ನಿಭಾಯಿಸಿಕೊಂಡು ಬರಲಾಗುತ್ತಿದೆ ಅಲ್ಲವೆ, ಇದೇ ಭಾರತೀಯ ಸಮಾಜದ ಶ್ರೇಷ್ಠತೆ, ಇದೇ ನಮ್ಮ ಧರ್ಮ, ಸಂಸ್ಕೃತಿಯ ದಿಗ್ವಿಜಯವೆಂದೆಲ್ಲ ವ್ಯಾಖ್ಯಾನಿಸುತ್ತಾ ಜಂಭಕೊಚ್ಚಿಕೊಳ್ಳುವ ಸಂಪ್ರದಾಯಸ್ಥರ ಗುಂಪೊಂದು ಇದೆ. ಈ ಗುಂಪು ಯಾವತ್ತೂ ಸಮಾಜವು ಪರಿವರ್ತನೆಯತ್ತ ಮುಖ ಮಾಡದಂತೆ ಕಾವಲು ಕಾಯುತ್ತಲೇ ಇರುತ್ತದೆ.

ಈ ಪಟ್ಟಭದ್ರರ ಗುಂಪು ಜಾತಿ, ವರ್ಗ, ವರ್ಣ, ಲಿಂಗ ಮುಂತಾದ ತಾರತಮ್ಯಗಳನ್ನು ಸ್ಥಾಯಿಗೊಳಿಸುವ ದಿಶೆಯಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಇವುಗಳ ಮೂಲಕವೇ ಸಂಪತ್ತನ್ನು ತನ್ನಲ್ಲೇ ಕೇಂದ್ರೀಕರಿಸಿಕೊಳ್ಳುವ ಹುನ್ನಾರು ಮಾಡುತ್ತಿರುತ್ತದೆ. ಈ ಕಾರಣವಾಗಿಯೇ ಮಡಿವಂತ ಸಮಾಜ ಸ್ವಯಂ ಆಯ್ಕೆಯ ಪ್ರೇಮ ವಿವಾಹ, ಅಂತರ್ಜಾತಿ, ಅಂತರ್ಧರ್ಮೀಯ ವಿವಾಹ, ಸರಳ ವಿವಾಹ, ಪ್ರಜ್ಞಾವಂತ ವಿವಾಹಗಳನ್ನು ಧಿಕ್ಕರಿಸುತ್ತದೆ. ಇಂಥ ವಿವಾಹ ಮಾಡಿಕೊಂಡವರ ಬಗೆಗೆ ತುಚ್ಛಭಾವನೆ, ತಪ್ಪು ಅಭಿಪ್ರಾಯ, ಅನರ್ಥಕಾರಿ ಮಾಹಿತಿಗಳನ್ನು ಹರಡಿಸುತ್ತಾ ಇರುತ್ತದೆ.

ಮಹತ್ವದ ಗೆಲುವು ಸಾಧಿಸಿದ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಹೋರಾಟ

ಹಿಂದೆಲ್ಲಾ ಕಾರ್ಮಿಕ ಕಾನೂನುಗಳ ಉಲ್ಲಂಘನೆಯ ಪಟ್ಟ ಹೊತ್ತುಕೊಂಡು ಮನಬಂದಂತೆ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವ ಕೀರ್ತಿಗೆ ಪಾತ್ರರಾಗುತ್ತಿದ್ದವರಲ್ಲಿ ಖಾಸಗೀ ಕಂಪನಿಗಳೇ ಮುಂದಿರುತ್ತಿದ್ದವು.

ಆದರೆ ದೇಶದಲ್ಲಿ ಉದಾರೀಕರಣದ ಗಾಳಿ ಬೀಸಿದಂತೆ, ಅದರ ಲಾಭ ಪಡೆದು, ಖಾಸಗೀಕರಣದತ್ತ ಮುಖ ಮಾಡಲು ಹೊರಟಿರುವ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು ಕಂಪನಿಗಳು ಇದೀಗ ತಾವು ಕಾರ್ಮಿಕ ಕಾನೂನಿನ ಭಂಜಕರು, ಶೋಷಕರು, ಲಾಭಬಡುಕರು ಎಂಬ ಪಟ್ಟವನ್ನು ತಾವೇ ಧರಿಸಿಕೊಳ್ಳಲೂ ನಾ ಮುಂದು, ತಾ ಮುಂದು ಎಂದು ಸ್ಪರ್ಧೆ ಮಾಡುತ್ತಿದ್ದಾವೆ.

ನೂರಾರು, ಸಾವಿರಾರು ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಖಾಸಗಿಯವರ ಬಾಯಿಗಿಡಲು, ಅದರಲ್ಲಿ ಸಿಗುವ ಕಮಿಷನ್‌ಗಳಾಗಿ ಹಪಹಪಿಸುವ ಇಲ್ಲಿನ ಅಧಿಕಾರಿಗಳು ಅಲ್ಲಿ ಬೆವರು ಸುರಿಸಿ ದುಡಿಯುವ ಕಾರ್ಮಿಕರಿಗೆ ಮಾತ್ರ ಕನಿಷ್ಠ ಸೌಲಭ್ಯಗಳನ್ನು ನೀಡದೇ ವಂಚಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಇವತ್ತು ಸಾರ್ವಜನಿಕ ಕ್ಷೇತ್ರದ ಹೆಮ್ಮೆಯ ಉದ್ಯಮಗಳೆಂದು ಹೇಳಿಕೊಳ್ಳುತ್ತಿರುವ, ಬಿಇಎಲ್ (ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್) ಬಿಹೆಚ್‌ಇಎಲ್ (ಭಾರತ್ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್), ಹೆಚ್‌ಎಎಲ್(ಹಿಂದೂಸ್ತಾನ್ ಎರೊನಾಟಿಕ್ ಲಿಮಿಟೆಡ್), ಬಿಇಎಂಎಲ್ (ಭಾರತ್ ಅರ್ಥ್ ಮೂವರ್ ಲಿಮಿಟೆಡ್), ಬಿಎಸ್‌ಎನ್‌ಎಲ್ (ಭಾರತ್ ಸಂಚಾರ್ ನಿಗಮ ನಿಯಮಿತ) ಬಿಎಸ್‌ಇಎಲ್ (ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ) ಹಾಗೂ ಹಟ್ಟಿ ಗೋಲ್ಡ್ ಮೈನ್ಸ್‌ಗಳಲ್ಲಿ ಭಾರೀ ಪ್ರಮಾಣದಲ್ಲಿ ಕಾರ್ಮಿಕರನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ಹೆಸರಲ್ಲಿ ಶೋಷಣೆ ಮಾಡಲಾಗುತ್ತಿದೆ. ಕಮಿಷನ್ ಆಸೆಗಾಗಿ ಖಾಯಂ ಕೆಲಸಗಾರರೇ ನಿರ್ವಹಿಸಬೇಕಾದ ಕೆಲಸಗಳನ್ನು ಗುತ್ತಿಗೆ, ಹೊರಗುತ್ತಿಗೆ ನೀಡುವುದು, ಗುತ್ತಿಗೆ ಕಾರ್ಮಿಕರಿಗೆ 1970ರ ಗುತ್ತಿಗೆ ಕಾರ್ಮಿಕ ಕಾಯ್ದೆಯ ಅನ್ವಯ ಸಿಗಬೇಕಾದ ಕನಿಷ್ಠ ಸೌಲಭ್ಯಗಳನ್ನು ಗುತ್ತಿಗೆದಾರ ನೀಡದಿದ್ದರೂ, ಕಣ್ಣು ಮುಚ್ಚಿ ಕುಳಿತುಕೊಂಡಿರುವುದು. ತಮ್ಮ ಹಕ್ಕುಗಳನ್ನು ಕೇಳುವ ಕಾರ್ಮಿಕರ ಸ್ಥಿತಿ, ಹಲವಾರು ಸುಳ್ಳು ಆರೋಪಗಳನ್ನು ಹೊರಿಸಿ, ಕೆಲಸದಿಂದ ಕಿತ್ತುಹಾಕುವುದು ಅಥವಾ ಬೆದರಿಕೆ ಹಾಕುವುದು ಹಾಗೂ ರಜಾ ಸೌಲಭ್ಯ ಭತ್ಯೆ, ನೀಡದೇ ಹೆಚ್ಚುವರಿ ಅವಧಿಯ ಭತ್ಯೆ ನೀಡದೆ 10ರಿಂದ 12 ಗಂಟೆ ದುಡಿಸಿಕೊಳ್ಳುತ್ತಿರುವುದು ಸರ್ವೆಸಾಮಾನ್ಯ ಸಂಗತಿಗಳಾಗಿವೆ.

ಹೋರಾಟದ ಹಾದಿ

ಆದರೆ ಇಂತಹುದೇ ಸಮಸ್ಯೆಗಳನ್ನು ಕಳೆದ ಹತ್ತಾರು ವರ್ಷಗಳಿಂದ ಎದುರಿಸುತ್ತಿರುವ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು ಕಳೆದ ಎರಡು ವರ್ಷಗಳಿಂದ ಹೋರಾಟದ ಹಾದಿ ತುಳಿದಿದ್ದಾರೆ. ಎಕ್ಸ್‌ಚೇಂಜ್‌ಗಳಲ್ಲಿ ಹೌಸ್‌ಕೀಪಿಂಗ್, ಸೆಕ್ಯೂರಿಟಿ, ಕೇಬಲ್, ಫೋನ್ ಪಾಲ್ಟ್ ರಿಪೇರಿ ಇತ್ಯಾದಿ ಹೆಸರಲ್ಲಿ ಸುಮಾರು 5000ಕ್ಕಿಂತ ಅಧಿಕ ಕಾರ್ಮಿಕರನ್ನು ಬಿಎಸ್‌ಎನ್‌ಎಲ್ ಗುತ್ತಿಗೆ, ಹೊಸ ಗುತ್ತಿಗೆ ಹೆಸರಲ್ಲಿ ದುಡಿಸಿಕೊಳ್ಳುತ್ತಿದೆ. ಇದಲ್ಲದೆ ಗುತ್ತಿಗೆಯೂ ಇಲ್ಲದೆ ಕನಿಷ್ಠ ಸಂಬಳವನ್ನು ನೀಡದೆ, ಮೈಸೂರು, ಧಾರವಾಡ, ಬಿಜಾಪುರ, ಬೀದರ್, ಗುಲ್ಬರ್ಗಾ, ಮತ್ತಿತರೆ ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಅಧಿಕ ಕಾರ್ಮಿಕರನ್ನು ನೇರವಾಗಿ ಬಿಎಸ್‌ಎನ್‌ಎಲ್ ಖಾಯಂ ನೌಕರರೇ ಅಥವಾ ಅಧಿಕಾರಿಗಳೇ ದುಡಿಸಿಕೊಳ್ಳುತ್ತಿದ್ದಾರೆ. ವಿಪರ್ಯಾಸದ ಸಂಗತಿ ಎಂದರೆ ಇಂತಹ ಕಾರ್ಮಿಕರೇ ಕೆಲವು ಕಡೆ ಇಡೀ ಎಕ್ಸ್‌ಚೇಂಜ್‌ನ್ನು ನಡೆಸುತ್ತಿದ್ದಾರೆ. ಆದರೆ ಇವರಿಗೆ ಬಿಎಸ್‌ಎನ್‌ಎಲ್ ಎನ್ನುವ ಸಂಸ್ಥೆಯೊಂದರಲ್ಲಿ ದುಡಿಯುತ್ತಿದ್ದೇವೆ ಎನ್ನುವ ಪ್ರತಿಷ್ಠೆಯನ್ನು ಹೊಂದುವುದು ಬಿಟ್ಟರೆ ಬೇರೆ ಯಾವುದೇ ಲಾಭವೂ ಇಲ್ಲ. ಆದರೆ ಬರೇ ಇಂತಹ ಪ್ರತಿಷ್ಠೆಯಿಂದ ಮಾತ್ರವೇ ಹೊಟ್ಟೆ ತುಂಬುವುದಿಲ್ಲ ಎನ್ನುವ ಸತ್ಯ ಸಂಘ ಕಟ್ಟುವುದರ ಮೂಲಕ ತಿಳಿಯುತ್ತಿದ್ದಂತೆ



ಕಾರ್ಮಿಕರು ರಾಜ್ಯಾದ್ಯಂತ ಬೀದಿಗಿಳಿಯುತ್ತಿದ್ದಾರೆ. ತಮ್ಮ ಬದುಕಿಗೆ ಭದ್ರತೆ ಬೇಕೆಂದು ಹೋರಾಡುತ್ತಾ ಕಿವುಡರಾದ ಬಿಎಸ್‌ಎನ್‌ಎಲ್ ಅಧಿಕಾರಿಗಳನ್ನು ಗುತ್ತಿಗೆದಾರರನ್ನು ನಿತ್ಯ ಎಚ್ಚರಿಸುತ್ತಿದ್ದಾರೆ.

ಮಹತ್ವದ ಗೆಲುವು

ಡಿಸೆಂಬರ್ 4ರ ಹೋರಾಟ

ಕಳೆದ ಮೇ ತಿಂಗಳಿಂದ ವಿವಿಧ ಜಿಲ್ಲೆಗಳಲ್ಲಿ ತೀವ್ರ ಹೋರಾಟ ಆರಂಭಿಸಿದ್ದ ಕಾರ್ಮಿಕರು ಅಕ್ಟೋಬರ್ 31ರಂದು ಎಲ್ಲಾ ಕಡೆ ಪ್ರತಿಭಟನೆ ನಡೆಸಿದ್ದರು. ಆದರೆ ಇದ್ಯಾವುದಕ್ಕೂ ಬಿಎಸ್‌ಎನ್‌ಎಲ್ ಆಡಳಿತ ಮಾತ್ರ ತಲೆಕೆಡಿಸಿಕೊಳ್ಳಲಿಲ್ಲ. ಇದೇ ವೇಳೆ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸೇವಾ ಮಸೂದೆ ಜಾರಿ, ಬೆಲೆಯೇರಿಕೆ ನಿಯಂತ್ರಣ-ಮತ್ತಿತರೆ ಬೇಡಿಕೆಗಳಿಗಾಗಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಅಖಿಲ ಭಾರತ ಮಟ್ಟದಲ್ಲಿ ಡಿಸೆಂಬರ್ 4 ಮತ್ತು 5ರಂದು ಸತ್ಯಾಗ್ರಹ, ಜೈಲ್‌ಭರೋ ಚಳುವಳಿಗೆ ಕರೆ ನೀಡಿದ್ದವು. ಇದೇ ಅವಕಾಶವನ್ನು ಬಳಸಿಕೊಳ್ಳಲು ನಿರ್ಧರಿಸಿದ "ಕರ್ನಾಟಕ ಸ್ಟೇಟ್ ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್" ನೆನೆಗುದಿಗೆ ಬಿದ್ದಿರುವ ತಮ್ಮ ಹಲವು ಬೇಡಿಕೆಗಳ ಈಡೇರಿಕೆಗೆ ಬೆಂಗಳೂರಿನ ಸರ್ಕಲ್ ಜನರಲ್ ಮೇನೆಜರ್ ಕಛೇರಿ (ಸಿಜಿಎಂ) ಮುತ್ತಿಗೆ ಹಾಕಲು, ಸಾಧ್ಯವಾದರೆ ಸಾವಿರಾರು ಸಂಖ್ಯೆಯಲ್ಲಿ ಜೈಲ್‌ಭರೋ ನಡೆಸಲು ನಿರ್ಧರಿಸಿತ್ತು. ಆದರೆ ಈ ಹೋರಾಟದ ಮೆರವಣಿಗೆಗೆ ಪೊಲೀಸರು ಅನುಮತಿ ನಿರಾಕರಿಸಿ ಪ್ರತಿಭಟನೆಗೆ ಮಾತ್ರ ಅವಕಾಶ ನೀಡಿದರು. ಆದರೂ ಸಾವಿರಾರು ಕಾರ್ಮಿಕರು ಮೆರವಣಿಗೆ ನಡೆಸಿ ಅಲಸೂರಿನಲ್ಲಿರುವ ಸಿಇಎಂ ಕಛೇರಿಗೆ ಮುತ್ತಿಗೆ ಹಾಕಿದರು. ಸಾವಿರಾರು ಕಾರ್ಮಿಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವುದನ್ನು ಗಮನಿಸಿದ ಅಧಿಕಾರಿಗಳು ಮಾತುಕತೆಗೆ ಪೊಲೀಸರ ಮೂಲಕ ಆಹ್ವಾನಿಸಿದರು (ಈ ಹಿಂದೆ ಅರ್ಜಿ ಕೂಡ ಸ್ವೀಕರಿಸಲು ಇದೇ ಅಧಿಕಾರಿಗಳು ನಿರಾಕರಿಸಿದ್ದರು) ಆದರೆ ಮನವಿ ಸಲ್ಲಿಸಲು ಮುಖಂಡರು ತೆರಳಿದಾಗ ಯಾವುದೇ ನಿರ್ದಿಷ್ಟ ಭರವಸೆ ನೀಡಲು ನಿರಾಕರಿಸಿದರು. ಪ್ರತಿ ಜಿಲ್ಲಾವಾರು ನಮ್ಮ ಸಂಘದಿಂದ ನಿರ್ದಿಷ್ಟವಾದ ವಿಚಾರಗಳನ್ನು ನೀಡುತ್ತೇವೆ. ಕನಿಷ್ಠ ಅವುಗಳನ್ನು ಪರಿಶೀಲಿಸಿ ನಂತರ ಒಂದು ಸುತ್ತೋಲೆ ಹೊರಡಿಸಬೇಕು ಎಂಬ ಬೇಡಿಕೆ ಮುಂದಿಟ್ಟೆವು. ಆದರೆ ನಾವು ನೀಡಿದ ವಿವರ ಪಡೆದೂ ಯಾವುದೇ ನಿರ್ದಿಷ್ಟ ಕ್ರಮದ ಬಗ್ಗೆ ಭರವಸೆ ನೀಡದೆ ಇದ್ದಾಗ ಸಹಜವಾಗಿಯೇ ನೇತೃತ್ವ ವಹಿಸಿದ್ದ ಮುಖಂಡರ ಆಕ್ರೋಶ ಹೆಚ್ಚಾಯಿತು. ಅಂತಿಮವಾಗಿ ಸಿಜಿಎಂ ಕಛೇರಿಯಿಂದ ಎಲ್ಲಾ ಅಧೀನ ಅಧಿಕಾರಿಗಳಿಗೂ ಕಾರ್ಮಿಕ ಕಾನೂನು ಜಾರಿಗೆ ಸುತ್ತೋಲೆ ಹೊರಡಿಸಿದ ಹೊರತು ನಾವು "ಇಲ್ಲಿಂದ ಕದಲುವುದಿಲ್ಲ. ರಾತ್ರಿಯೆಲ್ಲಾ ಇದೇ ಕಛೇರಿ ಎದುರೇ ಧರಣಿ ಮಾಡುತ್ತೇವೆ ಎಂಬ ಎಚ್ಚರಿಕೆ ನೀಡಿದರು. ಅಲ್ಲದೆ ಜೈಲ್‌ಭರೋ ಚಳುವಳಿಗೂ ಸಿದ್ಧ ಎಂದರು. ಆಗ ಮಣಿದ ಅಧಿಕಾರಿಗಳು ಕೊನೆಗೆ ಎರಡೇ ದಿನದಲ್ಲಿ ಈ ಬಗ್ಗೆ ಸುತ್ತೋಲೆ ಹೊರಡಿಸುತ್ತೇವೆ ಎಂದು ಭರವಸೆಯನ್ನು ಸ್ವತಃ ಪ್ರತಿಭಟನಾ ಸ್ಥಳಕ್ಕೆ ಬಂದು ನೀಡಿದರು. ಅಲ್ಲದೆ, ಸ್ಥಳದಲ್ಲಿದ್ದ ಪೊಲೀಸ್ ಅಧಿಕಾರಿಗಳು ಈ ಬಗ್ಗೆ ಜವಾಬ್ದಾರಿ ಕೊಳ್ಳುವುದಾಗಿ ಘೋಷಿಸಿದರು. ಅದರಂತೆ ಹೋರಾಟ ಮುಕ್ತಾಯಗೊಂಡ ಎರಡೇ ದಿನಗಳಲ್ಲಿ ನೀಡಿದ ಭರವಸೆಯಂತೆ ಎಲ್ಲಾ ಜಿಲ್ಲೆಗಳ ಟೆಲಿಕಾಂ ಮೇನೆಜರ್‌ಗಳಿಗೂ ಲಿಖಿತ ಸುತ್ತೋಲೆ ಹೊರಡಿಸಿ ಬಿಎಸ್‌ಎನ್‌ಎಲ್‌ನಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ಕಾನೂನುಬದ್ಧ ಸೌಲಭ್ಯಗಳಾದ ಇಎಸ್‌ಐ, ಪಿಎಫ್, ಕನಿಷ್ಠ ವೇತನ, ರಜಾಸೌಲಭರ್ಯ, ಗುರುತಿನ ಚೀಟಿ, ಸಂಬಳ ಚೀಟಿ, ಮೊದಲಾದವುಗಳನ್ನು ತಪ್ಪದೇ ಕೊಡಿಸುವ ಜವಾಬ್ದಾರಿಯನ್ನು ಎಲ್ಲಾ ಅಧಿಕಾರಿಗಳು ವಹಿಸಿಕೊಳ್ಳಬೇಕು ಎಂದು ಸೂಚಿಸಿ ಸುತ್ತೋಲೆ ಕಳಿಸಲಾಗಿದೆ. ಅಲ್ಲದೆ ರಾಜ್ಯ ಸಂಘಕ್ಕೂ ಆ ಸುತ್ತೋಲೆ ನೀಡಲಾಯಿತು.

ಕೇಳುವವರೇ ಇಲ್ಲ

ಒಟ್ಟಿನಲ್ಲಿ ಹತ್ತಾರು ವರ್ಷ ಜೀತದಾಳುಗಳಂತೆ ದುಡಿಯುತ್ತಿದ್ದರೂ ಅವರ ಗೋಳನ್ನು ಕೇಳುವವರೇ ಇರಲಿಲ್ಲ. ಇದೀಗ ನೊಂದ ಕಾರ್ಮಿಕರ ಹೋರಾಟಕ್ಕೆ ಬೆಂಬಲದ ಧ್ವನಿಯಾಗಿ ಈ ಸುತ್ತೋಲೆ ಹೊರಬಂದಿದೆ. ಹಾಗಾಗಿ ಇದೊಂದು ಮಹತ್ವದ ಜಯವೇ ಆಗಿದೆ. ಡಿಸೆಂಬರ್ 4ರ ಈ ಹೋರಾಟದ ನೇತೃತ್ವವನ್ನು ವರ್ಕರ್ಸ್ ಯೂನಿಯನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ, ಮೀನಾಕ್ಷಿ ಸುಂದರಂ, ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಮಹಾಂತೇಶ್, ಉಪಾಧ್ಯಕ್ಷ ಹೆಚ್.ಕೆ.ಚಲುವರಾಜು, ಬೆಂಗಳೂರು ಮುಖಂಡರಾದ, ಸದಾಶಿವ, ರಾಮಾಂಜನೇಯ, ಈಶ್ವರ, ನಾಗರಾಜ್, ರಾಮು, ದೇವರಾಜ್, ಉದಯ, ಕುಮಾರ್, ವಿರಜಾ, ಲಿಂಗರಾಜ್, ಶ್ರೀನಿವಾಸ್, ದೊಡ್ಡಬಳ್ಳಾಪುರದ ವೆಂಕಟೇಶ್, ಚಿಕ್ಕಬಳ್ಳಾಪುರದ ಮೂರ್ತಿ, ಮೈಸೂರಿನ, ಶ್ರೀನಿವಾಸ್, ಲೋಕೇಶ್, ಉತ್ತರಕನ್ನಡದ ಚಂದ್ರಕಾಂತ್, ರಾಘವೇಂದ್ರ ನಾಯ್ಕ, ಗದಗ್‌ನ ಮುತ್ತು, ಪಲ್ಲೇದ್, ಹಾವೇರಿಯ ವಿಜಯ್, ಬೀದರ್‌ನ ಮುಸ್ತಾಪ್, ಕಲ್ಲಪ, ಬಿಜಾಪುರದ ನದಾಫ್, ರಾಯಚೂರಿನ ಬಾಬು, ಕೊಪ್ಪಳದ ಗುರುರಾಜ್ ವಹಿಸಿ ಯಶಸ್ವಿಗೊಳಿಸಿದರು.

ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಪ್ರತಾಪ್‌ಸಿಂಹ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿ ಬೆಂಬಲ ವ್ಯಕ್ತಪಡಿಸಿದರು.

■ ಕೆ.ಮಹಾಂತೇಶ್

ಹಳ್ಳಿಗಳಿಗೆ ವೈದ್ಯರು ಬೇಡವೇ?

ಹಳ್ಳಿಗಾಡಿನ ಜನತೆ ಇಡೀ ದೇಶಕ್ಕೆ ಬೇಕಾದ ಅನ್ನ, ಕಾಳು ಕಡಿ ಬೆಳೆದು ಕೊಡುತ್ತಾರೆ. 'ನಾಗರಿಕ' ಸಮಾಜಕ್ಕೆ ಬೇಕಾದ ಮತ್ತು ಎಷ್ಟೋ ಪದಾರ್ಥಗಳನ್ನು, ಸೇವೆಯನ್ನು ಅವರು ಪೂರೈಸುತ್ತಾರೆ. ಆದರೆ ಅವರಿಗೇನಾದರೂ ಕಾಯಿಲೆ, ಜಡ್ಡು ಆದರೆ ಅವರು ವೈದ್ಯರನ್ನು ಆಸ್ಪತ್ರೆಯನ್ನು ಹುಡುಕಿಕೊಂಡು ದೂರದ ನಗರಕ್ಕೇ ಬರಬೇಕು. ಬಹಳ ಸಾರಿ, ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಯೇ ಇರುವುದಿಲ್ಲ. ಇದ್ದರೂ ಅಲ್ಲಿ ವೈದ್ಯರು ಇರುವುದಿಲ್ಲ. ಇರುವುದಿಲ್ಲ ಎಂದಾಗ ಕೆಲವೊಮ್ಮೆ ಸರ್ಕಾರ ವೈದ್ಯರನ್ನು ಕೊಟ್ಟಿರುವುದಿಲ್ಲ ಹಲವು ಬಾರಿ ಅಲ್ಲಿಗೆ ನೇಮಿಸಿದ ವೈದ್ಯರು ಹಳ್ಳಿಗಳಿಗೆ ಬರುವುದೇ ಇಲ್ಲ. ಹಳ್ಳಿಗಳಲ್ಲಿ ವೈದ್ಯರು ಉಳಿದು ವಾಸಮಾಡಲು ಬೇಕಾದ ನಾಗರೀಕ ಸೌಲಭ್ಯಗಳು ಇಲ್ಲ ಎಂಬುದು ವೈದ್ಯರ ದೂರು. ಅದು ಪೂರ್ತಿ ಸುಳ್ಳೇನಲ್ಲ. ಆದರೆ ಅದಕ್ಕಿಂತ ಮುಖ್ಯ ಕಾರಣ ಎಂದರೆ ಕಾಂಚಾಣದ ಮಹಿಮೆ. ಬಡರೈತರು, ಕೂಲಿಕಾರರು, ಬಡವರೇ ಹೆಚ್ಚಾಗಿ ತುಂಬಿಕೊಂಡಿರುವ ಹಳ್ಳಿಗಳಲ್ಲಿ ಈ ವೈದ್ಯರು ಎಷ್ಟು ತಾನೇ ಆದಾಯ 'ಕಮಾಯಿಸಲು' ಸಾಧ್ಯ. ಅದೂ ಅಲ್ಲದೇ ಗ್ರಾಮಿಣ ಶ್ರೀಮಂತರು, ದೊಡ್ಡಜನಗಳು ಚಿಕಿತ್ಸೆಗಳಿಗೆ ನಗರಕ್ಕೆ ಬಂದು ಬಿಡುತ್ತಾರಲ್ಲ!!

ಈಗೇನೋ ಕೇಂದ್ರ ಸರ್ಕಾರ ವೈದ್ಯಕೀಯ ಪದವಿ ಕೋರ್ಸನ್ನು ಈಗಿರುವ ಐದುವರೆ ವರ್ಷದಿಂದ ಆರುವರೆ ವರ್ಷಕ್ಕೆ ಹೆಚ್ಚಿಸಿದೆ ಮತ್ತು ಹೆಚ್ಚಿಸಲಾದ ಒಂದು ವರ್ಷದ ಅವಧಿಯಲ್ಲಿ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಬೇಕೆಂದು ಆದೇಶಿಸಿದೆ. ಎಐಡಿಎಸ್‌ಓ ಎಂಬ ಒಂದು ವಿದ್ಯಾರ್ಥಿ ಸಂಘಟನೆ ಈ ತೀರ್ಮಾನವನ್ನು ಸಾರಾಸಗಟಾಗಿ ವಿರೋಧಿಸುತ್ತಿದೆ. ಆದರೆ ಎಸ್‌ಎಫ್‌ಐ ಸಂಘಟನೆಯು ಕೋರ್ಸ್‌ನ ಅವಧಿ ಐದುವರೆ ವರ್ಷವೇ ಸಾಕು. ಆನಂತರ ಉನ್ನತ ಶಿಕ್ಷಣಕ್ಕೆ ಹೋಗುವವರಿಗೆ ಅವಕಾಶ ಇರಲಿ. ಆದರೆ ವೈದ್ಯಕೀಯ ವೃತ್ತಿ ಆರಂಭಿಸುವ ಮುಂಚೆ 1 ವರ್ಷ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳು ಸೇವೆ ಮಾಡು ವಂತಾಗಲಿ ಎಂಬ ನಿಲುವು ತೆಗೆದುಕೊಂಡಿದೆ.

ಇಂತಹ ನಿಲುವು ತೆಗೆದುಕೊಂಡಿರುವುದಕ್ಕಾಗಿ ಎಸ್‌ಎಫ್‌ಐ ಸಂಘಟನೆ ಬಗೆಗೆ ವಿದ್ಯಾರ್ಥಿಗಳ ನಡುವೆ ಅಪಪ್ರಚಾರ ನಡೆಯುತ್ತಿದೆಯಂತೆ. ನಗರ ಪ್ರದೇಶಗಳಲ್ಲಿ ದೊರೆಯುವ 'ನಾಗರಿಕ ಸೌಲಭ್ಯ'ಗಳನ್ನು ಗ್ರಾಮೀಣ ಪ್ರದೇಶದಲ್ಲೂ ಕೊಡಿ ಅಂತ ಬೇಕಿದ್ದರೆ ವಿದ್ಯಾರ್ಥಿಗಳು ಹೋರಾಟ ಮಾಡಲಿ. ಈ ಕ್ರಮ ಹಳ್ಳಿಗಳಿಗೆ 'ನಾಗರಿಕ' ಸೌಲಭ್ಯಗಳನ್ನು ಕೊಡುವ ಒಂದು ಹೆಜ್ಜೆಯೇ ಅಲ್ಲವೇ? ಇದಕ್ಕೆಲ್ಲ ಏನಂತಾರೋ ನಮ್ಮ ಮಲ್ಲೇಶ್ವರಂ 3ನೇ ಕ್ರಾಸ್ ಸ್ನೇಹಿತರು, ಅದೇ ಶಿವ್‌ದಾಸ್ ಘೋಷ್‌ರ ಶಿಷ್ಯ, ಶಿಷ್ಯೆಯರು.

ಉಳಿದಿರುವ ಮಾಸಾಶನದ ಬಾಕಿ ತಹಶೀಲ್ದಾರರ ಕಛೇರಿ ಮುತ್ತಿಗೆ

ಕಳೆದ 4-5 ತಿಂಗಳಿಂದ ಮಾಸಾಶನ ಬರದೇ ಕಂಗಾಲಾಗಿರುವ ರಾಮದುರ್ಗ ತಾಲ್ಲೂಕಿನ ವಿಧವೆಯರು, ಅಂಗವಿಕಲರು ಮತ್ತು ವಯೋವೃದ್ಧರು ಸುಮಾರು 5000 ಜನ ಸೇರಿ ಸಿಪಿಐ(ಎಂ) ನೇತೃತ್ವದಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರ್‌ರ ಕಛೇರಿ ಘೇರಾವ್ ಮಾಡಿ ಕೂಡಲೇ ಬಾಕಿ ಉಳಿದಿರುವ ಮಾಸಾಶನ ಬಿಡುಗಡೆ ಮಾಡಲು ಒತ್ತಾಯಿಸಿದರು.

2-3 ದಿನ ರಾಮದುರ್ಗ ತಾಲ್ಲೂಕಿನ ಪ್ರತಿಯೊಂದು ಗ್ರಾಮಗಳಿಗೆ ಮತ್ತು ರಾಮದುರ್ಗ ನಗರದ ಓಣಿ-ಓಣಿಗಳಲ್ಲಿ ಪ್ರಚಾರ ಮಾಡಿ ಅಂಗವಿಕಲರು, ವಿಧವೆ ಯರು, ವಯೋವೃದ್ಧರು ಬಾಕಿ ಇರುವ ಮಾಸಾಶನ ಕೇಳಲು ಸೇರಬೇಕೆಂದು ಪ್ರಚಾರ ಮಾಡಲಾಯಿತು. ಪ್ರತಿಯೊಂದು ಗ್ರಾಮದಲ್ಲಿ ನಮ್ಮ ಪ್ರಚಾರವನ್ನು ಕೇಳಿ ಪೆನ್ಷನ್ ಪಡೆದುಕೊಳ್ಳುತ್ತಿರುವ ಜನ ತಮ್ಮ ಗೋಳನ್ನು ತೋಡಿಕೊಂಡಿದ್ದು ಹೀಗೆ:

ಕೆ.ಜುನಿಪೇಠ ಗ್ರಾಮದ ಮುದುಕಿ ಯೊಬ್ಬಳು "ಎಪ್ಪಾ 5 ತಿಂಗಳಾತು. ನನಗೆ ಗಂಡಸತ್ತ ಪಗಾರ (ವಿಧವಾ) ಬಂದಿಲ್ಲಾ. ನನಗೆ ನೋಡಾವರು ಯಾರೂ ಇಲ್ಲಾ. ಹೆಂಗಾರ ಮಾಡಿ ನಮಗೆ ಪೆನ್ಷನ್ ಬರುವಾಂಗ ಮಾಡ್ರೆಪ್ಪಾ. ನಿಮಗ ಪುನ್ಯಾ ಹತ್ತೈತಿ. ನನಗ ತಿನ್ನಾಕ ಏನೂ ಇಲ್ಲಾ" ಅಂತ ನಾಲ್ಕು ತಿಂಗಳಿಂದ ಪೆನ್ಷನ್ ಬರದೆ ಇರುವ ಈ ವಿಧವೆ ತನ್ನ ಗೋಳನ್ನು ತೋಡಿಕೊಂಡ ರೀತಿ ನೋಡಿದರೆ ಎಲ್ಲರ ಮನಸ್ಸು ಕರಗುವಂತಿತ್ತು.

ದೊಡಮಂಗಡಿಯಲ್ಲಿ "ಎಪ್ಪಾ ಏನ ಹೇಳಾಕತೀರಿ ನನಗೆ ತಿಳೀವಲ್ದು. ಸ್ವಲ್ಪ ತಿಳಿಸಿ ಹೇಳ್ರೀ" ಅಂತಾ ಒಬ್ಬ ಬಡ ಮುದುಕಿ ನಮ್ಮ ಪ್ರಚಾರದ ಗಾಡಿ ಹತ್ತಿರ ಬಂದಳು. ಅವಳಿಗೆ ನಮ್ಮ ಕಾರ್ಯಕ್ರಮದ ಉದ್ದೇಶ ಹೇಳಿದ ಮೇಲೆ ಆ ಮುದುಕಿ ಕಣ್ಣೀರಿಟ್ಟು "ತಂದೆ ನನಗೆ ಯಾರೂ ದಿಕ್ಕಿಲ್ಲಾ. ನಾಲ್ಕು ತಿಂಗಳಿಂದ ಪಗಾರನೂ ಇಲ್ಲ. ಎಲ್ಲಾರ ಕೆಲಸಕ್ಕ ಹೋಗಬೇಕೆಂದರೆ ಯಾರೂ ನನಗೆ ಕೆಲಸಾ ಕೊಡಾಕ ತಯ್ಯಾರಿಲ್ಲ. ನೀವ ನಮಗೆ ತಂದೆ ತಾಯಿ ಹೆಂಗಾರ ಮಾಡಿ ನನಗ ಪಗಾರ ಕೊಡಿಸರೆಪ್ಪ" ಅಂತಾ ಅಳುವುದು ನೋಡಿದರೆ, ಕರುಳು ಕಿತ್ತು ಬರುವಂತಿತ್ತು.

ನಗರ ಪ್ರದೇಶದಲ್ಲಿ ಒಬ್ಬ ಕುಷ್ಠರೋಗಿ ಮಹಿಳೆ "ಎಪ್ಪಾ ನಮ್ಮ ಮನಿಯೊಳಗ ತಿನ್ನಾಕ ಏನೂ ಇಲ್ಲ. ಬೇರೆಯವರ ಹತ್ತಿರ ಸಾಲಾ ಮಾಡೀವಿ, ಮತ್ತ ಕೇಳಾಕ ಹೋದ್ರ ಸಾಲಾ ಕೊಡಾವಾಲ್ರು, ತಿನ್ನಾಕ ಗತಿ ಇಲ್ದ ಮುಗಬಟ್ಟ ಮಾರಿ ಜೀವನ ನಡೆಸೀವಿ. ನಾಲ್ಕು ತಿಂಗಳಾದ್ರು ಪಗಾರ ಬಂದಿಲ್ಲ. ನೀವು ಬಂದು ನಮಗೆಲ್ಲಾ ಧೈರೆ ಕೊಟ್ಟಿದ್ದಕ್ಕ ನಿಮ್ಮ ಋಣ ಯಾವ ರೀತಿ ತೀರಿಸಬೇಕು" ಅಂತಾ ಕಣ್ತುಂಬ ನೀರು



ಸಾವಿರಾರು ಜನರ ಸಭೆ ಉದ್ದೇಶಿಸಿ ಮಾತನಾಡುತ್ತಿರುವ ವ್ಹಿ.ಪಿ.ಕುಲಕರ್ಣಿ

ತಂದು ತನ್ನ ದುಃಖವನ್ನು ತೋಡಿಕೊಂಡಳು.

ಹೀಗೆ ಹಳ್ಳಿಗಳಲ್ಲಿ ದೊಡ್ಡನಗರದ ಓಣಿ ಓಣಿಗಳಲ್ಲಿ ಹೋದಂತೆ ಒಬ್ಬರದು ಒಂದೊಂದು ರೀತಿಯ ಗೋಳು. "4-5 ತಿಂಗಳಾಯ್ತರಿ ಪಗಾರ ಬಂದ್ ಆಗಿದ್ದಕ್ ಚಹಾ ಅಂಗಡಿಯೊಳಗೆ ಉದ್ರಿ ಕೊಡು ವವರು ಉದ್ರಿ ಬಂದ ಮಾಡ್ಯಾರ, ಚಹಾ ಕುಡಿಯಲಿಕ್ಕೆ ಕಿಸೆ ಒಳಗೆ ರೊಕ್ಕಾನು ಇಲ್ಲ, ಖರೇನ ನೀವ ಬಡವರ ಪರವಾಗಿ ಧ್ವನಿ ಎತ್ತಿರಿ" ಎಂದು ಹೇಳುತ್ತಾ ನಮ್ಮ ಊರಾಗ, ಓಣ್ಯಾಗ, ಮ್ಯಾರ್‍ಯಾರ ಪಗಾರದವರ ಅದಾರ ಎಲ್ಲಾರಿಗೂ ಕರ್‍ಕೊಂಡು ಬರತೀವಿ. ಗತಿ ಇಲ್ಲದ ನಮಗೆ ನೀವೇ ದಾರಿ ತೋರಿಸಬೇಕು" ಅಂತಾ ಹೇಳಿ ನಮ್ಮ ಪ್ರಚಾರದ ಗಾಡಿಯ ಸುತ್ತ ನಿಂತು "ಹಾಳಿ (ಕರಪತ್ರ) ಕೊಡ್ರಿ ನಾವು ಹಂಚತೀವಿ" ಅಂತಾ ಹೇಳಿ ನಮ್ಮಿಂದ ಕರಪತ್ರ ತೆಗೆದುಕೊಂಡು ಹೋಗುವ ದೃಶ್ಯ ನೋಡಿದರೆ, ಗ್ರಾಮಾಂತರ ಪ್ರದೇಶದಲ್ಲಿ ಮಾಸಾಶನ ಪಡೆಯುವ ಜನರ ನೋವು ಎಷ್ಟಿದೆ ಎಂಬುದು ಅರ್ಥವಾಯ್ತು. ಇಲ್ಲಿಯ "ಜನ ಪ್ರತಿನಿಧಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ" ಎಂದು ಕೆಲವರಂತು ಚುನಾಯಿತ ಪ್ರತಿನಿಧಿಗಳಿಗೆ ಬಾಯಿಗೆ ಬಂದಂತೆ ಬೈಯುತ್ತಿದ್ದರು.

ಹೀಗೆ 2-3 ದಿನ ಪ್ರಚಾರ ಮಾಡಿ ಕೊನೆಗೆ ಡಿಸೆಂಬರ್ 15 ರಂದು ನಮ್ಮ ನಿರೀಕ್ಷೆಗೂ ಮೀರಿ ಜನ ಸೇರಿದ್ದು ನೋಡಿದರೆ, ರಾಮದುರ್ಗದ ರಾಜಕೀಯ ಪುಡಾರಿಗಳು ಗಾಬರಿಯಾದರು. ಸರಿಯಾಗಿ ಮಧ್ಯಾಹ್ನ 12.30 ರ ಸುಮಾರು 5000 ಅಂಗ ವಿಕಲರು, ವೃದ್ಧರು ಹಾಗೂ ವಿಧವೆಯರ ಬೃಹತ್ ಮೆರವಣಿಗೆ ಹೊರಡಿಸಿದ ಮೇಲಂತು ನಗರದ ಜನ ನೋಡಿ ಬೆರಗಾದರು. ಜನರು ಪ್ರಮುಖ ಬೀದಿಗಳಲ್ಲಿ ಕೂಡಲೇ ಪೆನ್ಷನ್ ಬಿಡುಗಡೆ ಮಾಡ ಬೇಕೆಂಬ ಘೋಷಣೆಗಳನ್ನು ಕೂಗುತ್ತಾ ತಹಶೀಲ್ದಾರ್‌ರ ಕಛೇರಿಯನ್ನು ಮುತ್ತಿಗೆ ಹಾಕಿದರು.

ತಹಶೀಲ್ದಾರ್‌ರ ಕಛೇರಿಯಲ್ಲಿ ಒಳಗೆ ಹೋಗಲು ಜಾಗವಿಲ್ಲದೆ-ಹೊರಗೆ ಬರಲು ಆಗದೆ ಅಧಿಕಾರಿಗಳು ಪರದಾಡುವ ದೃಶ್ಯ ಕಂಡು ಬಂದಿತು. ಮಾಸಾಶನದ ಮೇಲೆಯೇ ಅವಲಂಬಿಸಿ, ಬದುಕುತ್ತಿರುವ ಗ್ರಾಮಾಂತರ ಜನ ನಾಲ್ಕು ತಿಂಗಳಿಂದ ಪಗಾರ ಬರದೆ ಒಂದೊಪ್ಪತ್ತು ಗಂಜಿಗೂ ಗತಿ ಇಲ್ಲದೇ ಇರುವಾಗ ಜಿಲ್ಲಾ ಆಡಳಿತ ಏನು ಮಾಡುತ್ತಿದೆ, ಕೂಡಲೇ ಇದರ ಬಗ್ಗೆ ಒಂದು ಪರ್ಯಾಯ ವ್ಯವಸ್ಥೆ ಮಾಡದೇ ಇಲ್ಲಿಂದ ನಾವು ಕದಲುವುದಿಲ್ಲ ಎಂದು ಸಿಪಿಐ(ಎಂ) ಮುಖಂಡರಾದ ವಿ.ಪಿ.ಕುಲಕರ್ಣಿಯವರು ತಹಶೀಲ್ದಾರ ಕಛೇರಿಯ ಘೇರಾವ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸರ್ಕಾರದಿಂದ ಬರುವ ರೂ.400.00 ವೇತನವೇ ಅಂಗವಿಕಲರಿಗೆ, ವಿಧವೆಯರಿಗೆ ಹಾಗೂ ವಯೋವೃದ್ಧರಿಗೆ ಆಸರೆ ಯಾಗಿ ರುವಾಗ ಕಳೆದ 4-5 ತಿಂಗಳಿಂದ ವೇತನ ಬರದೇ ಫಲಾನುಭವಿಗಳು ಕಂಗಾಲಾ ಗಿದ್ದಾರೆ. ಇವತ್ತು ನಾಳೆ ನಮ್ಮ ಪೆನ್ಷನ್ ಬರಬಹುದೆಂಬ ನಿರೀಕ್ಷೆಯಲ್ಲಿ ಕಾಯುತ್ತ ಕುಳಿತಿದ್ದಾರೆ. ದಿನ ಬೆಳಗಾದರೆ ಅಂಚೆ ಪೇದೆಯನ್ನು ಮುಗಿ ಬಿದ್ದು ನಮ್ಮ ಪೆನ್ಷನ್ ಬಂದಿದೆಯಾ? ಎಂದು ಚಾತಕ ಪಕ್ಷಿಯಂತೆ ಕಾಯ್ದು ಕೇಳುವಂತಾಗಿದೆ. ಒಂದು ಕಡೆ ಬಡವರ ಪರ ಕಿಂಚಿತ್ತು ಕಾಳಜಿ ವಹಿಸದ ರಾಜಕಾರಣಿಗಳು ಕುರ್ಚಿಗಾಗಿ ಯಾತ್ರೆಗಳನ್ನು ಮಾಡುತ್ತಾ ತಮ್ಮ ಮುಂದಿನ ಚುನಾವಣೆಯ ಲೆಕ್ಕದಲ್ಲಿ ಮಗ್ನರಾಗಿ ವೇತನವಿಲ್ಲದೆ ಪರದಾಡುತ್ತಿರುವ ವಿಧವೆಯರ ಅಂಗವಿಕಲರ ಹಾಗೂ ವೃದ್ಧರ ಕಡೆ ಗಮನ ಹರಿಸಿಲ್ಲ ಎಂದು ಗೈಬು.ಎಂ.ಜೈನೆಖಾನ ಖಾರವಾಗಿ ಮಾತನಾಡಿದರು.


ಈ ಸಂದರ್ಭದಲ್ಲಿ ಎಸ್.ಬಿ.ಹಳ್ಳಿ ಗುರುಗಳು ಮಾತನಾಡಿ ಕೂಡಲೇ ಮಾಸಾಶನ ಬಿಡುಗಡೆ ಮಾಡಲು ಒತ್ತಾಯಿಸಿದರು. ಕೊನೆಗೆ ರಾಮದುರ್ಗದ ತಹಶೀಲ್ದಾರ್ ಸಂಗಮೇಶರವರು ರಾಮ ದುರ್ಗದ ಎಲ್ಲಾ ಬ್ಯಾಂಕುಗಳ ವ್ಯವಸ್ಥಾಪಕ ರನ್ನು ಕಛೇರಿಗೆ ಕರೆಯಿಸಿ ಕೂಡಲೇ ಈ ಎಲ್ಲಾ ಫಲಾನುಭವಿಗಳ ಜೀರೋ ಅಕೌಂಟ್ ತೆರೆಸಲು ಸಹಾಯ ಮಾಡಲು ವಿನಂತಿಸಿ ಆಯಾ ಅಕೌಂಟ್‌ಗಳಿಗೆ ಬಾಕಿ ಉಳಿದಿರುವ ಮಾಸಾಶನ ಜಮಾ ಮಾಡುವು ದಾಗಿ ಮಾತು ಕೊಟ್ಟಾಗ ಘೇರಾವ್ ಕಾರ್ಯಕ್ರಮ ವಾಪಸ್ಸು ಪಡೆಯಲಾಯಿತು.

ಸಿಪಿಐ(ಎಂ) ಮುಖಂಡ ಕಾಂ:ನಾಗಪ್ಪ ಸಂಗೊಳ್ಳಿ ಮತ್ತು ಬಾಬು ಶಿಕಾಲಪೂರ, ಗಿರಿಯಪ್ಪ ಬಂಡಿವಡ್ಡರ, ಪುಂಡಲೀಕ ಇಂಗಳೆ, ಶೆಟ್ಟೆಪ್ಪ ಸಂಗೊಳ್ಳಿ ಹಾಗೂ ಖಲಂದರಸಾಬ ಮೆರವಣಿಗೆ ನೇತೃತ್ವ ವಹಿಸಿದ್ದರು.

■ ಗೈಬು ಜೈನೆಖಾನ

ನೀರು ಬೇಕು ನೀರು....

ಆಹಾರ, ಉದ್ಯೋಗ, ಶಿಕ್ಷಣ, ಆರೋಗ್ಯ ಮೂಲಭೂತ ಹಕ್ಕು. ಅವು ಮನುಷ್ಯನ ಬದುಕಿಗೆ ಎಷ್ಟು ಅವಶ್ಯವೋ ಹಾಗೆಯೇ ಮತ್ತೊಂದು ಮೂಲಭೂತ ಹಕ್ಕಾದ ಕುಡಿಯುವ ನೀರು ಮನುಷ್ಯನ ಬದುಕಿಗೆ ಅಷ್ಟೇ ಅತ್ಯಾವಶ್ಯಕ. ಇಂದು ನೈಸರ್ಗಿಕವಾಗಿ ಸಿಗುವ ಪ್ರಕೃತಿದತ್ತ ನೀರು ಸಹ ವ್ಯಾಪಾರೀಕರಣವಾಗುತ್ತಿದೆ. ದೇವರು ವರ ಕೊಟ್ಟರೂ, ಪೂಜಾರಿ ಕೊಡಲಾರ ಎಂಬಂತೆ ಪ್ರಕೃತಿ ಮಾತೆ ನೀಡಿದರೂ, ಜನವಿರೋಧಿಗಳಾದ ರಾಜಕಾರಣಿಗಳು, ಅಧಿಕಾರಿಗಳು, ಕುಡಿಯುವ ನೀರನ್ನು ಎಲ್ಲಾ ಪ್ರದೇಶಗಳಿಗೆ ಸಮವಾಗಿ ವಿತರಿಸದೆ ಜನರ ಜೊತೆ ಆಟವಾಡುತ್ತಿದ್ದಾರೆ. ಒಂದು ಬಿಂದಿಗೆ ನೀರಿಗಾಗಿ ತಹತಹಿಸುತ್ತಿರುವ ಜನ ಖಾಲಿ ಬಿಂದಿಗೆಯೊಂದಿಗೆ ಬೀದಿಗಿಳಿದು ಹೋರಾಟ ಮಾಡುವ ಕೆಟ್ಟ ಪರಿಸ್ಥಿತಿ ಬಂದೊದಗಿದೆ. ಹೋರಾಟವಿಲ್ಲದೆ ಏನೂ ಸಿಗಲಾರದು, ಮುಂದೊಂದು ದಿನ ನಾವು, ಸೇವಿಸುವ ಗಾಳಿಯು ಸಿಗಲಾರದ ಸ್ಥಿತಿ ಬಂದೊದಗಿದರೆ ಅತಿಶಯೋಕ್ತಿ ಏನಿಲ್ಲ. ಶ್ರೀರಾಮಪುರದ ಲಕ್ಷ್ಮೀನಾರಾಯಣಪುರದ ನಿವಾಸಿಗಳು ಸರಿಸುಮಾರಿಗೆ ಒಂದು ವರ್ಷದಿಂದ ಸರಿಯಾಗಿ ನೀರು ಬರದೆ ಕಷ್ಟಪಡುತ್ತಿದ್ದು, ಅನೇಕ ಬಾರಿ ದೂರು ಸಲ್ಲಿಸಿದ್ದರೂ ಅವರ ಬವಣೆಯನ್ನು ಕೇಳುವವರಾರು ಇಲ್ಲ. ಕಿವುಡಾಗಿದ್ದ ಸರ್ಕಾರ ಜನ ಮಂಡಳಿ! ಇದೀಗ ಆ ಕಿವುಡು, ಕುರುಡು ಸರ್ಕಾರವೂ ಇಲ್ಲ. ಹೇಳುವವರಿಲ್ಲ, ಕೇಳುವವರಿಲ್ಲ, ಜಲಮಂಡಳಿ ತಾನಾಡಿದ್ದೇ ಆಟ. ಹತ್ತು ದಿನಗಳಿಂದ ಚೂರೋ ಪಾರೋ ಬಿಡುತ್ತಿದ್ದ ನೀರು ಇಲ್ಲ. ಬಿಟ್ಟರೆ ಒಂದು ಗಂಟೆ ಕಾಲ ಅದೂ ಬೆಳಿಗ್ಗೆ ಎಲ್ಲರೂ ಕೆಲಸಕ್ಕೆ ಹೋಗುವ ತರಾತುರಿಯಲ್ಲಿದ್ದಾಗ, ಇಲ್ಲದಿದ್ದರೇ ಆ ನೀರು ಇಲ್ಲ. ರೋಸಿಹೋದ ಲಕ್ಷ್ಮೀನಾರಾಯಣ ಪುರದ ಮಹಿಳೆಯರು ಖಾಲಿ ಕೊಡ ಗಳನ್ನೆತ್ತಿಕೊಂಡು ಬಂದು ಲಕ್ಷ್ಮೀನಾರಾಯಣ



ಪುರ ಆಟೋ ಸರ್ಕಲ್‌ನಲ್ಲಿ ಧೋ ಎಂದು ಬರುತ್ತಿರುವ ಮಳೆಯಲ್ಲಿ, ಚಳಿಯನ್ನು ಲೆಕ್ಕಿಸದೆ, ಪೋಲೀಸರ ಜೊತೆ ಚಕಮಕಿಯೊಂದಿಗೆ, ನಾಲ್ಕು ಕಡೆಯಿಂದ ಬರುವ ವಾಹನಗಳನ್ನು ನಿಲ್ಲಿಸಿ ಒಂದು ಗಂಟೆಗೂ ಹೆಚ್ಚು ಕಾಲ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಶ್ರೀ ರಾಮಪುರಂ ಪ್ರದೇಶ ಸಮಿತಿ ನೇತೃತ್ವದಲ್ಲಿ ಶುಕ್ರವಾರ(07.12.07) ರಂದು ರಾಸ್ತಾ ರೋಕೋ ನಡೆಸಿದರು. ಸರ್ಕಲ್ ಇನ್ಸ್‌ಪೆಕ್ಟರ್ ಭೂಪಯ್ಯ ರಸ್ತೆ ತೆರವು ಗೊಳಿಸಲು ಹೇಳಿದರು. ಇಂಜಿನಿಯರ್ ಬಂದು ನಮ್ಮೊಂದಿಗೆ ಮಾತನಾಡುವ ತನಕ ಹೋಗುವುದಿಲ್ಲವೆಂದು ಪಟ್ಟು ಹಿಡಿದ ಜನರ ಪಟ್ಟಿಗೆ ಕೋಪಗೊಂಡ ಸರ್ಕಲ್ ಇನ್ಸ್‌ಪೆಕ್ಟರ್ ಜೆ.ಎಂ.ಎಸ್., ಡಿವೈಎಫ್‌ಐ ಮುಖಂಡರ ಮೇಲೆ ಕೇಸ್ ಹಾಕುವುದಾಗಿ, ಒದ್ದು ಒಳಗೆ ಹಾಕುವುದಾಗಿ ಕೂಗಾಡಿದ. ಆದರೆ ಆತನ. ಗೊಡ್ಡು ಬೆದರಿಕೆಗೆ ಜಗ್ಗದ ಜೆಎಂಎಸ್‌ನ ಶಾರದಾ, ಪ್ರಭಾವತಿ, ಡಿವೈಎಫ್‌ಐ ಮುಖಂಡರಾದ ಚಂದ್ರಯ್ಯ, ಅನಂತಯ್ಯ, ಧನರಾಜ್, ವೆಂಕಟೇಶ್, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜಾಜಿನಗರ ವಲಯ ಸಮಿತಿ ಕಾರ್ಯದರ್ಶಿ ಗೋಪಾಲಕೃಷ್ಣ ಅರಳಹಳ್ಳಿ, ವಲಯ ಸಮಿತಿ ಸದಸ್ಯರಾದ ವೀರಮಣಿ, ಪಾರ್ಥಿಬನ್, ಹೋರಾಟಕ್ಕೆ ಬಂದಿದ್ದ ಮಹಿಳೆಯರು, ಸಾರ್ವಜನಿಕರು ಇಂಜಿನಿಯರ್ ಬರುವ ತನಕ ಕದಲುವುದಿಲ್ಲ ಎಂದು ಪಟ್ಟು ಹಿಡಿದರು. ನಂತರ ಇಂಜಿನಿಯರನ್ನು ಕರೆಸಿ, ಆ ಇಂಜಿನಿಯರ್ ಬಂದು ಆಶ್ವಾಸನೆ ಕೊಟ್ಟ ನಂತರವೇ ಹೋರಾಟವನ್ನು ಕೊನೆಗೊಳಿಸಲಾಯಿತು. ನೀರು ಬರದೆ ಹೋದರೆ ಲಕ್ಷ್ಮೀನಾರಾಯಣ ಪುರದ ಬಂದ್ ಮಾಡುತ್ತೇವೆ ಎಂಬ ತೀರ್ಮಾನ ಮಾಡಿ ಹೋರಾಟ ನಿರತ ಜನ ಹಿಂದಿರುಗಿದರು.

.ಕೆ.ಎಸ್.ಶಾರದಾ

ಛಲ ಬಿಡದ ಹೋರಾಟ ಫಲ ಪಡೆದ ಪಂಚಾಯತ್ ನೌಕರರು


ಪಂಚಾಯತ್ ನೌಕರರು ಸಾವಿರಗಟ್ಟಲೆ ಬೆಂಗಳೂರಿಗೆ, ಸಂಕಟಗಳ ಪರಿಹಾರಕ್ಕೆ ಆಗ್ರಹಿಸಿದರು ಮತ್ತು ಪರಿಹಾರ ಪಡೆದರು.



ಅಧಿಕಾರ ವಿಕೇಂದ್ರೀಕರಣ ವಾಗಬೇಕೆನ್ನುವ ಕನಸು ಹೊಸದೇನಲ್ಲ ಆದರೆ ಕನಸು ಇಲ್ಲಿಯುವರೆಗೂ ಸರಿಯಾಗಿ ಜಾರಿಯಾಗಿಲ್ಲವೆನ್ನುವುದಕ್ಕೆ ಜೀವಂತ ಸಾಕ್ಷಿ ರಾಜ್ಯದಲ್ಲಿರುವ ಗ್ರಾಮ ಪಂಚಾಯ್ತಿಗಳಲ್ಲಿ ಕೆಲಸ ಮಾಡುವ ನೌಕರರು. ಡಿಸೆಂಬರ್ 18 ರಂದು ಬೆಂಗಳೂರಿನ ವಾತಾವರಣ ಸ್ವಲ್ಪ ತಂಪಾಗಿತ್ತು. ಆದರೆ ರಾಜ್ಯದ ಮೂಲೆ ಮೂಲೆಗಳಿಂದ ತಮ್ಮ ಸಮಸ್ಯೆಗಳ ಗಂಟನ್ನು ಹೊತ್ತು ತಂದಿದ್ದವರ ಆಕ್ರೋಶಕ್ಕೆ ಬೆಂಗಳೂರಿನಲ್ಲಿ ಬಿಸಿ ಏರತೊಡಗಿತು. ರಾಜ್ಯದ 5652 ಗ್ರಾಮ ಪಂಚಾಯತ್‌ಗಳಲ್ಲಿ ಕೆಲಸ ಮಾಡುವ ಬಿಲ್ ಕಲೆಕ್ಟರ್, ನೀರಗಂಟಿಗಳು, ಜಾಡಮಾಲಿಗಳು, ಬಾಲವಾಡಿ ಶಿಕ್ಷಕರು ಇತರರು ಸೇರಿ ಸುಮಾರು 40 ಸಾವಿರಕ್ಕೂ ಹೆಚ್ಚು ಜನ ಅಧಿಕಾರದ ವಿಕೇಂದ್ರೀಕರಣ ಮತ್ತು ಗ್ರಾಮ ರಾಜ್ಯದ ಕನಸನ್ನು ನನಸು ಮಾಡಲು ಬೆವರು ಸುರಿಸಿ ದುಡಿಯುತ್ತಿದ್ದಾರೆ. ಇವರೆಲ್ಲರೂ ತಮ್ಮ ಗ್ರಾಮ ಪಂಚಾಯ್ತಿಗಳಲ್ಲಿ ಕೆಲಸಗಳಿಗೆ ಗುಡ್ ಬೈ ಹೇಳಿ ರಾಜಧಾನಿ ಕಡೆಗೆ ಪಯಣ ಬೆಳೆಸಿದರು. ಅಂದು ಬೆಳಿಗ್ಗೆ ರೈಲ್ವೆ ನಿಲ್ದಾಣದಲ್ಲಿ ಇವರುಗಳನ್ನು ನೋಡಿದಾಗ ಕವಿ ಸಿದ್ದಲಿಂಗಯ್ಯನ ಕವನ ನೆನಪಿಗೆ ಬಂತು 'ನೆನ್ನದಿನಾ ನನ್ನ ಜನಾ ಬೆಟ್ಟದಂತೆ ಬಂದರು' ಈಗ ರೈಲ್ವೆ ನಿಲ್ದಾಣದಿಂದ ಕೆಂಬಾವುಟವನ್ನಿಡಿದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ(ಸಿಐಟಿಯು) ನೇತೃತ್ವದಲ್ಲಿ ಹೊರಟ ಸಾವಿರಾರು ಜನರು ಧಿಕ್ಕಾರ ಕೂಗುವಾಗ ಅವರ ತೋಳುಗಳಲ್ಲಿ ಆಕ್ರೋಶವಿತ್ತು. ಸಮಸ್ಯೆಗಳ ಸರಮಾಲೆಯನ್ನೇ ಹುದುಗಿಸಿಕೊಂಡಿದ್ದರು.

ಇವರು ಬೆಂಗಳೂರಿಗೆ ಬಂದದ್ದು ವಿಧಾನಸೌಧ ನೋಡಲಿಕ್ಕಲ್ಲ

ಬೆವರು ಸುರಿಸಿ ದುಡಿದರೂ ಕಳೆದ ಹಲವಾರು ತಿಂಗಳಿಂದ ವೇತನವಿಲ್ಲ ಬದುಕಬೇಕು ಹೇಗೆ? ನಮ್ಮ ವೇತನದಿಂದಲೇ ನಮ್ಮ ಕಟುಂಬ ಬದುಕುವುದು ಸಂಬಳ ಕೊಡಿ ಎಂದರೆ ಅನುದಾನ ಬಿಡುಗಡೆಯಾಗಿಲ್ಲ ಹಾಗಾಗಿ ಸಂಬಳವಿಲ್ಲ ಎನ್ನುತ್ತಾರೆ. ಗ್ರಾಮ ಪಂಚಾಯ್ತಿಗಳಿಗೆ ಬಿಡುಗಡೆಯಾಗುತ್ತಿರುವ ಅನುದಾನವನ್ನೆಲ್ಲ ವಿದ್ಯುತ್ ಬಿಲ್ ಬಾಕಿಯನ್ನು ಪಾವತಿಸಲು ಬಳಸಲಾಗುತ್ತಿದೆ. ಇಷ್ಟು ವರ್ಷಗಳ ಕಾಲ ದುಡಿಯುತ್ತಿದ್ದರೂ ಪಂಚಾಯ್ತಿ ನೌಕರರಿಗೆ ಪ್ರತ್ಯೇಕ ಸೇವಾ ನಿಯಮಾವಳಿಗಳಿಲ್ಲ. ನೌಕರರ ಭವಿಷ್ಯ ನಿಧಿ ಜಾರಿಯಾಗಿಲ್ಲ. ಇದಷ್ಟೇ ಅಲ್ಲ ಪಂಚಾಯ್ತಿ ನೌಕರರಿಗೆ ಜನಶ್ರೀ ವಿಮಾ ಯೋಜನೆ ಜಾರಿಯಾಗಿದೆ. ಈ ಯೋಜನೆಯ ಫಲಾನುಭವಿಗಳಿಗೆ ಪರಿಹಾರ ವಿತರಿಸಲು ಇದುವರೆಗೂ ನೋಡಲ್ ಅಧಿಕಾರಿಗಳನ್ನೇ ನೇಮಕಮಾಡಿಲ್ಲ. ಇಂತಹ ದುಃಸ್ಥಿತಿಯಲ್ಲಿ ರಾಜ್ಯದ ಪಂಚಾಯ್ತಿ ನೌಕರರು ಕೆಲಸ ಮಾಡುತ್ತಿದ್ದಾರೆ. ಸಮಯವಿಲ್ಲದೇ ದುಡಿಯುವ ಇವರುಗಳಿಗೆ ಕೊಡುವ ಸಂಬಳ ಎಷ್ಟು ಗೊತ್ತೆ? ಬಿಲ್ ಕಲೆಕ್ಟರ್‌ಗಳು, ಬಾಲವಾಡಿ ಶಿಕ್ಷಕರುಗಳಿಗೆ 2040 ರೂಪಾಯಿ, ವಾಟರ್‌ಮನ್, ಜಾಡಮಾಲಿ, ಕಸಗುಡಿಸು ವವರಿಗೆ 1890 ರೂಪಾಯಿಗಳು ಮಾತ್ರ. ಹಲವು ಕಡೆ ಇನ್ನೂ ಕಮ್ಮಿ. ಯೋಚಿಸಿ ಬೆಲೆ ಏರಿಕೆಯ ಇಂತಹ ಸಂದರ್ಭದಲ್ಲಿ ಇವರುಗಳು ಬದುಕುವುದಾದರೂ ಹೇಗೆ. ಬಾಳಬಂಡಿ ಮುಂದೆ ಸಾಗೀತೆ.



ಬಹಿರಂಗಸಭೆಯನ್ನುದ್ದೇಶಿಸಿ ವಿಜೆಕೆ ನಾಯರ್ ಮಾತನಾಡುತ್ತಿರುವುದು



ಛಲ ಬಿಡದ ನೌಕರರು

ತಮ್ಮ ಸಮಸ್ಯೆಗಳಿಗೆ ಪರಿಹಾರ ಕಾಣದೆ ಬೆಂಗಳೂರಿನಿಂದ ತೆರಳುವ ಮಾತೇ ಇಲ್ಲವೆಂದು ನಿರ್ಧರಿಸಿದ ನೌಕರರು ತಮ್ಮ ಹೋರಾಟವನ್ನು ಅನಿರ್ದಿಷ್ಟಾವಧಿಯವರೆಗೆ ಮುಂದುವರೆಸಿದರು. ರಾತ್ರಿ ಇಡೀ ಕೊರೆವ ಚಳಿಯಲ್ಲಿ ಬನ್ನಪ್ಪಪಾರ್ಕ್ ಮೈದಾನದಲ್ಲಿ ತುಂಡು ಪತ್ರಿಕೆಯನ್ನು ಹಾಸಿ ಮಲಗಿದರು. 2ನೇ ದಿನಕ್ಕೆ ಪ್ರತಿಭಟನೆ ಕಾಲವಂತೂ ಅಹವಾಲು ಸ್ವೀಕರಿಸಬೇಕಾದ ಗ್ರಾಮೀಣಾಭಿವೃದ್ಧಿ ಮತ್ತು ಗ್ರಾಮ ಪಂಚಾಯತ್‌ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಜಯರಾಜ್ ಮತ್ತು ಕಾರ್ಯದರ್ಶಿ ಕೊಂಗವಾಡ ದೆಹಲಿಗೆ ದೌಡಾಯಿಸಿದ್ದರು. ಸುರಿವ ಮಳೆಯನ್ನು ಲೆಕ್ಕಿಸದೆ ಧರಣಿಯನ್ನು ಅನಿರ್ದಿಷ್ಟಾವಧಿಯವರೆಗೆ ಮುಂದುವರೆಸಲು ನಿರ್ಧರಿಸಿದರು ನೌಕರರು. ನಂತರ ರಾಜ್ಯಪಾಲರ ಮಧ್ಯಸ್ಥಿಕೆಯಿಂದ ಬೆಂಗಳೂರಿಗೆ ಆಗಮಿಸಿದ ಅಧಿಕಾರಿಗಳು ಹೋರಾಟ ನಿರತರೊಂದಿಗೆ ಮಾತುಕತೆ ನಡೆಸಿದರು.

ಗೆಲುವು ದಕ್ಕಿತು


ಇದುವರೆಗೂ ಗ್ರಾಮ ಪಂಚಾಯ್ತಿ ನೌಕರರು ಸಾಕಷ್ಟು ಹೋರಾಟಗಳನ್ನು ನಡೆಸಿದ್ದಾರೆ. ಯಾವ ಹೋರಾಟದ ಸಂದರ್ಭದಲ್ಲಿ ಅವರು ಬರಿಗೈಯಲ್ಲಿ

ಪುಟ 14ಕ್ಕೆ

ಪಂಚಾಯ್ತಿಗಳಿಗೆ ಹೆಚ್ಚಿನ ಸಂಪನ್ಮೂಲ, ಅಧಿಕಾರ - ಆಗ್ರಹ

'ನಮ್ಮ ಪಂಚಾಯ್ತಿನಾಗ ರೊಕ್ಕಿಲ್ರಿ, ಪಗಾರ ಎಂಟನೂರ್ ಕೊಡ್ತಾರ್ ರ‍್ರೀ. ನಾನ್ ಕೆಲ್ಸ ಮಾಡ್ಲಾಕ್ ಹತ್ತಿ 20 ವರ್ಷ ಆಯ್ತ್ರೀ... ನಮಗ ಹೊಲ ನೆಲಿ ಏನ್ ಇಲ್ರಿ" ಅನ್ನುವ ನಾಗಮ್ಮ ದೂರದ ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ ತಾಲ್ಲೂಕು ಕಣ್ಣೂರು ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡುವ ಗ್ರಾಮ ಪಂಚಾಯ್ತಿ ನೌಕರಸ್ಥೆ. ಈಕೆ ತನ್ನ 800 ರೂ.ಗಳ ಮಾಸಿಕ ವೇತನ ಹೆಚ್ಚಬಹುದು. ತನ್ನ ನೌಕರಿ ಕಾಯಂ ಆಗಬಹುದೇನೋ ಅಂತ ಹಲವು ನಿರೀಕ್ಷೆಗಳನ್ನು ಹೊತ್ತುಕೊಂಡು ಕೆಂಪು ಬಾವುಟ ಹಿಡಿದುಕೊಂಡು ಬೆಂಗಳೂರಿಗೆ ಬಂದೇ ಬಿಟ್ಟಿದ್ದಾಳೆ. ಊರಿನ ಕಸ ಗುಡಿಸುವುದು ಈಕೆಯ ಕೆಲಸ, ಇದೇ ಕೆಲಸ ಮಾಡುವ ಎಲ್ಲಮ್ಮ, ಊರಿಗೆ ನೀರು ಬಿಡುವ ದ್ಯಾಮಪ್ಪ, ಇವರ ಕತೆಯಾದರೂ ಅಷ್ಟೇ. ಈ ಕಾಲದಲ್ಲಿ ಈ ಸಂಬಳ ತೆಗೆದುಕೊಂಡು ಜೀವನ ಮಾಡುವುದು ಹೇಗೆ. 800 ರೂಪಾಯಿಯಾದರೂ ಎಲ್ಲಿತ್ತು ಸಂಬಳ. ಬಾರಿ ಹೋರಾಟಗಳೇ ನಡೆದು 800 ಆಗಿದೆ. ಗೋಕಾಕ್ ತಾಲ್ಲೂಕಿನ ಸುಣಧೋಳಿ ಪಂಚಾಯ್ತಿಯ ಸಾಬಣ್ಣ ಶಿಬಸು ತಳವಾರ, ಗುಡುಸಾಬ್ ದಿನಕ್ಕೆ 9 ಗಂಟೆ ಕೆಲಸ ಮಾಡಿದರೂ ಸಂಬಳ 2000 ದಾಟುವುದಿಲ್ಲ. ಅದು 1891 ರೂ. ರವರೆಗೆ ಮಾತ್ರ ಬಂದಿದೆ. ಅದೂ ದೊಡ್ಡ ಹೋರಾಟದಿಂದ.

ಇಂತಹ ಕಾಯಕ ಜೀವಿಗಳ ದುಡಿಮೆ ಏಕೆ ಬೆಲೆ ಇಲ್ಲ. ಅವರನ್ನೇಕೆ ನೌಕರರಂತೆ ಮನುಷ್ಯರಂತೆ ಪರಿಗಣಿಸುವುದಿಲ್ಲ. ಇವರ ಸಮಸ್ಯೆಯ ಮೂಲವೇನು ಇದಕ್ಕೆ ಪರಿಹಾರವೇನು? ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಸಮಾವೇಶವೊಂದು ನಡೆಯಿತು. ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ನಡೆದ ಈ ಕಾರ್ಯಕ್ರಮವನ್ನು ಲೋಕಸಭೆಯಲ್ಲಿನ ಸಿಪಿಐ(ಎಂ) ಪಕ್ಷದ ನಾಯಕ ಬಸುದೇವ ಆಚಾರ್ಯ ಅವರು ಉದ್ಘಾಟಿಸಿದರು.



ಪಂಚಾಯ್ತಿ ವ್ಯವಸ್ಥೆಯನ್ನು ಬಲಗೊಳಿಸುವುದು ಅಧಿಕಾರವನ್ನು ಸಾಧಿಸುವುದು ತುಂಬಾ ತುರ್ತಿನ ಅಗತ್ಯ ಎಂದು ಅಭಿಪ್ರಾಯ ಪಟ್ಟ ಅವರು, ಕೇವಲ ಪಂಚಾಯ್ತಿ ನೌಕರರ ಹಿತದೃಷ್ಟಿಯಿಂದ ಮಾತ್ರವಲ್ಲ ಒಟ್ಟಾರೆ ಪ್ರಜಾಪ್ರಭುತ್ವದ ಬೆಳವಣಿಗೆಯ ದೃಷ್ಟಿಯಿಂದ ಪಂಚಾಯ್ತಿಗಳಿಗೆ ಹೆಚ್ಚಿನ ಅಧಿಕಾರ ಸಂಪನ್ಮೂಲ ಒದಗಿಸಬೇಕು ಎಂದರು.

ಪಶ್ಚಿಮ ಬಂಗಾಳದಲ್ಲಿ ರಾಜ್ಯ ಬಜೆಟ್‌ನ ಶೇ.50 ರಷ್ಟು ಹಣವನ್ನು ಮೂರು ಹಂತಗಳ ಪಂಚಾಯ್ತಿ ಸಂಸ್ಥೆಗಳ ಮೂಲಕವೇ ಖರ್ಚು ಮಾಡುವುದಾಗಿ ಅವರು ತಿಳಿಸಿದರು ಮತ್ತು ಪಂಚಾಯ್ತಿಗಳ ಖರ್ಚು ವೆಚ್ಚಗಳ ಕುರಿತು ಸಾರ್ವಜನಿಕರಿಗೆ ಪೂರ್ಣ ಮಾಹಿತಿ ನೀಡುವ ಕ್ರಮವನ್ನು ಅನುಸರಿಸಲಾಗುತ್ತಿದೆ. ಇದು ಸರ್ಕಾರದ ಆಡಿಟಿಂಗ್ ಇಲಾಖೆಯ ಪರಿಶೀಲನೆ ಮಾತ್ರವಲ್ಲ ಸಾಮಾಜಿಕ ಪರಿಶೀಲನೆ (ಸೋಷಿಯಲ್ ಆಡಿಟಿಂಗ್) ಕೂಡ ಆಗಿದೆ ಎಂದರು.

ಇಂತಹ ಅರ್ಥಪೂರ್ಣವಾದ ಅಧಿಕಾರ ವಿಕೇಂದ್ರೀಕರಣದಿಂದಾಗಿ ಪಶ್ಚಿಮಬಂಗಾಳದ ಪಂಚಾಯ್ತಿಗಳು ಬಲಿಷ್ಠವಾಗಿದ್ದು ಜನಪರ ಕೆಲಸಗಳನ್ನು ಮಾಡುತ್ತಿವೆ ಮಾತ್ರವಲ್ಲ, ಪಂಚಾಯ್ತಿ ನೌಕರರಿಗೂ ನ್ಯಾಯಬದ್ಧ ಪ್ರತಿಫಲ ನೀಡುತ್ತಿವೆ. ಇಡೀ ಪಶ್ಚಿಮ ಬಂಗಾಳದಲ್ಲಿ ಒಬ್ಬೇ ಒಬ್ಬ ಪಂಚಾಯತ್ ನೌಕರರೂ ಸಹ ತಾತ್ಕಾಲಿಕ, ಗುತ್ತಿಗೆ ಆಧಾರದಲ್ಲಿರುವವರಿಲ್ಲ. ಎಲ್ಲರೂ ಖಾಯಂ ನೌಕರರೂ ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ (ಸಿಐಟಿಯು) ಕರ್ನಾಟಕ ರಾಜ್ಯ ಸಮಿತಿಯವ ಸಂಘಟಿಸಿದ್ದ ಈ ಸಮಾವೇಶದಲ್ಲಿ ಗ್ರಾಮ ಪಂಚಾಯತ್ ನೌಕರರೂ ಮತ್ತು ಚುನಾಯಿತ ಪಂಚಾಯತ್ ಸದಸ್ಯರೂ ಪಾಲ್ಗೊಂಡಿದ್ದರು.

ಗ್ರಾಮ ಪಂಚಾಯತ್‌ಗಳಿಗೆ ನೀಡುವ ಅನುದಾನವನ್ನು ಕನಿಷ್ಠ 25 ಲಕ್ಷ ರೂ.ಗಳಿಗೆ ಏರಿಸಬೇಕೆಂದು ಆಗ್ರಹಿಸಿದ ಮಾರುತಿ ಮಾನ್ಪಡೆಯವರು ಈ ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ-ಜೆಡಿ(ಎಸ್) ರಾಜ್ಯ ಸರ್ಕಾರ ಅಧಿಕಾರ ವಿಕೇಂದ್ರೀಕರಣ ವಿರೋಧಿ ನೀತಿ ಅನುಸರಿಸಿತು. ಗ್ರಾಮ ಪಂಚಾಯತ್‌ಗಳಿಗೆ ನೀಡುತ್ತಿದ್ದ ಅನುದಾನವನ್ನು ಸರ್ಕಾರ ತನ್ನ ಹಿಡಿತಕ್ಕೆ ತೆಗೆದುಕೊಂಡಿದ್ದು ಒಂದು ಜನ ವಿರೋಧಿ ಕ್ರಮ ಎಂದು ಖಂಡಿಸಿದರು.

ವೇದಿಕೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಬಿ.ನಾಡಗೌಡ, ಮುಖಂಡರಾದ ವಿ.ಪಿ.ಕುಲಕರ್ಣಿ, ಶಬ್ಬೀರ್ ಅಹ್ಮದ್, ಯಲಹಂಕ ಗ್ರಾ.ಪಂ. ಉಪಾಧ್ಯಕ್ಷ ಆಂಜನಪ್ಪ, ಮೆಟ್ಟಿಮಲ್ಲಪುರ ಗ್ರಾ.ಪಂ. ಸದಸ್ಯೆ ತಾಯಮ್ಮ, ಎಸ್.ಕೆ. ಮಠಪತಿ, ಕಲ್ಲನಗೌಡರ್, ರಾಮೇಗೌಡ ಮತ್ತಿತರರು ಉಪಸ್ಥಿತರಿದ್ದರು. ಕಮಲಾಪುರ ಗ್ರಾ.ಪಂ.ಅಧ್ಯಕ್ಷ ಮಲ್ಲಪ್ಪ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ನೌಕರರಿಗೆ ವೇತನ ಬಾಕಿ ಪಾವತಿ, ಭವಿಷ್ಯ ನಿಧಿ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಜಗದಗಲ


ಶರತ್‌ಚಂದ್ರ

ಯುರೋಪು ಪಾರಂಪರಿಕ ಶಸ್ತ್ರಾಸ್ತ್ರ ಒಪ್ಪಂದ ಮನ್ನಿಸದ ರಶ್ಯಾ

ರಶ್ಯಾ ಮಹತ್ವದ ನಿರ್ಣಯವೊಂದರಲ್ಲಿ 1990 ರಲ್ಲಿ ಸಹಿ ಹಾಕಲಾದ ಯುರೋಪಿನಲ್ಲಿ ಪಾರಂಪಾರಿಕ (ಅಂದರೆ ಅಣ್ವಸ್ತ್ರ-ರಹಿತ) ಶಸ್ತ್ರಾಸ್ತ್ರ ಮತ್ತು ಪಡೆಗಳ ಸಂಖ್ಯೆ ಮೇಲೆ ಮಿತಿ ಹಾಕುವ ಒಪ್ಪಂದದ ಜಾರಿಯನ್ನು ನಿಲ್ಲಿಸುವುದಾಗಿ ಹೇಳಿದೆ. ಅಧ್ಯಕ್ಷ ಪುಟಿನ್ ಅವರ ಈ ಪ್ರಸ್ತಾವವನ್ನು ರಶ್ಯನ್ ಪಾರ್ಲಿಮೆಂಟು ಮಂಜೂರು ಮಾಡಿದ್ದು ಡಿಸೆಂಬರ್ 13 ರಿಂದ ಅದು ಜಾರಿಗೆ ಬರಲಿದೆ. ಈ ಒಪ್ಪಂದದ ಮೊದಲು ಯುರೋಪಿನಲ್ಲಿ ವಾರ್ಸಾ ಒಪ್ಪಂದದ (ಆಗಿನ ಸೋವಿಯೆಟ್ ನಾಯಕತ್ವದ ಸಮಾಜವಾದಿ ಕೂಟ) ಪಾರಂಪಾರಿಕ ಶಸ್ತ್ರಾಸ್ತ್ರ ಮತ್ತು ಪಡೆಗಳಸಂಖ್ಯೆ ನಾಟೋ (ಅಮೆರಿಕನ್ ನಾಯಕತ್ವದ ಪಶ್ಚಿಮ ಯುರೋಪಿನ ಸಾಮ್ರಾಜ್ಯಶಾಹಿ ದೇಶಗಳ) ಕೂಟದ ಇಮ್ಮಡಿಯಾಗಿತ್ತು. ಇದು ಒಟ್ಟಾರೆ ಶಸ್ತ್ರಾಸ್ತ್ರ ಮತ್ತು ಪಡೆಗಳ ಸಂಖ್ಯೆ ಜಗತ್ತಿನಾದ್ಯಂತ ಗಮನಾರ್ಹವಾಗಿ ಕಡಿತಗೊಳಿಸುವ ಪ್ರಯತ್ನದ ಭಾಗವಾಗಿತ್ತು. ಮಾತ್ರವಲ್ಲ ಆಖೈರಾಗಿ ಈ ಎರಡೂ ಜಗತ್ತಿನ ಅತೀ ದೊಡ್ಡ ಮಿಲಿಟರಿ ಕೂಟಗಳನ್ನು ವಿಸರ್ಜಿಸುವ, ವಿಶ್ವ ಶಾಂತಿಗೆ ಅಗತ್ಯ ಸನ್ನಿವೇಶ ನಿರ್ಮಿಸುವ ಪ್ರಯತ್ನದ ಮೊದಲ ಹೆಜ್ಜೆಗಳಲ್ಲಿ ಒಂದಾಗಿತ್ತು.

ಆದರೆ ಆ ಮೇಲಿನ ಬೆಳವಣಿಗೆಗಳು ಈ ಒಪ್ಪಂದದ ಮೂಲ ತಿರುಳನ್ನು ತಲೆ ಕೆಳಗು ಮಾಡಿವೆ. ವಾರ್ಸಾ ಒಪ್ಪಂದವನ್ನು ವಿಸರ್ಜಿಸಲಾಯಿತು ಮತ್ತು ಅದು ತನ್ನ ಎಲ್ಲಾ ಬಾಧ್ಯತೆಗಳನ್ನು ಜಾರಿಗೊಳಿಸಿತು. ಆದರೆ ಅಮೆರಿಕ ಮತ್ತು ನಾಟೋ ಕೂಟ ಈ ಒಪ್ಪಂದದ ತಮ್ಮ ಹೆಚ್ಚಿನ ಬಾಧ್ಯತೆಗಳನ್ನು ಮನ್ನಿಸಿಲ್ಲ. ಶಸ್ತ್ರಾಸ್ತ್ರ ಮತ್ತು ಪಡೆಗಳಸಂಖ್ಯೆ ಕಡಿತದ ಹಲವು ಇತರ ಒಪ್ಪಂದಗಳನ್ನು ಜಾರಿ ಮಾಡಿಲ್ಲ. ಅಮೆರಿಕ ಮತ್ತು ನಾಟೋ ಯುರೋಪಿನಲ್ಲಿ ತೆಗೆದುಕೊಂಡಿರುವ ಆಕ್ರಾಮಕ ಮಿಲಿಟರಿ ನೀತಿಗಳು (ಉದಾ: ಯುಗೋಸ್ಲಾವಿಯಾದ ಮೇಲೆ ಬರ್ಬರ ಯುದ್ಧ, ಪೋಲೆಂಡ್-ಚೆಕ್ ಗಳಲ್ಲಿ ರಶ್ಯಾದ ಗಡಿಯ ಹತ್ತಿರ ಕ್ಷಿಪಣಿ-ವಿರೋಧಿ ಘಟಕದ ಸ್ಥಾಪನೆ) ಈ ಒಪ್ಪಂದದ ಮೂಲ ತಿರುಳನ್ನು ಆಗಲೇ ತೀವ್ರವಾಗಿ ಉಲ್ಲಂಘಿಸಿವೆ. ಮಾತ್ರವಲ್ಲ ಸೋವಿಯೆತ್ (ಆ ಮೇಲೆ ರಶ್ಯಾ) ನಾಯಕತ್ವದ ಕೂಟದ ಏಕ ಪಕ್ಷೀಯ ನಿಶ್ಶಸ್ತ್ರೀಕರಣವನ್ನು ದುರ್ಬಳಕೆ ಮಾಡಿ ಜಗತ್ತಿನ ಏಕಮಾತ್ರ ಸೂಪರ್ ಪವರ್ ಆಗುವ ತನ್ನ ಅಪಾಯಕಾರಿ ಅಜೆಂಡಾವನ್ನು ಜಾರಿ ಮಾಡುತ್ತಿದೆ. ಪೂರ್ವ ಯುರೋಪಿನಲ್ಲಿ ನಾಟೋ ಮಿಲಿಟರಿ ಕೂಟವನ್ನು ರಶ್ಯಾದ ಗಡಿವರೆಗೆ ವಿಸ್ತರಿಸಿ ಅದನ್ನು ಬೆದರಿಸಲು ಪ್ರಯತ್ನಿಸುತ್ತಿದೆ. ಯುರೋಪಿನಲ್ಲಿ ಶಾಶ್ವತ ಶಾಂತಿ ಮತ್ತು ಎಲ್ಲಾ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸುವುದು ಈ ಒಪ್ಪಂದದ ಮೂಲ ಆಶಯವಾಗಿದ್ದು, ಅದರ ತೀವ್ರ ಉಲ್ಲಂಘನೆಯಾಗಿದೆ. ಈ ಹಿನ್ನೆಲೆಯಲ್ಲಿ ಈ ಒಪ್ಪಂದ ಮನ್ನಿಸುವುದು ರಶ್ಯಾದ ರಕ್ಷಣೆ ಮತ್ತು ಯುರೋಪು-ವಿಶ್ವ ಶಾಂತಿಗೆ ಪೂರಕವಾಗಿಲ್ಲ. ಆದ್ದರಿಂದ ಈ ನಿರ್ಧಾರ ಎನ್ನುತ್ತದೆ ರಶ್ಯಾದ ಸರ್ಕಾರ.

ಈ ನಿರ್ಣಯಕ್ಕೆ ರಶ್ಯಾದ ಜನತೆಯ ವ್ಯಾಪಕ ಬೆಂಬಲ ಇದೆ. ರಶ್ಯಾದಲ್ಲಿ ಇತ್ತೀಚೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಯ ಸಂದರ್ಭ ಸಹ ಈ


ರಶ್ಯಾ ಪ್ರಧಾನಿ ಪುಟಿನ್

ನಿರ್ಣಯದಲ್ಲಿ ಮಹತ್ವದ ಪಾತ್ರ ವಹಿಸಿದೆ. ರಶ್ಯಾದ ಸರ್ಕಾರ - ದೇಶದ ಸ್ವಾತಂತ್ರ್ಯ-ಸಾರ್ವಭೌಮತೆ ಕಾಪಾಡುವ, ಅಮೆರಿಕದ ಸಾಮ್ರಾಜ್ಯಶಾಹಿ ಮತ್ತು ಸೂಪರ ಪವರ್ ಧೋರಣೆಗೆ ಸವಾಲು ಹಾಕುವ, ಮಹತ್ವದ ಅಂತರ್‍ರಾಷ್ಟ್ರೀಯ ವಿಷಯಗಳಲ್ಲಿ ಅಮೆರಿಕದ ಬಾಲಂಗೋಚಿಯಾಗದೆ ಸ್ವತಂತ್ರ ಪಾತ್ರ ವಹಿಸುವ - ವಿದೇಶ ನೀತಿ ಅನುಸರಿಸಬೇಕು ಎಂಬ ರಶ್ಯನ್ನರ ಆಶಯ ಸಹ ಇದರಲ್ಲಿ ಪಾತ್ರ ವಹಿಸಿದೆ ಎನ್ನಲಾಗಿದೆ.


ಸೋವಿಯೆತ್ ವಿಘಟನೆಯ ನಂತರ ಅಮೆರಿಕ ರಶ್ಯಾವನ್ನು ಅಂತರ್‍ರಾಷ್ಟ್ರೀಯವಾಗಿ ಹಿಮ್ಮೆಟ್ಟಿಸುತ್ತಿದ್ದು, ಮೊದಲ ಬಾರಿಗೆ ಈ ವರ್ಷ ಹಿನ್ನಡೆ ನಿಲ್ಲಿಸಿ ಅಮೆರಿಕಕ್ಕೆ ಸವಾಲು ಹಾಕಲು ರಶ್ಯಾ ನಿರ್ಧರಿಸಿದೆ. ಫೆಬ್ರುವರಿಯಲ್ಲಿ ಜರ್ಮನಿಯ ಮ್ಯೂನಿಕ್ ನಲ್ಲಿ ನಡೆದ ಯುರೋಪು ಭದ್ರತೆ ಸಮಾವೇಶದಲ್ಲಿ ಪುಟಿನ್ ಅಮೆರಿಕ ಮತ್ತು ನಾಟೋ ಗೆ ನೀಡಿದ ಎಚ್ಚರಿಕೆಯಿಂದ ಇದು ಆರಂಭವಾಗಿತ್ತು. ಆ ದಿಕ್ಕಿನಲ್ಲಿ ಇದು ಮಹತ್ವದ ಹೆಜ್ಜೆ. ರಶ್ಯಾದ ಗಡಿಯಲ್ಲಿ ಕ್ಷಿಪಣಿ-ವಿರೋಧಿ ಸಮುಚ್ಚಯ ಸ್ಥಾಪಿಸಿದರೆ, 1987 ರ ಮಧ್ಯಮ-ಗುರಿಯ ಅಣ್ವಸ್ತ್ರ ಪಡೆಗಳ ಒಪ್ಪಂದದಿಂದಲೂ ಹೊರ ಬರುವುದಾಗಿ ರಶ್ಯಾ ಬೆದರಿಸಿದೆ. 1972 ರ ದೂರಗಾಮಿ ಕ್ಷಿಪಣಿ ಮಿತಿಗೊಳಿಸುವ ಒಪ್ಪಂದ ಮನ್ನಿಸುವುದಿಲ್ಲ ಎಂದು ಅಮೆರಿಕ 2002 ರಲ್ಲೇ ಪ್ರಕಟಿಸಿತು. ಆಗ ರಶ್ಯಾ ಈ ಏಕಪಕ್ಷೀಯ ನಿರ್ಧಾರ ಎಲ್ಲಾ ಶಸ್ತ್ರಾಸ್ತ್ರ ಒಪ್ಪಂದಗಳಿಗೆ ಮಾರಕವಾದೀತು ಎಂದು ಪ್ರತಿಭಟಿಸಿದಾಗ, ಅಮೆರಿಕ ಅದನ್ನು ತಿರಸ್ಕಾರದಿಂದ ಕಂಡಿತ್ತು. ಆದರೆ ಈಗಿನ ಬದಲಾದ ಸಂದರ್ಭದಲ್ಲಿ ರಶ್ಯಾದ ನಿರ್ಧಾರ ಮತ್ತು ಬೆದರಿಕೆಗಳನ್ನು ಅಮೆರಿಕನ್ ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ರೈಸ್ ಎಲ್ಲಾ ಶಸ್ತ್ರಾಸ್ತ್ರ ಕಡಿತದ ಬಗ್ಗೆ ರಶ್ಯಾ-ಅಮೆರಿಕಗಳ ನಡುವೆ ಒಂದು ಹೊಸ ಚೌಕಟ್ಟು ಒಪ್ಪಂದದ ಬಗ್ಗೆ ಮಾತುಕತೆ ಆರಂಭಿಸುವುದಾಗಿ ಹೇಳಿದ್ದಾರೆ. ಇದಕ್ಕೆ ಮುಖ್ಯ ಕಾರಣ ರಶ್ಯಾ ಒಟ್ಟಾರೆಯಾಗಿ ಆರ್ಥಿಕವಾಗಿ, ಮಿಲಿಟರಿ ಕೈಗಾರಿಕಾ ಕ್ಷೇತ್ರದಲ್ಲಿ ಪ್ರಬಲವಾಗಿರುವುದು. ಮಿಲಿಟರಿ ಕೈಗಾರಿಕೆ ರಶ್ಯಾದ ಶಕ್ತಿ ಉತ್ಪಾದನಾ (ಪೆಟ್ರೋಲ್, ಗ್ಯಾಸ್) ಕೈಗಾರಿಕೆ ನಂತರ ರಶ್ಯಾದ ಆರ್ಥಿಕದ ಅತಿ ದೊಡ್ಡ ಕ್ಷೇತ್ರ.

ರಶ್ಯಾದ ಈ ನಿರ್ಧಾರ ಸಕಾರಾತ್ಮಕ, ನಕಾರಾತ್ಮಕ ಅಂಶ ಎರಡನ್ನೂ ಹೊಂದಿವೆ. ಅಮೆರಿಕದ 'ಏಕಮಾತ್ರ ಸೂಪರ್ ಪವರ್' ಗಿರಿಗೆ ತೀವ್ರ ಸವಾಲು ಉತ್ತಮ ಬೆಳವಣಿಗೆ. ಅಷ್ಟರ ಮಟ್ಟಿಗೆ ಅಮೆರಿಕದ ಮಿಲಿಟರಿ ಆಕ್ರಾಮತೆಗೆ ಕಡಿವಾಣ ಬಿದ್ದೀತು. ಆದರೆ ಶಸ್ತ್ರಾಸ್ತ್ರ ಕಡಿತ (ಅಣ್ವಸ್ತ್ರ ಮತ್ತು ಹೊಸ ತಾರಾ ಸಮರದಂತಹ ಶಸ್ತ್ರಾಸ್ತ್ರಗಳ ಬೆಳವಣಿಗೆ ಸೇರಿದಂತೆ)ದ ಒಪ್ಪಂದಗಳು ಪೂರ್ತಿಯಾಗಿ ಮೂಲೆಗುಂಪಾಗುವುದು ವಿಶ್ವ ಶಾಂತಿಗೆ ಮಾರಕವಾದೀತು. ಅಮೆರಿಕವನ್ನು ನಿಜವಾದ ಶಸ್ತ್ರಾಸ್ತ್ರ ಕಡಿತದ ಮಾತುಕತೆಗಳಲ್ಲಿ ಭಾಗವಹಿಸಲು ಒತ್ತಡ ಹೇರುವಷ್ಟಕ್ಕೆ ಈ ಬೆದರಿಕೆ ಸೀಮಿತವಾಗಿದ್ದರೆ ಒಳ್ಳೆಯದು. ಅದರ ಬದಲು ಇನ್ನೊಂದು ಶಸ್ತ್ರಾಸ್ತ್ರ ಪೈಪೋಟಿ ಆರಂಭವಾದರೆ ಅದು ವಿಶ್ವಶಾಂತಿಗೆ ಅಪಾಯಕಾರಿ.

ಜೆಕೊಬ್ ಝೂಮಾ ಎಎನ್‌ಸಿ ಅಧ್ಯಕ್ಷ

ದಕ್ಷಿಣ ಆಫ್ರಿಕಾದ ಪ್ರಮುಖ ರಾಜಕೀಯ ಶಕ್ತಿಯಾದ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ಎ.ಎನ್.ಸಿ) ನ ಅಧ್ಯಕ್ಷರಾಗಿ ಜೆಕೊಬ್ ಝೂಮಾ ಭಾರೀ ಬಹುಮತದಿಂದ ಚುನಾಯಿತರಾದರು. ದಕ್ಷಿಣ ಆಫ್ರಿಕಾದ ಬಿಳಿಯರ ವರ್ಣಭೇಧ ನೀತಿಯ ವಿರುದ್ಧ ದೀರ್ಘ, ದಿಟ್ಟ ಮತ್ತು ದುರ್ಗಮ ಹಾದಿ ತುಳಿದು ಹೋರಾಟ ನಡೆಸಿದ 96 ವರ್ಷಗಳ ಇತಿಹಾಸ ಎ.ಎನ್.ಸಿ. ಗೆ ಇದೆ. ಇತ್ತೀಚೆಗೆ ನಡೆದ ಎ.ಎನ್.ಸಿ.ಯ 52 ನೇ ಸಮ್ಮೇಳನದಲ್ಲಿ ಅವರು ಪ್ರಸ್ತುತ ದೇಶದ ಅಧ್ಯಕ್ಷರಾಗಿರುವ ತಾಬೋ ಮೆಬೇಕಿಯವರನ್ನು ಭಾರೀ ಬಹುಮತದಿಂದ ಸೋಲಿಸಿದರು. ಎ.ಎನ್.ಸಿ. ಅಧ್ಯಕ್ಷರು ಮುಂದೆ ದೇಶದ ಅಧ್ಯಕ್ಷರಾಗುವುದು ಸಂಪ್ರದಾಯ. ಜೆಕೋಬ್ ಝೂಮಾ 2009 ರಲ್ಲಿ ಅಧ್ಯಕ್ಷರಾಗುವುದು ಇದರಿಂದ ಹೆಚ್ಚು ಕಡಿಮೆ ಖಚಿತವಾಗಿದೆ. ಈಗ ದೇಶದ ಅಧ್ಯಕ್ಷರಾಗಿರುವ ಮೆಬೇಕಿ 2009 ರ ವರೆಗೆ ಮುಂದುವರಿಯಲಿದ್ದು, ಸಂವಿಧಾನದ ಪ್ರಕಾರ ಅವರು ಪುನಃ ಸ್ಪರ್ಧಿಸುವಂತಿಲ್ಲ. ಆದರೆ ಮುಂದಿನ ಅಧ್ಯಕ್ಷ ಅಭ್ಯರ್ಥಿ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ಕಳೆದ ಎರಡೂ ವರ್ಷಗಳಿಂದ ಎ.ಎನ್.ಸಿ.ಯೊಳಗೆ ಬಡವರ, ಕಾರ್ಮಿಕರ ಜೀವನ ಮಟ್ಟ ಎತ್ತರಿಸುವ ಬಗ್ಗೆ ಮೆಬೇಕಿ ಸರ್ಕಾರದ ನೀತಿಗಳು ಮತ್ತು ಅದರ ಜಾರಿ ಬಗ್ಗೆ ತೀವ್ರ ಅತೃಪ್ತಿ ಹರಡಿದೆ. 'ಕರಿಯ ಬಂಡವಾಳಶಾಹಿ' ಎಂದು



ಜರೆಯಲಾದ ಈಗಿನ ಸರ್ಕಾರದ ಉದಾರೀಕರಣದ ನೀತಿಗಳನ್ನು ಬೆಂಬಲಿಸುವ ಮೆಬೇಕಿ ಬೆಂಬಲಿಗ 'ಬಲಪಂಥೀಯರು' ಮತ್ತು ಅವರ ನೀತಿಗಳನ್ನು ವಿರೋಧಿಸುವ 'ಎಡ ಪಂಥೀಯರ' ನಡುವೆ ಎ.ಎನ್.ಸಿ. ಯೊಳಗೆ ತೀವ್ರ ಸೈದ್ಧಾಂತಿಕ ಮತ್ತು ಸಂಘಟನಾ ಘರ್ಷಣೆ ನಡೆದಿತ್ತು. ಅದು ಸಮ್ಮೇಳನದಲ್ಲಿ ಅಭಿವ್ಯಕ್ತಗೊಂಡು ನಾಯಕತ್ವದ ಚುನಾವಣೆ ಮೇಲೆ ಪರಿಣಾಮ ಬೀರಿತ್ತು. ಎ.ಎನ್.ಸಿ. ಯೊಳಗೆ ದೊಡ್ಡ ಶಕ್ತಿಯಾಗಿರುವ ಕೊಸಾಟು (ಟ್ರೇಡ್ ಯೂನಿಯನ್) ಮತ್ತು ಕಮ್ಯುನಿಸ್ಟ್ ಪಕ್ಷದ ಬೆಂಬಲಿಗರು ಈ ಸಂಘರ್ಷದಲ್ಲಿ ಝೂಮಾರನ್ನು ಬೆಂಬಲಿಸಿದ್ದರು.

ಝೂಮಾ ಎ.ಎನ್.ಸಿ ಯ ಹಿರಿಯ ನಾಯಕರಲ್ಲಿ ಒಬ್ಬರಾಗಿದ್ದು, 2005 ರ ವರೆಗೆ ದೇಶದ ಉಪಾಧ್ಯಕ್ಷರಾಗಿದ್ದರು. 2005 ರಲ್ಲಿ ಭ್ರಷ್ಟಾಚಾರ ಮತ್ತು ಲೈಂಗಿಕ ಅಪರಾಧದ ಆಪಾದನೆಯ ಮೇಲೆ, ಅಧ್ಯಕ್ಷ ಮೆಬೇಕಿ ಅವರನ್ನು ವಜಾ ಮಾಡಿದ್ದರು. ಸದ್ಯಕ್ಕೆ ಅವರ ಮೇಲಿನ ಈ ಎರಡೂ ಆಪಾದನೆಗಳು ಊರ್ಜಿತವಾಗಿಲ್ಲ. ಮೇಬೇಕಿ ಝೂಮಾರನ್ನು ರಾಜಕೀಯವಾಗಿ ಮುಗಿಸಲು ತಂದ ಹುಸಿ ಆಪಾದನೆಗಳು ಎಂಬುದು ಝೂಮಾ ಬೆಂಬಲಿಗರ ಆಪಾದನೆ. ರೊಬ್ಬೆನ್ ದ್ವೀಪದಲ್ಲಿ 10 ವರ್ಷ ಕಾಲ ಮಂಡೇಲಾ ಜತೆ ಸೆರೆಯಲ್ಲಿ ಇದ್ದು, ಆ ಮೇಲೆ ವಿದೇಶಕ್ಕೆ ತೆರಳಿ ಎ.ಎನ್.ಸಿ. ಯ ಭೂಗತ ಗೆರಿಲ್ಲಾ ಸೈನ್ಯದ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಎ.ಎನ್.ಸಿ ಯ ಮೇಲೆ ನಿಷೇಧ ಹೋದ ಮೇಲೆ ದೇಶಕ್ಕೆ ವಾಪಸಾದ ಮೊದಲ ನಾಯಕರಲ್ಲಿ ಒಬ್ಬರಾದ ಝೂಮಾ, ಆ ಮೇಲಿನ ಮಾತುಕತೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಪಂಚಾಯ್ತಿ ನೌಕರರಿಗೆ ಗೆಲುವು..

ಪುಟ 13 ರಿಂದ

ವಾಪಸ್ ತೆರಳಿದ ಉದಾಹರಣೆಗಳಿಲ್ಲ. ಈ ಬಾರಿಯ ಹೋರಾಟವು ಇದಕ್ಕೆ ಹೊರತಾಗಿರಲಿಲ್ಲ ತಮ್ಮ 7 ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಪ್ರತಿಯೊಂದಕ್ಕೂ ಸ್ಪಷ್ಟ ಉತ್ತರ ಪಡೆದರು.

ವೇತನ ಹೆಚ್ಚಳ

2040 ರೂ. ವೇತನ ಪಡೆಯುತ್ತಿದ್ದ ಬಿಲ್ ಕಲೆಕ್ಟರ್‌ಗಳು 2450 ರೂ. ಪಡೆಯುವಂತಾಯಿತು. 1890ರೂ. ಪಡೆಯುತ್ತಿದ್ದ ವಾಟರ್ ಮೆನ್ ಮತ್ತು ಕಸಗುಡಿಸುವವರು 2250 ರೂಪಾಯಿ ಪಡೆಯುವಂತಾಯಿತು. ಗ್ರಾಮ ಪಂಚಾಯ್ತಿಗಳಿಗೆ ಈಗಿರುವ ಶಾಸನಬದ್ಧ ಅನುದಾನವನ್ನು 5 ಲಕ್ಷದಿಂದ 10 ಲಕ್ಷಕ್ಕೆ ಹೆಚ್ಚಿಸಲು ಸಾಧ್ಯವಾಗಿದೆ. ಜನಶ್ರೀ ವಿಮಾ ಯೋಜನೆಗೆ ನೂಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಸರ್ಕಾರ ಬಿಡುಗಡೆ ಮಾಡುವ ಅನುದಾನದಲ್ಲಿ ಕಡ್ಡಾಯವಾಗಿ ಮೊದಲು ನೌಕರರಿಗೆ ವೇತನವನ್ನು ನೀಡಬೇಕೆಂದು ತೀರ್ಮಾನಿಸಲಾಗಿದೆ. ಇವುಗಳ ಜೊತೆಗೆ ಭವಿಷ್ಯನಿಧಿ ಮತ್ತು ಸೇವಾ ನಿಯಮಾವಳಿಗಳನ್ನು ಜಾರಿಗೊಳಿಸಲು ಸರ್ಕಾರ ಒಪ್ಪಿಗೆ ನೀಡಿದೆ. ಈ ತೀರ್ಮಾನಗಳು ಕೆಳಹಂತದಲ್ಲಿ ರೇಷನ್ ಜಾರಿಯಾಗದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆಯನ್ನು ರೂಪಿಸಲು ಸಂಘ ನಿರ್ಧರಿಸಿದೆ. ಪ್ರತಿಭಟನೆಯ ನೇತೃತ್ವವನ್ನು ಗ್ರಾಮ ಪಂಚಾಯ್ತಿ ನೌಕರರ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಕಾರ್ಯದರ್ಶಿಗಳಾದ ಎಂ.ಬಿ.ನಾಡ ಗೌಡ, ಖಜಾಂಚಿಗಳಾದ ವಿ.ಪಿ.ಕುಲಕರ್ಣಿ ವಹಿಸಿದ್ದರು. ಪ್ರತಿಭಟನಾ ನಿರತರನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮಾತನಾಡಿದರು.

ಕರಾವಳಿಯ ಸ್ಥಿತ್ಯಂತರಗಳು....

ಪುಟ 8 ರಿಂದ

ಹೆಚ್ಚಾಗಿರುವುದನ್ನು ಗಮನಿಸಬಹುದು. ಪತ್ರಿಕೆಗಳನ್ನು ಓದುವವರ ಸಂಖ್ಯೆ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಕರಾವಳಿಯಲ್ಲಿ ಅತ್ಯಧಿಕವೆಂದು ಹೇಳಬಹುದು. ಇಲ್ಲಿನ ತೀರಾ ಬಡ ಕುಟುಂಬಗಳ ಮನೆಗಳಲ್ಲೂ ಕನಿಷ್ಠ ಒಂದು ದಿನ ಪತ್ರಿಕೆಯನ್ನು ಸಾಮಾನ್ಯವಾಗಿ ಕಾಣಬಹುದು. ಕರ್ನಾಟಕದ ಅನೇಕ ಪ್ರಮುಖ ಪತ್ರಿಕೆಗಳ ಮಂಗಳೂರು ಆವೃತ್ತಿ ಪ್ರಕಟವಾಗುವುದು, ಸಂಜೆ ಪತ್ರಿಕೆಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿರುವುದು ಮಾತ್ರವಲ್ಲದೆ ಅವುಗಳನ್ನೇ ಓದುವ ಒಂದು ದೊಡ್ಡ ಜನ ವಿಭಾಗವೇ ಇರುವುದನ್ನು ಗಮನಿಸಬಹುದು. ಬೆಳಿಗ್ಗೆ ಬೇಗನೆ ಹೊರಟು ಕೆಲಸಕ್ಕೆ ಹೋಗುವವರಿಗೆ ಬೆಳಗಿನ ಪತ್ರಿಕೆ ಓದಲು ಸಾಧ್ಯವಾಗುವುದಿಲ್ಲ. ಅಂತಹ ಸಹಸ್ರಗಟ್ಟಲೆ ಜನರು ಸಂಜೆ ಪತ್ರಿಕೆಗಳನ್ನು ಖರೀದಿಸಿ ಮನೆಗೆ ಕೊಂಡು ಹೋಗುವುದೂ, ಬಸ್ಸುಗಳಲ್ಲಿ ಮನೆಗೆ ಹಿಂತಿರುಗುವಾಗ ಓದುತ್ತಾ ಹೋಗುವುದೂ ಸಾಮಾನ್ಯ ದೃಶ್ಯವಾಗಿರುತ್ತದೆ.

ದೇಶದೆಲ್ಲೆಡೆ ವ್ಯಾಪಿಸುತ್ತಿರುವ ಮಾಹಿತಿ ತಂತ್ರಜ್ಞಾನದ ಕೈಗಾರಿಕೆಗಳು ಕರ್ನಾಟಕದ ಕರಾವಳಿಗೂ ವ್ಯಾಪಿಸುತ್ತಿವೆ. ಬಹುತೇಕ ಸಂದರ್ಭಗಳಲ್ಲಿ ಇವುಗಳಲ್ಲಿ ಪತಿ-ಪತ್ನಿ ಇಬ್ಬರೂ ದುಡಿಯುತ್ತಾರೆ. ಕೈ ತುಂಬಾ ಸಂಬಳ ಮತ್ತು ಉನ್ನತ ಮಟ್ಟದ ಜೀವನ ಶೈಲಿಯನ್ನು ಇಲ್ಲಿ ಕಾಣಬಹುದು. ಆದರೆ ರಾತ್ರಿ ಪಾಳಿಗಳಿಂದಾಗಿ ಇವರ ಕುಟುಂಬ ಜೀವನ ಅಸ್ತವ್ಯಸ್ತವಾಗುತ್ತಿದೆ. ಮಕ್ಕಳು ಹೆತ್ತವರ ಮಮತೆಯಿಂದ ವಂಚಿತರಾಗುತ್ತಾರೆ. ವೈವಾಹಿಕ ಜೀವನದಲ್ಲಿ ಆಗುವ ಘರ್ಷಣೆಗಳು ಹೊಸ ಸಾಮಾಜಿಕ ಅಶಾಂತಿಗಳಿಗೆ ದಾರಿ ಮಾಡಿಕೊಡುವ ಅಪಾಯಗಳಿವೆ.

ಬಿಕ್ಕಟ್ಟಿನಲ್ಲಿ ಪಾರಂಪರಿಕ ಕೈಗಾರಿಕೆಗಳು

ಕರಾವಳಿಯಲ್ಲಿ ಪರಂಪರಾಗತ ಕೈಗಾರಿಕೆಗಳು ಬಿಕ್ಕಟ್ಟಿನಲ್ಲಿವೆ. ಒಂದು ಕಾಲದಲ್ಲಿ ವಿಶ್ವ ಪ್ರಸಿದ್ಧವಾಗಿದ್ದ ಇಲ್ಲಿನ ಹಂಚು ಕೈಗಾರಿಕೆ ನೆಲಕಚ್ಚಿದೆ. ಕೈಮಗ್ಗಗಳು ಇನ್ನು ಮುಂದೆ ವಸ್ತು ಸಂಗ್ರಹಾಲಯಗಳಲ್ಲೂ ನೋಡಲು ಸಿಗಲಾರವು. ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸುವ ಬೀಡಿ ಕೈಗಾರಿಕೆಯ ಮೇಲೆ ಧೂಮಪಾನ ನಿಷೇಧದ ತೂಗುಗತ್ತಿ ನೇತಾಡುತ್ತಿದೆ. ಮೀನುಗಾರಿಗೆ ಕರಾವಳಿಯ ಮುಖ್ಯ ಕಸುಬು. ಲಕ್ಷಗಟ್ಟಲೆ ಕುಟುಂಬಗಳು ಮೀನುಗಾರಿಕೆಯನ್ನೇ ಅವಲಂಬಿಸಿ ಬದುಕುತ್ತಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ವಿದೇಶಿ ಮೀನುಗಾರಿಕಾ ದೋಣಿಗಳಿಗೆ ಭಾರತದ ವ್ಯಾಪ್ತಿಯ ಆಳ ಸಮುದ್ರದಲ್ಲಿ ಮೀನು ಹಿಡಿಯಲು ಅವಕಾಶ ನೀಡಿದ ಪರಿಣಾಮವಾಗಿ ಮತ್ಸ್ಯ ಕ್ಷಾಮ ಸಂಭವಿಸುತ್ತಿದ್ದು ಮೀನುಗಾರರ ಬದುಕು ಅಭದ್ರವಾಗಿದೆ. ಶೇಂದಿ ಇಳಿಸುವ ಮುರ್ತೆದಾರಿಕೆ ಕೂಡಾ ಕರಾವಳಿಯ ಪರಂಪರಾಗತ ಕಸುಬು. ಆದರೆ ಈಗ ಈ ಕಸುಬು ಮಾಯವಾಗುತ್ತಿದೆ.

ದೇಶದ ವಿವಿಧ ಭಾಗಗಳಿಂದಲೂ ವಿದೇಶಗಳಿಂದಲೂ ಬರುತ್ತಿರುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮತ್ತು ವಿವಿಧ ತಾಂತ್ರಿಕ ಶಿಕ್ಷಣಗಳನ್ನು ಒದಗಿಸುವ ಸಂಸ್ಥೆಗಳು ಕರಾವಳಿಯಲ್ಲಿ ವ್ಯಾಪಕವಾಗಿ ಬೆಳೆದಿವೆ. ಆದರೆ ಇವುಗಳು ತುಂಬಾ ದುಬಾರಿಯಾಗಿರುವುದರಿಂದ ಕರಾವಳಿಯ ಜನರ ಮಟ್ಟಿಗೆ 'ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆಹಾಲ' ಎಂಬ ಸರ್ವಜ್ಞನ ವಚನ ಅತ್ಯಂತ ಪ್ರಸ್ತುತವಾಗಿದೆ. ಆದರೆ ಈ ವ್ಯವಸ್ಥೆಯ ಉಪ ಉತ್ಪನ್ನಗಳಾದ ಕಟ್ಟಡ ಕಾರ್ಮಿಕರ ಕೆಲಸ, ಗುಮಾಸ್ತರ ಕೆಲಸ, ಸಿಪಾಯಿಗಳ ಕೆಲಸ, ಕಸ ಗುಡಿಸುವ ಕೆಲಸ ಇತ್ಯಾದಿಗಳು ಕರಾವಳಿಯ ಜನರಿಗೆ ಸಿಗುತ್ತಿರುವುದರಿಂದ ನಿರುದ್ಯೋಗಿಗಳಿಗೆ ಅಷ್ಟರಮಟ್ಟಿಗೆ ಉದ್ಯೋಗಾವಕಾಶ ಸಿಗುತ್ತಿದೆ ಎಂಬುದನ್ನು ಗಮನಿಸಬಹುದು.

ವರದಕ್ಷಿಣೆ – ಜಾತೀಯತೆ – ಕೋಮುವಾದಿ ಪಿಡುಗು

ವರದಕ್ಷಿಣೆಯಿಂದಾಗಿ ಅನೇಕ ಕುಟುಂಬಗಳು ಸರ್ವನಾಶವನ್ನು ಅನುಭವಿಸುತ್ತಿವೆ. ಈ ಪಿಡುಗು ಕರಾವಳಿಗೆ ಸೀಮಿತವಲ್ಲದಿದ್ದರೂ ಇಲ್ಲಿ ಅದರ ತೀವ್ರತೆ ಬಹಳಷ್ಟು ಹೆಚ್ಚಿದೆ. ಕರಾವಳಿಯ ಒಂದು ನಿರ್ಧಿಷ್ಟ ಸಮುದಾಯದಲ್ಲಿ ವರದಕ್ಷಿಣೆಯು ದಶಲಕ್ಷಗಳ ಪ್ರಮಾಣದಲ್ಲಿದೆ. ಪವಿತ್ರವಾದ ವಿವಾಹ ಸಂಬಂಧವನ್ನು ವಾಣಿಜ್ಯೀಕರಿಸುವ ಈ ಕ್ರೂರ ವ್ಯವಸ್ಥೆಯನ್ನು ಎದುರಿಸಲು ಕರಾವಳಿಯ ಯಾವ ಸಾಮಾಜಿಕ ಚಳುವಳಿಗೂ ಸಾಧ್ಯವಾಗಿಲ್ಲ.

ಜಾತೀಯತೆ ಒಂದು ಪಿಡುಗು ಎಂಬುದನ್ನು ನಮ್ಮ ಸಮಾಜದಲ್ಲಿ ಹೆಚ್ಚಿನವರು ಅರ್ಥ ಮಾಡಿಕೊಳ್ಳುವುದಿಲ್ಲ. ರಾಜಕೀಯ ಉದ್ದೇಶಗಳಿಗಾಗಿ ಜಾತೀಯತೆಯನ್ನು ಪೋಷಿಸಿ ಬೆಳೆಸಲಾಗುತ್ತಿದೆ. ದೇಶದ ಇತರ ಭಾಗಗಳಂತೆ ಕರ್ನಾಟಕದ ಕರಾವಳಿಯೂ ಇದಕ್ಕೆ ಹೊರತಾಗಿಲ್ಲ. ಜಾತಿ ಭಾವನೆಯ ಮತ್ತು ಜಾತಿ ಅಭಿಮಾನಗಳ ನೆರಳಲ್ಲೇ ಮ್ಹಾಲಕರಿಂದ ಕಾರ್ಮಿಕರ ಶೋಷಣೆಗಳೂ ಮುಂದುವರಿಯುತ್ತಿವೆ. ಇದರ ಜೊತೆಗೆ ಮತೀಯ ಅಂಧಾಭಿಮಾನವೂ ಇತರ ಮತಾನುಯಾಯಿಗಳನ್ನು ದ್ವೇಷಿಸುವ ಮಟ್ಟಕ್ಕೆ ಬೆಳೆದಿರುವುದು ಇತ್ತೀಚಿನ ವರ್ಷಗಳ ಆತಂಕಕಾರಿ ಬೆಳವಣಿಗೆಯಾಗಿದೆ. ಧಾರ್ಮಿಕ ನಂಬಿಕೆಗಳೂ ಆಹಾರಾಭ್ಯಾಸಗಳೂ ಘರ್ಷಣೆಗಳಿಗೆ ನೆಪವನ್ನು ಒದಗಿಸುತ್ತಿವೆ. ಇಂತಹ ಘರ್ಷಣೆಗಳಿಂದಾಗಿ ದಿನಗಟ್ಟಲೆ ಬಂದ್, ನಿಷೇಧಾಜ್ಞೆ, ಕರ್ಫ್ಯೂ ಇತ್ಯಾದಿಗಳನ್ನು ಕರಾವಳಿಯ ಜನತೆ ಅನುಭವಿಸಬೇಕಾಯಿತು.

ಮಾಫಿಯಾ ಜಾಲ – ನಕ್ಸಲ್ ವಿಕೃತಿ



ಆದಿ ಉಡುಪಿಯಲ್ಲಿ ಸಂಘ ಪರಿವಾರದಿಂದ ಅಲ್ಪಸಂಖ್ಯಾತರ ಮೇಲೆ ನಡೆದ ಅಮಾನವೀಯ ದೌರ್ಜನ್ಯ

ಕರಾವಳಿಯಲ್ಲಿ ಇತ್ತೀಚೆಗೆ ಮಾಫಿಯಾ ಚಟುವಟಿಕೆಗಳು ತೀವ್ರವಾಗುತ್ತಿವೆ. ಸುಧೀರ್ಘವಾದ ಕಡಲ ಕಿನಾರೆ ಮತ್ತು ಬಂದರುಗಳು ಈ ರೀತಿಯ ಚಟುವಟಿಕೆಗಳಿಗೆ ನೆಲೆಯನ್ನು ಒದಗಿಸುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಮಲೆನಾಡಿನಲ್ಲಿ ತಲೆಯೆತ್ತಿ, ಕರಾವಳಿಗೆ ಹರಿದು ಬಂದ ಹೊಸ ಪಿಡುಗು ನಕ್ಸಲ್‌ವಾದ. ಅರಣ್ಯ ಪ್ರದೇಶಗಳಲ್ಲಿ ತಲೆತಲಾಂತರಗಳಿಂದ ಅರಣ್ಯ ಉತ್ಪನ್ನಗಳನ್ನು ಅವಲಂಬಿಸಿ ಬದುಕುತ್ತಿರುವ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಲು ಸರಕಾರವು ನಡೆಸಿದ ಪ್ರಯತ್ನಗಳು ನಕ್ಸಲ್ ಚಟುವಟಿಕೆಗಳಿಗೆ ನೆಲೆ ಒದಗಿಸಿತು. ಬದುಕುವ ಹಕ್ಕನ್ನೇ ಕಳೆದುಕೊಳ್ಳುವ ಭಯದ ವಾತಾವರಣದಲ್ಲಿದ್ದ ಮುಗ್ಧ ಬುಡಕಟ್ಟು ಜನರ ರಕ್ಷಣೆಗೆ ಧಾವಿಸಲು ನಮ್ಮ ಯಾವ ಪ್ರಜಾಸತ್ತಾತ್ಮಕ ಚಳುವಳಿಗೂ ಸಾಧ್ಯವಾಗಲಿಲ್ಲ. ಇಂತಹ ಸನ್ನಿವೇಶದಲ್ಲಿ ಕರಾವಳಿಯ ಕಾರ್ಕಳ ಮತ್ತು ಬೆಳ್ತಂಗಡಿ ತಾಲ್ಲೂಕುಗಳ ಅರಣ್ಯ ಪ್ರದೇಶಗಳಿಗೆ ನುಸುಳಿದ ನಕ್ಸಲೀಯರಿಗೆ ಅಲ್ಲಿನ ಜನರು ಆಶ್ರಯ ನೀಡಿದರು. ಕಡುಬಡತನ, ಭೂಮಾಲಕರಿಂದ ಶೋಷಣೆ ಮತ್ತು ಸರಕಾರದ ದಬ್ಬಾಳಿಕೆಗಳಿಂದ ಒಂದು ವಿಭಾಗದ ಬಡ ಜನರು ಹತಾಶರಾಗುವಾಗ ಅಲ್ಲಿಗೆ ಪ್ರವೇಶಿಸುವ ನಕ್ಸಲೀಯರು ಪರಿಸ್ಥಿತಿಯ ದುರ್ಲಾಭ ಪಡೆಯುತ್ತಾರೆ.

ನಕ್ಸಲ್‌ವಾದ ಒಂದು ಹಾದಿ ತಪ್ಪಿದ ವಿಕೃತ ಸಿದ್ಧಾಂತ. ಪ್ರಭುತ್ವವನ್ನು ಭಯೋತ್ಪಾದನೆಯ ಮೂಲಕ ಭಯಭೀತಗೊಳಿಸಲು ಸಾಧ್ಯವಿಲ್ಲವೆಂಬುದನ್ನು ನಕ್ಸಲೀಯರು ಅರ್ಥ ಮಾಡಿಕೊಳ್ಳುವುದಿಲ್ಲ. ದೇಶದ ಇಂದಿನ ಪರಿಸ್ಥಿತಿಯಲ್ಲಿ ಜನತೆಯ ಜ್ವಲಂತ ಸಮಸ್ಯೆಗಳಿಗೆ ಪ್ರಜಾಸತ್ತಾತ್ಮಕ ಚಳುವಳಿಯಲ್ಲದೆ ಬೇರೆ ದಾರಿಯಿಲ್ಲ. ರಾಜಕೀಯ ಅಧಿಕಾರವು ವಿಶಾಲ ಜನ ಸಮೂಹಗಳ ಪ್ರಜಾಸತ್ತಾತ್ಮಕ ಕಾರ್ಯಾಚರಣೆಯಿಲ್ಲದೆ ಕೇವಲ ಬಂದೂಕಿನ ನಳಿಗೆಯಿಂದ ಹರಿದುಬರುತ್ತದೆ ಎಂಬ ಭ್ರಮೆಗೆ ವಿದ್ಯಾವಂತರೂ ಬುದ್ಧಿಜೀವಿಗಳೆನಿಸಿ ಕೊಂಡವರೂ ಬಲಿಯಾಗುತ್ತಿರುವುದು ಒಂದು ದುರಂತ. ಈ ವಿಕೃತ ಸಿದ್ಧಾಂತಕ್ಕೆ ಹಾಜಿಮಾ, ಪಾರ್ವತಿ, ಸಾಕೇತ ರಾಜನ್‌ರಂಥವರು ವ್ಯರ್ಥ ಬಲಿಯಾದರು. ದೇಶದಲ್ಲಿ 40 ವರ್ಷಗಳ ನಕ್ಸಲ್ ಚಳುವಳಿಯು ಅಸಂಖ್ಯ ಜೀವಗಳನ್ನು ಬಲಿತೆಗೆದುಕೊಂಡಿದೆ. ಸಾಧಿಸಿದ್ದು ಏನೂ ಇಲ್ಲ. ನಕ್ಸಲೀಯರ ಕುರಿತು ಸರಕಾರದ ನೀತಿ ಬದಲಾಗಬೇಕು. ಯಾವ ಕ್ರೂರ ಶೋಷಣೆಯ ವ್ಯವಸ್ಥೆಯಿಂದಾಗಿ ನಕ್ಸಲ್‌ವಾದಿಗಳು ಬೆಳೆಯುತ್ತಿದ್ದಾರೋ, ಆ ವ್ಯವಸ್ಥೆಯನ್ನು ಸರಿಪಡಿಸಲು ಸರಕಾರ ತಕ್ಷಣ ಕಾರ್ಯಪ್ರವೃತ್ತವಾಗಬೇಕು. ನಕ್ಸಲೀಯರನ್ನು ಸಾಯಿಸಿದರೆ ನಕ್ಸಲ್‌ವಾದ ಸಾಯುವುದಿಲ್ಲ. ನಕ್ಸಲೀಯರು ಪ್ರಜಾಪ್ರಭುತ್ವ ಚಳುವಳಿಯ ಮುಖ್ಯವಾಹಿನಿಗೆ ಬಂದು ಅದನ್ನು ಬಲಪಡಿಸುವುದೇ ಇಂದಿನ ತುರ್ತು ಅವಶ್ಯಕತೆಯಾಗಿದೆ.

ಈ ವಿಕೃತಿಗಳ ನಡುವೆಯೂ ಕರಾವಳಿಯ ಜನರಲ್ಲಿ ಅಂಗರ್ತವಾಗಿರುವ ಸಾಮಾಜಿಕ ಮತ್ತು ಪ್ರಜಾಸತ್ತಾತ್ಮಕ ಪ್ರಜ್ಞೆಯು ಮಾನವೀಯ ಮೌಲ್ಯಗಳನ್ನು ರಕ್ಷಿಸಿ ಬೆಳೆಸುತ್ತಿದೆ ಎಂದು ಧೈರ್ಯವಾಗಿ ಹೇಳಬಹುದು.

ಎಡಪಕ್ಷಗಳನ್ನು ದೂಷಿಸುವುದೇಕೆ....?

ಪುಟ 7 ರಿಂದ

ರಾಜಕಾರಣದಲ್ಲಿರುವ ಎಡಪಕ್ಷಗಳ, ಅದರಲ್ಲೂ ಸಿಪಿಐ(ಎಂ) ವಿರುದ್ಧ ಬಹಳಷ್ಟು ಬಲವಾದ ಪೂರ್ವಾಗ್ರಹಗಳಿರುವವರು ಎಂದಿಟ್ಟುಕೊಂಡರೂ ಅವರಿಂದ ಇಂತಹ ವರ್ತನೆಗಳು ಅನಿರೀಕ್ಷಿತವೇ.

ಹಾಗಿದ್ದರೆ ಮೂಲಭೂತ ಕಾರಣಗಳೇನಿರಬಹುದು? ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ಬಲ ಕುಗ್ಗಿದಂತೆ ಕಾಣ ಬರುತ್ತಿರುವಾಗ ಕೋಮುವಾದ-ವಿರೋಧಿ ರಂಗದಲ್ಲಿ ಒಡಕು ಕಾಣಿಸಿಕೊಳ್ಳುವುದು ನಿರೀಕ್ಷಿತವೇ. ಅದೇ ಈಗ ಸಂಭವಿಸಿದೆ ಎನ್ನುತ್ತಾರೆ ಪ್ರಭಾತ್ ಪಟ್ನಾಯಕ್. ಇಂತಹ ಸಂದರ್ಭದಲ್ಲಿ ಈ ಹಿಂದೆ ಪರಿಸ್ಥಿತಿಯ ಒತ್ತಡದಿಂದಾಗಿ ಎಡಪಕ್ಷಗಳ ಜೊತೆಗಿದ್ದವರು ಈಗ ಎಡಪಕ್ಷಗಳನ್ನು ಬದಿಗೊತ್ತಿ ಇಡೀ ಸಮಾಜದ ಮೇಲೆ ತಮ್ಮ ಬೌದ್ಧಿಕ ಆಧಿಪತ್ಯವನ್ನು ಸ್ಥಾಪಿಸಬೇಕೆಂದು ಬಯಸುತ್ತಿದ್ದು ಅದಕ್ಕೆ ಇದೇ ಸುಸಮಯ ಎಂದು ಕಾಣುತ್ತಿರಬಹುದು. ಆದರೆ ಇದರಿಂದ ಕೂಡಾ ಇಂತಹ ವರ್ತನೆಗಳಿಗೆ ಪೂರ್ಣ ವಿವರಣೆ ಸಿಗುವುದಿಲ್ಲ. ನಿಜವಾಗಿ ಇದು ಇನ್ನೂ ಗಂಭೀರವಾದ ಪರಿಸ್ಥಿತಿ ಏರ್ಪಟ್ಟಿರುವುದನ್ನು ಸೂಚಿಸುತ್ತದೆ; ಅದೆಂದರೆ ರಾಜಕೀಯವನ್ನು ಧ್ವಂಸಗೊಳಿಸುವ ಪ್ರಕ್ರಿಯೆ. ಸಾಮ್ರಾಜ್ಯಶಾಹಿ ಜಾಗತೀಕರಣ ಹರಿಯಬಿಟ್ಟಿರುವ ವಿದ್ಯಮಾನವಿದು ಎಂಬುದು ಪ್ರಭಾತ್ ಪಟ್ನಾಯಕ್ ರವರ ವಿಶ್ಲೇಷಣೆ.

ಟೊಳ್ಳು ನೀತಿಬೋಧೆ

ರಾಜಕೀಯ ಎಂದರೆ ಒಂದೆಡೆ 'ಜನತೆ' ಯ ಪಾಳೆಯ, ಇನ್ನೊಂದೆಡೆ ಜನತೆಯ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವವರ ಪಾಳೆಯಗಳನ್ನು ಗುರುತಿಸಿ ಇವೆರಡರ ನಡುವೆ ವ್ಯತ್ಯಾಸ ಕಾಣುವುದು. ಹೀಗೆ ವ್ಯತ್ಯಾಸ ಕಾಣಲಾಗದಿದ್ದರೆ ಅದು ಜನತೆಯ ಶತ್ರುಗಳ ಪಾಳೆಯವನ್ನು ಬಲಪಡಿಸುತ್ತದೆ. ಭಾರತದ ಸಂದರ್ಭದಲ್ಲಿ ಎಡಪಕ್ಷಗಳ ಬಗ್ಗೆ ಕೆಲವು ಎನ್‌ಜಿಒಗಳ, ಬುದ್ಧಿಜೀವಿಗಳ ಮೇರೆ ಮೀರಿದ ಟೀಕೆಗಳು ಇದನ್ನೇ ಮಾಡುತ್ತಿವೆ, ಅಂದರೆ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಬಲಪಡಿಸುತ್ತಿವೆ ಎನ್ನುತ್ತಾರೆ ಪ್ರಭಾತ್ ಪಟ್ನಾಯಕ್.

ಮನಮೋಹನ್ ಸಿಂಗ್ ಹೇಳುತ್ತಾರೆ: "ರಾಜಕೀಯ ಹೊಲಸು, ಅದರಿಂದ ಮೇಲೆದ್ದು ನಿಲ್ಲಿ, 'ಅಭಿವೃದ್ಧಿ'ಯನ್ನು ರಾಜಕೀಯದಿಂದ ಪ್ರತ್ಯೇಕಿಸಿ". ಈ ಸಿಪಿಐ(ಎಂ)-ವಿರೋಧಿ ಬುದ್ಧಿಜೀವಿಗಳೂ ಹೇಳುತ್ತಾರೆ: "ಅಭಿವೃದ್ಧಿಯ ವಿರುದ್ಧ ಹೋರಾಟವನ್ನು ರಾಜಕೀಯದಿಂದ ಪ್ರತ್ಯೇಕಿಸಿ". ಹೀಗೆ ಇವರು ನವ-ಉದಾರ ವಾದ ಹುಟ್ಟುಹಾಕಿದ ಯಾವ "ಅಭಿವೃದ್ಧಿ ಪಂಥ" ವನ್ನು ತಾವು ಪ್ರತಿರೋಧಿಸುತ್ತಿದ್ದೇವೆ ಎನ್ನುತ್ತಾರೋ ವಾಸ್ತವದಲ್ಲಿ ಅದರ ಪ್ರತಿಬಿಂಬವೇ ಆಗುತ್ತಾರೆ. ಇವರು ರಾಜಕೀಯದ ಬಗ್ಗೆ ತುಚ್ಛೀಕಾರ ಪ್ರದರ್ಶಿಸುತ್ತಾರೆ. ತಾವು ಈ 'ಹೊಲಸು' ರಾಜಕೀಯವನ್ನು ಮೀರಿದವರು, ನೀತಿಶೀಖರದಲ್ಲಿ ನಿಂತು ತೀರ್ಪು ನೀಡುವವರು, ನಿಷ್ಪಕ್ಷಪಾತಿಗಳು ಎಂದು ಬೀಗುತ್ತಾರೆ. ಆದರೆ ನಿಜವಾಗಿ ಇದು ಟೊಳ್ಳು, ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ತೂಗಬಯಸುವ ಇವರು ವಾಸ್ತವವಾಗಿ ಯಾವ ಅನ್ಯಾಯವನ್ನೂ ಖಂಡಿಸಿ ದಂತಾಗುವುದಿಲ್ಲ, ಎಲ್ಲವೂ ಕೆಟ್ಟದ್ದು ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಎಡಪಕ್ಷಗಳ ವಿರುದ್ಧ ಇವರ 'ಬಂಡಾಯ' ನಿಜವಾಗಿ 'ರಾಜಕೀಯ'ದ ವಿರುದ್ಧ ಬಂಡಾಯ ಎನ್ನುತ್ತಾರೆ ಪ್ರಭಾತ್ ಪಟ್ನಾಯಕ್. ರಾಜಕೀಯದ ಬಗ್ಗೆ ಈ ತುಚ್ಛೀಕಾರ ಸಾಮ್ರಾಜ್ಯಶಾಹಿ ಜಾಗತೀಕರಣದ ಯುಗದಲ್ಲಿ ಹರಡಿರುವ ಒಂದು ವಿದ್ಯಮಾನ; ಅದು ಜಾಗತೀಕರಣದ ಪ್ರತಿಪಾದಕರನ್ನು ಎಷ್ಟು ತಟ್ಟಿದೆಯೋ, ಅದರ ಈ ಟೀಕಾಕರರನ್ನೂ ಅಷ್ಟೇ ತಟ್ಟಿದೆ.

ಆದರೆ ಎಡಪಕ್ಷಗಳು ಇಂತಹ ನಿಲುವು ತಳೆಯಲು ಸಾಧ್ಯವಿಲ್ಲ. ಏಕೆಂದರೆ ಅವು ಈ ಮೇಲೆ ಹೇಳಿದ ಅರ್ಥದಲ್ಲಿ ರಾಜಕೀಯಕ್ಕೆ ಕೇಂದ್ರಸ್ಥಾನ ನೀಡುತ್ತವೆ. ಜನಗಳನ್ನು ರಾಜಕೀಯವಾಗಿ ಅಣಿನೆರೆಸುವ ಬದಲು ಬೆಟ್ಟದ ತುತ್ತತುದಿಯಲ್ಲಿ ನಿಂತು ಟೊಳ್ಳು ನೀತಿಬೋಧೆಗೆ ಅವು ಇಳಿಯುವುದು ಸಾಧ್ಯವಿಲ್ಲ. ಆದ್ದರಿಂದ ಇಂತಹ ಬುದ್ಧಿಜೀವಿಗಳ ಬಗ್ಗೆ ಎಡಪಕ್ಷಗಳ ನಿಲುವು ಅವರಂತೆ ರಾಜಕೀಯ ಅಂಶವಿಲ್ಲದ ನಿಲುವಾಗಬಾರದು, ರಾಜಕೀಯ ಅಂಶವನ್ನೊಳಗೊಂಡ ನಿಲುವಾಗಬೇಕು ಎಂದು ಪ್ರಭಾತ್ ಪಟ್ನಾಯಕ್ ಹೇಳುತ್ತಾರೆ.

JANASHAKTHI KANNADA VARA PATRIKE DEC. 30, 2007 Price : Rs. 5/- No. KARKAN /2006/17926 Postal Reg. No. RNP/KA/...

ದೆವ್ವ, ಭೂತ, ಬಾನಾಮತಿಯಂತಹ ಮೂಢನಂಬಿಕೆ, ಕಂದಾಚಾರಗಳ ಕುರಿತು ರಾಜ್ಯ ವಿವಿಧೆಡೆ ಜಾಗೃತಿಗಳು ಹೊರಟಿವೆ.

ಭಾನಾಮತಿಗೆ ವಿಜ್ಞಾನದ ಸವಾಲು

ಬಿ.ಎಸ್.ಸೊಪ್ಪಿನ

ಮೂಢನಂಬಿಕೆಗಳು ಜಾಗತಿಕ ವಾಸ್ತವ. ಆದರೆ ಕಾಲ ಮತ್ತು ದೇಶಕ್ಕೆ ಅನ್ವಯಿಸಿದಂತೆ. ಒಂದೇ ನಮೂನೆಯ ಮೂಢನಂಬಿಕೆಗಳು ಇರಲಾರವು. ವಿಜ್ಞಾನ ಬೆಳೆದಂತೆ ಸಮಾಜ ಆಧುನಿಕಗೊಂಡಂತೆ ಜನರಲ್ಲಿ ವೈಚಾರಿಕತೆ ವೃದ್ಧಿಯಾಗಿ ಮುಂದುವರೆದ ದೇಶಗಳಲ್ಲಿ ಮೂಢನಂಬಿಕೆಗಳ ತೀವ್ರತೆ ಕಡಿಮೆ ಆಗಿದೆ. ಆದರೆ ಭಾರತೀಯ ಸಮಾಜದ ಪರಿಸ್ಥಿತಿ ಮಾತ್ರ ಇದಕ್ಕೆ ವ್ಯತಿರಿಕ್ತವಾಗಿಯೆ ಉಳಿದಿದೆ. ಮಾಟ, ಮಂತ್ರ,ಮೂಢನಂಬಿಕೆಗಳು, ಅರ್ಥವಿಲ್ಲದ ಆಚರಣೆಗಳು ಗೊಡ್ಡು ಸಂಪ್ರದಾಯಗಳಿಗೆ ಇದು ಫಲವತ್ತಾದ ನೆಲವಾಗಿದೆ. ಕಾಲಕಾಲಕ್ಕೆ ನಮ್ಮ ಸಮಾಜ ಸುಧಾರಕರು, ವಿಚಾರವಾದಿಗಳು ಇಂಥ ಆಚರಣೆಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಅವುಗಳ ನಿರ್ಮೂಲನಕ್ಕೆ ಹೋರಾಡಿದ್ದಾರೆ. ಸತಿ ಸಹಗಮನ,ಬಾಲ್ಯ ವಿವಾಹಗಳು, ಸ್ತ್ರೀ ಶಿಶು ಹತ್ಯೆ ಮುಂತಾದ ಅರ್ಥವಿಲ್ಲದ ಆಚರಣೆಗಳು ಇದ್ದವು ಎಂಬುದನ್ನು ಜ್ಞಾಪಿಸಿಕೊಂಡರೆ ನಮ್ಮ ಸಮಾಜ ಎಷ್ಟು ಅನಾಗರಿಕವಾಗಿತ್ತು ಎಂಬುದರ ಕಲ್ಪನೆಯಾಗುತ್ತದೆ. ಇಂದು ಇಂಥ ಕೆಲವು ಆಚರಣೆಗಳು ನಿಂತಿರಬಹುದಾದರೂ, ಅಪಾಯಕಾರಿ ಮೂಢ ನಂಬಿಕೆಗಳು ಇನ್ನೂ ಜೀವಂತವಾಗಿ ಉಳಿದುಕೊಂಡಿವೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಂಜಾಬದಿಂದ ಆಸ್ಸಾಮದವರೆಗೆ ಸಂಚರಿಸಿದರೆ ವೈವಿಧ್ಯಮಯ ಮೂಢನಂಬಿಕೆಗಳ ಪರಿಚಯ ನಮಗಾಗುವುದು.

ಮೂಢನಂಬಿಕೆಗೆ ಒಳಗಾಗುವವರು ಯಾರು?

ಸಾಮಾನ್ಯವಾಗಿ ಬಡವರು, ಅನಕ್ಷರಸ್ಥರು, ಮೂಢನಂಬಿಕೆಗಳ ಒಡೆಯರು ಎಂದೆನ್ನಿಸಿದರೂ ಸುಶೀಕ್ಷಿತರು ಈ ಮಾತಿಗೆ ಹೊರತಲ್ಲ. ಒಟ್ಟಾರೆ ದುರ್ಬಲ ಮನಸ್ಸಿನವರು ಮೂಢನಂಬಿಕೆಗಳಿಗೆ ಒಳಗಾಗುವುದು ಸತ್ಯ. ಮಂತ್ರ, ತಂತ್ರ ಹಾಗೂ ವಿಶೇಷ ಪೂಜೆ, ಆರಾಧನೆಗಳ ಮೂಲಕ ದೈವೀಶಕ್ತಿಯ ವಶೀಕರಣ ಮಾಡಿಕೊಳ್ಳುವುದು ಎಂದು ಜನರನ್ನು ನಂಬಿಸಲಾಗುತ್ತದೆ. ಇನ್ನೊಬ್ಬರಿಗೆ ಕೇಡು ಬಗೆಯಲು ಈ ಶಕ್ತಿಯನ್ನು ಪ್ರಯೋಗಿಸಲಾಗುತ್ತಿದೆ ಎಂದು ಹೇಳಲಾಗುತ್ತದೆ. ಈ ಕ್ರಿಯೆಗಳನ್ನು ಭಾನಾಮತಿ ಹೆಸರಿನಲ್ಲಿ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ವ್ಯಾಪಕವಾಗಿ ಮಾಡಲಾಗುತ್ತದೆ.

ಭಾನಾಮತಿ ಎಂದರೇನು?

ಎರಡು ಉರ್ದುಪದಗಳು ಬಹನಾ-ನೆಪ ಮತಿ-ಬುದ್ಧಿ ಒಟ್ಟು ಸೇರಿ ಭಾನಾಮತಿ ಆಗಿದೆ. ಭಾನಾಮತಿ ಎಂದರೆ ಏನಾದರೂ ನೆಪಮಾಡಿ ಬುದ್ಧಿಯನ್ನು ಕೆಡಿಸುವುದು. ಮಂತ್ರ, ಮಾಟ, ತಾಯತ, ಬೂದಿ ಮುಂತಾದವುಗಳ ಮೂಲಕ ಜನರಲ್ಲಿ ನೆಮ್ಮದಿ ಕದಡಿ, ಅವರಲ್ಲಿ ಭ್ರಮೆ ಹುಟ್ಟಿಸಿ ಕೆಡುಕು ಮಾಡುವುದೆ ಆಗಿದೆ. ಹೈದರಾಬಾದ್ ನಿಜಾಮನ ಆಡಳಿತದಲ್ಲಿ ಭಾನಾಮತಿ ನಿಯಂತ್ರಣಕ್ಕೆ ಒಂದು ರಕ್ಷಣಾ ಪಡೆ ರಚನೆಯಾಗಿತ್ತು ಎಂಬುದು ಇತಿಹಾಸದಿಂದ ತಿಳಿಯುತ್ತದೆ ಮತ್ತು ಸಮಸ್ಯೆಯ ಗಂಭೀರತೆಯೂ ಅರ್ಥವಾಗುತ್ತದೆ.

ಬೇರೆಯವರಿಗೆ ಕೆಡುಕು ಮಾಡುವ ಏಕೈಕ ಉದ್ದೇಶದಿಂದಲೆ ಭಾನಾಮತಿಯನ್ನು ಮಾಡಲಾಗುತ್ತದೆ. ಮಂತ್ರ, ಮಾಟದ ಹೆಸರಲ್ಲಿ ವ್ಯಕ್ತಿಗೆ ಕಿರುಕುಳ ನೀಡುವುದು ನಿಧಿಗಾಗಿ ಅಥವಾ ದೆವ್ವ ಬಿಡಿಸಲು ಮಕ್ಕಳನ್ನು ಬಲಿಕೊಡುವುದು, ಮನೆಯ ಮೇಲೆ ಕಲ್ಲು ಬೀಳುವುದು, ಬಟ್ಟೆ ಅಥವಾ ಇತರ ವಸ್ತುಗಳಿಗೆ ಬೆಂಕಿ ಹತ್ತಿಕೊಳ್ಳುವುದು, ಮೈಮೇಲೆ ಕೇರ ಬೀಳುವುದು ಇವೆ ಮುಂತಾದ ಕ್ರಿಯೆಗಳು ನಡೆಯುತ್ತವೆ. ಭಾನಾಮತಿಯನ್ನು ಕೇವಲ ಮನುಷ್ಯರ ಮೇಲಷ್ಟೆ ಅಲ್ಲ ಪ್ರಾಣಿ ಅಥವಾ ವಸ್ತುಗಳ ಮೇಲೂ ಪ್ರಯೋಗಿಸಲಾಗುತ್ತದೆ. ಭಾನಾಮತಿ ಮಾಡುವವರಿಗೆ ಕೇರಾಮತಿ ಮಾಡುವದು ಅಂದರೆ ಅದರ ನಿವಾರಣೋಪಾಯ ತಿಳಿದಿರುತ್ತದೆ ಎನ್ನಲಾಗುತ್ತದೆ. ಈ ಎರಡೂ ಸಂದರ್ಭಗಳಲ್ಲಿ ಸಾಕಷ್ಟು ದುಡ್ಡು ದೋಚಲಾಗುತ್ತದೆ.

ಗುಲಬರ್ಗಾ ಮತ್ತು ಬೀದರ ಜಿಲ್ಲೆಗಳಲ್ಲಿ ಭಾನಾಮತಿ ವ್ಯಾಪಕವಾಗಿ ಆಚರಣೆಯಲ್ಲಿರುವುದನ್ನು ಗಮನಿಸಿ, ಕರ್ನಾಟಕ ಸರಕಾರ 80 ರ ದಶಕದಲ್ಲಿ ಡಾ.ಎಚ್.ನರಸಿಂಹಯ್ಯ ನೇತೃತ್ವದಲ್ಲಿ ಒಂದು ಸದನ ಸಮಿತಿಯನ್ನು ರಚಿಸಿತು. ಡಾ. ಸಿ.ಆರ್.ಚಂದ್ರಶೇಖರಂತಹ ಮನೋವಿಜ್ಞಾನಿಗಳನ್ನೊಳಗೊಂಡ ಈ ಸದನ ಸಮಿತಿ ಈ ಭಾಗದಲ್ಲಿ ಸಂಚಾರ ಮಾಡಿ ಹಲವಾರು ಪ್ರಕರಣಗಳ ಅಧ್ಯಯನ ಮಾಡಿದೆ. "ಸಾಮಾನ್ಯವಾಗಿ ಎಲ್ಲರಿಗೂ ಬರುವ ದೈಹಿಕ ಹಾಗೂ ಮಾನಸಿಕ ಕಾಯಿಲೆಗಳಿಂದಲೆ ಭಾನಾಮತಿಗೆ ಒಳಗಾದವರು ಅನುಭವಿಸುತ್ತಿರುವದು ಬೇರೆ ವಿಶೇಷವೇನು ಇಲ್ಲ" ಎಂದು ವರದಿ ತಿಳಿಸಿತು.



ಕೊಂಡ ಹಾಯುತ್ತಿರುವುದು - ಇದು ಪವಾಡವಲ್ಲ

ಭ್ರಮೆ

ಭಾನಾಮತಿ ಒಂದು ದೈವಿ ಶಕ್ತಿಯಿಂದ ನಡೆಯುತ್ತದೆಂದು ನಂಬಿಸಲಾಗುತ್ತದೆ. ಭಾನಾಮತಿ ಮಾಡುವಾಗ ಅಥವಾ ತೆಗೆಯುವಾಗ ನಡೆಸುವ ವಿಶೇಷ ಪೂಜೆ, ರಂಗ ಹೊಯ್ಯುವುದು ಹೊಗೆ ಹಾಕುವುದು ಮುಂತಾದ ಕ್ರಿಯೆಗಳಿಂದ ಜನ ಹಾಗೆ ಭಾವಿಸುವದು ಸಹಜ. ಆದರೆ ಇದರ ಹಿಂದೆ ಅಂತಹ ಯಾವದೆ ಶಕ್ತಿ ಇಲ್ಲ. ಇದೊಂದು ಕೈಚಳಕ ಅಷ್ಟೆ. ಕೆಲವು ಸಲಕರಣೆಗಳಿಂದ ನಡೆಸುವ ಈ ಕ್ರಿಯೆಗಳು ವ್ಯಕ್ತಿಯ ಮಾನಸಿಕ ನೆಮ್ಮದಿ ಹಾಳುಮಾಡಿ ತನಗೇನೂ ಆಗಿದೆ ಎಂಬ ಭ್ರಮೆಯಲ್ಲಿ ಆತನು ಬೀಳುವಂತೆ ಮಾಡುತ್ತದೆ. ಭಾನಾಮತಿ ಒಂದು ಸಾಮಾಜಿಕ ಪಿಡುಗು. ಇದೊಂದು ಮಾನವ ವಿರೋಧಿ, ಜೀವವಿರೋಧಿ ಆಚರಣೆ ಆಗಿದೆ. ಪ್ರಚಲಿತ ಕಾನೂನಿನ ಪರಿಧಿಗೆ ಈ ಘಟನೆಗಳು ಬರುವದೆ ಇಲ್ಲ. ಹೀಗಾಗಿ ವಂಚಕರನ್ನು ಶಿಕ್ಷಿಸುವದು ಕಷ್ಟ. ಜನರಲ್ಲಿ ಅರಿವು ಮೂಡಬೇಕು. ಅದೆ ಭಾನಾಮತಿ ನಿರ್ಮೂಲನೆಗೆ ಮದ್ದು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜನರಲ್ಲಿ ವೈಜ್ಞಾನಿಕ ಜಾಗೃತಿ ಮೂಡಿಸುವ ಪ್ರಯತ್ನಿಸುತ್ತಿರುವ ಒಂದು ಸ್ವಯಂಸೇವಾ ಸಂಸ್ಥೆ. ಈ ವರ್ಷ ಭಾನಾಮತಿ ನಿರ್ಮೂಲನೆಗೆ ಒಂದು ಜನಾಂದೋಲನ ನಡೆಸಲು ಯೋಜನೆ ರೂಪಿಸಿತು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಬಿ.ಎಸ್.ಸೊಪ್ಪಿನ ಅವರ ಅಧ್ಯಕ್ಷತೆಯಲ್ಲಿ ಒಂದು ಭಾನಾಮತಿ ನಿರ್ಮೂಲನಾ ಆಂದೋಲನಾ ಸಮಿತಿ ರಚಿತವಾಯಿತು. ಎಸ್.ಬಿ.ಹಳ್ಳಿ (ರಾಮದುರ್ಗ) ಡಾ. ಅಶೋಕ ಜೀವಣಗಿ (ಗುಲಬರ್ಗಾ) ಎಚ್.ಆರ್.ಸ್ವಾಮಿ (ಹಾಸನ) ಅವರು ವಲಯ ಸಂಚಾಲಕರಾಗಿ ಹಾಗೂ ಇತರರು ಸಮಿತಿ ಸದಸ್ಯರಾಗಿ ನಿಯುಕ್ತಗೊಂಡರು. ಮೊದಲ ಪ್ರಯೋಗವಾಗಿ ಬೀದರ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಈ ಆಂದೋಲನ ನಡೆಸಲು ನಿರ್ಧರಿಸಲಾಯಿತು. ಭಾರತ ಜ್ಞಾನ ವಿಜ್ಞಾನ ಸಮಿತಿ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜಂಟಿಯಾಗಿ ಈ ಕಾರ್ಯಕ್ರಮ ಮಾಡಲು ಮುಂತಾದವು. ಬೀದರ ಜಿಲ್ಲೆಯಲ್ಲಿ ಬಾಬುರಾವ ದಾನಿ ಮತ್ತು ಎಂ.ಎಸ್.ಮನೋಹರ, ಗುಲಬರ್ಗಾ ಜಿಲ್ಲೆಯಲ್ಲಿ ಡಾ.ಅಶೋಕ ಜೀವಣಗಿ ಮತ್ತು ಶಿವಶರಣ ಮೊಳೆಗಾಂವ ಹಾಗೂ ಮೆಹರಾಜ ಪಟೇಲ ಆಂದೋಲನದ ಕರ್ಣಧಾರತ್ವ ವಹಿಸಿಕೊಂಡಿದ್ದಾರೆ. ಪವಾಡ ರಹಸ್ಯ ಬಯಲು, ಮಹಿಳಾ ಸಮಾವೇಶ ಉಪನ್ಯಾಸಗಳು, ವೈದ್ಯಕೀಯ ಕ್ಯಾಂಪ ಹಾಗೂ ಕಲಾಜಾಥಾ ಜನಾಂದೋಲನದ ಪ್ರಮುಖ ಕಾರ್ಯಕ್ರಮಗಳಾಗಿವೆ. ಪವಾಡ ರಹಸ್ಯಾ ಬಯಲು ಕಾರ್ಯಕ್ರಮ ನೀಡಲು ಒಂದು ಕಾರ್ಯಪಡೆ ರಚಿಸಲಾಗಿದೆ. ಡಾ.ನರೇಂದ್ರ ನಾಯ್ಕರಿಂದ ಇವರಿಗೆ ತರಬೇತಿಯನ್ನು ಕೊಡಿಸಲಾಗಿದೆ. ಕೆ.ನೀಲಾ, ಡಾ.ಮೀನಾಕ್ಷಿ ಬಾಳಿ, ಶಾಂತಕ್ಕ ಮಠ ಮಹಿಳಾ ಸಮಾವೇಶ ಸಂಘಟಿಸುವ ಹೊಣೆಗಾರಿಕೆ ಹೊತ್ತುಕೊಂಡಿದ್ದಾರೆ. ಪ್ರೊ.ಆರ್.ಕೆ.ಹುಡಿಗಿ, ಪ್ರೊ.ಲಿಂಗಪ್ಪ, ಎಂ.ಎಸ್.ಮನೋಹರ, ಅಶೋಕ ಶಟಕಾರ ಹಾಗೂ ರಾಘವೇಂದ್ರ ಹಳಿಪೇಠ ಕಲಾ ತಂಡವನ್ನು ತರಬೇತುಗೊಳಿಸುವ ಮತ್ತು ಜಾಥಾ ಮುನ್ನಡೆಸುವಲ್ಲಿ ಶ್ರಮಿಸಿದ್ದಾರೆ. ಪ್ರೊ. ಎಚ್.ಸಿ.ಪಾಟೀಲ್, ಚಂದ್ರಪ್ಪ ಹೆಬ್ಬಾಳಕರ, ಶಿವಕುಮಾರ ಕಟ್ಟೆ ಕೋದಂಡರಾಮಯ್ಯ ಮುಂತಾದವರು ಸಂಘಟನೆಯ ಜವಾಬುದಾರಿ ನಿರ್ವಹಿಸಿದ್ದಾರೆ.

ಜನ ಜಾಗೃತಿ ಜಾಥಾ

ಜಾಥಾ ಉದ್ಘಾಟನೆ: ದಿನಾಂಕ 10-12-07 ರಂದು ಬೀದರ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಕಲಾ ಜಾಥಾ ಉದ್ಘಾಟನೆಯಾಗಿದೆ. ಗುಲಬರ್ಗಾ ಜಿಲ್ಲೆಯ ಗೊಬ್ಬೂರ ಗ್ರಾಮದಲ್ಲಿ ಮಾಜಿ ಶಾಸಕ ಎಂ.ವೈ.ಪಾಟೀಲ ಜಾಥಾ ಉದ್ಘಾಟಿಸಿದರು. ವೇದಿಕೆಯ ಮೇಲೆ ಗ್ರಾಮ ಪಂಚಾಯತ ಅಧ್ಯಕ್ಷ, ತಾಲೂಕ ಪಂಚಾಯತ ಸದಸ್ಯರು, ಮಾಜಿ ಜಿ.ಪಂ.ಸದಸ್ಯ, ಅಫಜಲಪುರ ತಾಲೂಕಾ ತಹಶೀಲ್ದಾರ ಉಪಸ್ಥಿತರಿದ್ದರು. ಭಾನಾಮತಿ ನಿರ್ಮೂಲನಾ ಆಂದೋಲನ ಸಮಿತಿ ಅಧ್ಯಕ್ಷ ಬಿ.ಎಸ್. ಸೊಪ್ಪಿನ ಅಧ್ಯಕ್ಷತೆ ವಹಿಸಿದ್ದರು. "ಸಮಾಜದ ಅಭಿವೃದ್ಧಿ ದೃಷ್ಟಿಯಿಂದ ಮೂಢನಂಬಿಕೆಗಳು ನಿರ್ಮೂಲನೆಗೊಳ್ಳುವದು ಅವಶ್ಯ" ಎಂದು ಉದ್ಘಾಟಕರು ಹೇಳಿದರು.

ಇದೇ ಸಂದರ್ಭದಲ್ಲಿ ಜನಶಕ್ತಿ ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ ಮಾತನಾಡಿ "ಮೂಢನಂಬಿಕೆಗಳು ನಮ್ಮ ಪ್ರಗತಿಗೆ ಆತಂಕಕಾರಿಯಾಗಿದೆ" ಭಾನಾಮತಿ ನಂಬುವ ಸ್ಥಿತಿಯ ಹಿಂದೆ ಆರ್ಥಿಕ-ಸಾಮಾಜಿಕ ಹಿಂದುಳಿದಿರುವಿಕೆ, ಅಂಶಗಳು ನೆಲೆಯಾಗಿವೆ' ಎಂದು ತಿಳಿಸಿದರು. ನಂತರ ಕಲಾವಿದರಿಂದ "ಭಾನಾಮತಿ ಭಾನಗಡಿ ಪುರಾಣ" ಎಂಬ ನಾಟಕ ಪ್ರದರ್ಶಿಸಲ್ಪಟ್ಟಿತು.

ಅದೇ ದಿನ ಸಾಯಂಕಾಲ ಬೀದರನಲ್ಲಿ ಕಲಾ ಜಾಥಾ ಉದ್ಘಾಟನೆ ಆಯಿತು. ಶೈನ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ವಿಧಾನ ಪರಿಷತ್ತು ಸದಸ್ಯರಾದ ಖಾಜಿ ಅರ್ಷದ ಅಲಿ ಕಲಾ ಜಾಥಾ ಉದ್ಘಾಟಿಸಿ ಮಾತನಾಡಿದರು. 80 ರ ದಶಕದಲ್ಲೆ ಎಚ್.ನರಸಿಂಹಯ್ಯ ನೇತೃತ್ವದ ಸಮಿತಿ ವರದಿ ಕೊಟ್ಟಿದ್ದರೂ ಇಲ್ಲಿಯವರೆಗೆ ಸಕಾರಾತ್ಮಕ ಕ್ರಮ ಕೈಕೊಳ್ಳದಿರುವುದು ವಿಷಾದನೀಯ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಸ್ಥೆಯ ಕಾರ್ಯದರ್ಶಿ ಅಬ್ದುಲ್ ಖಾದ್ರಿ ಮಾತನಾಡಿ "ಬ್ಲೇಡ್ ಬಾಬಾ ನಂತಹ ನಯವಂಚಕರು ಎಲ್ಲ ಕಡೆಗಳಲ್ಲಿ ಎಲ್ಲ ವರ್ಗಗಳಲ್ಲಿ ಕಾಣಸಿಗುತ್ತಾರೆ. ಅವರ ವಂಚನೆ ಬಯಲು ಮಾಡಬೇಕು ಎಂದರು. ಜಿ.ಪಂ.ಅಧ್ಯಕ್ಷರಾದ ಶ್ರೀಮತಿ ಜಯಶೀಲಾ ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ನಂತರ ಜೇಸುದಾಸರಿಂದ ನಡೆದ ಪವಾಡು ಬಯಲು ಕಾರ್ಯಕ್ರಮ ಜನರ ಗಮನ ಸೆಳೆಯಿತು. ದಿನಾಂಕ 11 ರಿಂದ 20ರ ವರೆಗೆ ಜಿಲ್ಲೆಯ 20 ಸ್ಥಳಗಳಿಗೆ ಜಾಥಾ ಸಂಚರಿಸಿ ಕಾರ್ಯಕ್ರಮ ನೀಡಲಾಯಿತು.



ಜನರತ್ತ ಹೊರಟ ಕಲಾವಿದರು

ಒಟ್ಟಾರೆ ಅನೇಕ ಕೊರತೆಗಳ ಮಧ್ಯದಲ್ಲಿ ಕಾರ್ಯಕ್ರಮ ಗ್ರಾಮೀಣ ಜನರ ಗಮನ ಸೆಳೆಯುವಲ್ಲಿ ಯಶ ಕಂಡಿದೆ. ಜಾಥಾ ಹೊರಡುವ ಪೂರ್ವದಲ್ಲಿ ಸಾಕಷ್ಟು ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿತ್ತು. ಪೆರಿಯಾರ ತಂಡ (ತಮಿಳುನಾಡು)ಜುಲೈ ತಿಂಗಳಲ್ಲಿ ನೀಡಿದ ಸಿಡಿ ಹೊಡೆಯುವ ಅಂದರೆ ಲೋಹದ ಹುಕ್ಕಗಳನ್ನು ಬೆನ್ನಿಗೆ ಸಿಕ್ಕಿಸಿಕೊಂಡು ಕಾರು ಎಳೆಯುವದು ಅಸ್ತ್ರ ಹಾಕುವದು ಹಾಗೂ ಕಂಬಕ್ಕೆ ನೇತು ಹಾಕುವದು ಮುಂತಾದ ಕ್ರಿಯೆಗಳು ಜನರನ್ನು ಚಿಂತನೆಗೆ ಹಚ್ಚಿವೆ. ಇವು ಯಾರಾದರೂ ಮಾಡಬಹುದಾದ ಚಟುವಟಿಕೆಗಳು ಎಂಬುದು ಸಾಬೀತಾಗಿದೆ. ಅಲ್ಲದೆ ಭಾನಾಮತಿ ನಿರ್ಮೂಲನಾ ಆಂದೋಲನ ಸಮಿತಿ ಸದಸ್ಯರು ನರೇಂದ್ರ ನಾಯ್ಕ ನೇತೃತ್ವದಲ್ಲಿ ಒಂದೆರಡು ಗ್ರಾಮಗಳಿಗೆ ತೆರಳಿ, ಭಾನಾಮತಿಗೆ ಒಳಗಾದ ಒಂದೆರಡು ಪ್ರಕರಣಗಳ ಅಧ್ಯಯನ ಮಾಡಿತು. ಮಹಿಳೆ ತನ್ನಷ್ಟಕ್ಕೆ ತಾನೆ ಮೈಮೇಲೆ ಕೇರು ಹಾಕಿಕೊಂಡದ್ದು ಸಾಬೀತು ಆಯಿತು. ಕೌಟುಂಬಿಕ ಸಮಸ್ಯೆಗಳು ಕೆಲವು ಸಲ ಜನರನ್ನು ಇಂಥ ಪ್ರವೃತ್ತಿಗೆ ತಳ್ಳುತ್ತದೆ ಎಂಬುದು ತಿಳಿದು ಬರುತ್ತದೆ.

ಒಂದು ಮಾತು ಸ್ಪಷ್ಟ ಅದೇನೆಂದರೆ "ಜನರು ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳುವದು ತೀರಾ ಅಗತ್ಯ".

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE 560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE 560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH